Further, informed that, they have approached Water Resource Department for permission to draw 34 MLD of water from downstream of Lower Mullamari River of Karanja dam to supply of water and the process of approval is under progress.

For the above said reasons, the company has requested to grant an extension of time of 5 years (existing validity of the approval expired on 18-05-2010) to obtain all other clearances and to implement the project. The Company further requested to grant the incentives and concessions as per the Karnataka new Industrial Policy 2009-14.

The independent power projects are eligible for exemption from payment of stamp duty and registration charges under new industrial policy 2009-14. Accordingly, Government Order was issued by Energy Department vide No. EN 95 EBS 2009 dated 29-12-2009, followed by a circular dated 01-02-2011 from commerce and Industries Department.

In the 25th State High Level Clearance Committee (SHLCC) Meeting held on 14-07-2011, the proposal of the Company was discussed and approved.

Government has examined the recommendations made by the State High Level Clearance Committee in the 25th Meeting held on 14-07-2011, in all aspects.

Hence the following order.

GOVERNMENT ORDER NO. CI 204 SPI 2011, BANGALORE, DATED 27-08-2011.

In the circumstances explained in the preamble, Government is pleased to accord approval for following:-

i.. Extension of time for implementation of the project by 3 years from the date of issue of this Government Order.

ii. Incentives and concessions as per applicable Energy Department Notification.

Other terms and conditions, remains same as in the G.O. read at (1) above.

By Order and in the name of the Governor of Karnataka,

A.V. SRINIVASA DIKSHIT

Desk Officer (Technical Cell)

P.R.2290 Commerce & Industries Department

COMMERCE AND INDUSTRIES SECRETARIAT

Sub : Visit of Karnataka delegation to Chicago and New York-reg

Read : Minutes of the Screening Committee meeting held on 15-09-2011.

Preamble:

The two High Level delegations, one lead by Hon'ble Chief Minister and another by Hon'ble Minister for Large & Medium Industries are visting New York and Chicago to participate in 8th Annual India Investment Forum, New York and to participate in the US-India Economic Opportunity and Synergy Summit at Chicago from 17th to 25th September 2011. It is felt that Smt. T.K. Swaroopa, Joint Director, Karnataka Udyog Mitra and Sri M.N. Pradeep Kumar, Assistant Director, Karnataka Udyog Mitra are required to travel with delegations to Chicago and New York for making arrangements and participation in the Investors Meet.

The Screening Committee has cleared for their inclusion in the delegation.

Hence the following order.

Government Order No. CI 1 SPI 2011, Bangalore, Dated 15/09/2011

Under the above circumstances, sanction is hereby accorded to depute Smt. T.K. Swaroopa, Joint Director, Karnataka Udyog Mitra and Sri M.N. Pradeep Kumar, Assistant Director, Karnataka Udyog Mitra to accompany the delegations lead by Hon'ble Chief Minister and by Hon'ble Minister for Large and Medium Industries to participate in 8th Annual income Investment Forum, New York and to participate in the US-India Economic Opportunity and Synergy Summit at Chicago from 17th to 25th September 2011.

The expenditure in this behalf will be borne by the State Government.

By Order and in the name of the Governor of karnataka

A.V. Srinivasa Dikshit

Desk Officer (Technical Cell)

P.R. 2291 Commerce & Industries Department

ವಸತಿ ಸಚಿವಾಲಯ

ವಿಷಯ : ಕೇಂದ್ರ ಪುರಸ್ಕೃತ ನರ್ಮ್ ಯೋಜನೆಯ ಐಹೆಚ್ಎಸ್‌ಡಿಪಿ ಯೋಜನೆ–ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ : 1. ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರ ಪತ್ರಗಳ ಸಂಖ್ಯೆ: ಕಕೊನಿಮ/ಲೆ.ಪ.ಶಾ.ನರ್ಮ್/ ಐಹೆಚ್ಎಸ್‌ಡಿಪಿ/2011–12 ದಿನಾಂಕ: 04–08–2011.

2. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ: FD 13 BGL 2010, ದಿನಾಂಕ: 01–06–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರು ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ (IHSDP) ರಾಜ್ಯದ್ಯಂತ ವಿವಿಧ 34 ನಗರ ಪಟ್ಟಣಗಳಲ್ಲಿ ಹಂತ–1 ಮತ್ತು 2ರಲ್ಲಿ ಒಟ್ಟು 17237 ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಕೇಂದ್ರ ಸರ್ಕಾರವು ಉಲ್ಲೇಖ (2)ರ ಜಮಾ ದೃಢೀಕರಣ ಪತ್ರದಲ್ಲಿ ರೂ. 2211.36 ಲಕ್ಷಗಳ 2ನೇ ಕಂತಿನ ಅನುದಾನದ ಶೇಕಡ 50% ರಷ್ಟು ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿರುತ್ತದೆ. ಸದರಿ ಮೊತ್ತವು 10 ವಿವಿಧ ನಗರ/ಪಟ್ಟಣಗಳಿಗೆ (ಶಿರಾ, ಹುಬ್ಬಳ್ಳಿ, ಹುಬ್ಬಳ್ಳಿ–ಹಂತ–2, ಹುಬ್ಬಳ್ಳಿ–ಹಂತ–3, ಶಿವಮೊಗ್ಗ, ಶಿಕಾರಿಪುರ, ಬಾಗಲಕೋಟೆ, ಕನಕಪುರ, ಪಾವಗಡ, ಸಿಂಧನೂರ್) ಸಂಬಂಧಿಸಿದಂತೆ ಬಿಡುಗಡೆ ಮಾಡಿರುತ್ತದೆ. ಈಗಾಗಲೇ 14 ನಗರ/ಪಟ್ಟಣಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ರೂ. 1781.77 ಲಕ್ಷಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರದ ವಂತಿಗೆ ರೂ. 1361.45 ಲಕ್ಷಗಳನ್ನು ಹಾಗೂ 10 ನಗರ/ಪಟ್ಟಣಗಳಿಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಲಾಗಿರುವ 2ನೇ ಕಂತಿನ ಶೇಕಡ 50 ರಷ್ಟು ಅನುದಾನ ರೂ. 2211.36 ಲಕ್ಷಗಳಿಗೆ ಅನುಗುಣವಾಗಿ ರೂ. 3683.10 ಲಕ್ಷಗಳನ್ನು ಅಂದರೆ ಒಟ್ಟು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಮೊತ್ತ ಒಟ್ಟಾರೆ (2211.36+2833.19) ರೂ. 5044.55 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 12 ಕೊಮಂಲೆ 2009, ಬೆಂಗಳೂರು, ದಿನಾಂಕ : 13–09–2011.

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2011–12ನೇ ಸಾಲಿನಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (ಐಹೆಚ್‌ಎಸ್‌ಡಿಪಿ) ಯೋಜನೆಯಡಿಯಲ್ಲಿ 10 ನಗರ/ಪಟ್ಟಣಗಳಿಗೆ ಕೇಂದ್ರದ 2ನೇ ಕಂತಿನ ಅನುದಾನದ ಶೇಕಡ 50% ಅನುದಾನ ರೂ. 2211.36 ಹಾಗೂ ರಾಜ್ಯ ಸರ್ಕಾರದ ಪಾಲಿನ ಉಳಿದ ಮೊತ್ತ ರೂ. 1706.87 ಹೀಗೆ ಒಟ್ಟು ರೂ 3918.23 ಲಕ್ಷಗಳನ್ನು (ರೂಪಾಯಿ ಮೂವತ್ತೊಂಭತ್ತು ಕೋಟಿ ಹದಿನೆಂಟು ಲಕ್ಷ ಇಪ್ಪತ್ತುಮೂರು ಸಾವಿರಗಳು ಮಾತ್ರ) ಬಿಡುಗಡೆ ಮಾಡಿದ್ದು, ಸದರಿ ಮೊತ್ತವನ್ನು ಆಯವ್ಯಯ ಲೆಕ್ಕಶೀರ್ಷಿಕೆ "2217–04–191–2–03 (ಯೋಜನೆ)" ಯಡಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ಕಾಲಕಾಲಕ್ಕೆ ಕೇಂದ್ರದಿಂದ ಹೊರಡಿಸುವ ಸೂಚನೆ, ಮಾರ್ಗಸೂಚನೆ, ಕೇಂದ್ರ ಸಿಎಸ್‌ಸಿ ಸಭೆಯ ನಡವಳಿಯಲ್ಲಿ ನೀಡಿರುವ ಸೂಚನೆ, ಎಸ್‌ಎಲ್‌ಇಸಿ (ಐಹೆಚ್‌ಎಸ್‌ಡಿಪಿ) ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಕೆಳಕಂಡ ಷರತ್ತುಗಳನ್ನು ಪಾಲಿಸಬೇಕೆಂದು ಸೂಚಿಸಲಾಗಿದೆ.

1. ಈ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
2. ಫಲಾನುಭವಿಗಳಿಂದ ವಂತಿಕೆಯು ನಿಯಮಿತವಾಗಿ ಪಾವತಿಯಾಗುವಂತೆ ಕ್ರಮ ವಹಿಸತಕ್ಕದ್ದು.
3. ಯೋಜನೆಯ ಅನುಷ್ಠಾನದ ಹಂತದ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ರಾಜ್ಯ ಸರ್ಕಾರಕ್ಕೆ/ಕೇಂದ್ರ ಸಕಾರಕ್ಕೆ ನೀಡತಕ್ಕದ್ದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
5. ಸರ್ಕಾರಕ್ಕೆ ಆಡಿಟ್ ವರದಿಯನ್ನು ನಿಗದಿತ ಸಮಯಕ್ಕೆ ಸಲ್ಲಿಸತಕ್ಕದ್ದು.
6. ನಿಗಧಿತ ಅವಧಿಯೊಳಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
7. ಈ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿರುವ ಮೊತ್ತವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು, ವಸತಿ ಇಲಾಖೆಯ ಉಪ ಕಾರ್ಯದರ್ಶಿಯವರ ಮೇಲು ಸಹಿ ಪಡೆದ ನಂತರ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಎಫ್‌ಡಿ 448 ವೆಚ್ಚ–9/2011, ದಿನಾಂಕ: 06–09–2011 ರ ಸೂಚನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಆರ್. ನಾಗರಾಜ

ಪೀಠಾಧಿಕಾರಿ –4, ವಸತಿ ಇಲಾಖೆ

ಪಿ.ಆರ್. 2292

ವಸತಿ ಸಚಿವಾಲಯ

ವಿಷಯ : ಗದಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮುಳಗುಂದ ಪಟ್ಟಣ ಪಂಚಾಯಿತಿ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ.ವಇ/42/ಹೆಚ್‌ಎಎಂ/1999, ದಿನಾಂಕ: 10–05–2000.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್‌ರಚಿಸಲು ತೀರ್ಮಾನಿಸಿದ್ದು, ಅದರಂತೆ ಬೆಳಗಾಂ ಜಿಲ್ಲೆ, ಗದಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮುಳಗುಂದ ಪಟ್ಟಣ ಪಂಚಾಯತಿ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 38 ಹೆಚ್‌ಎಎಸ್ 2011, ಬೆಂಗಳೂರು, ದಿನಾಂಕ : 06–09–2011.

ಗದಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮುಳಗುಂದ ಪಟ್ಟಣ ಪಂಚಾಯತಿ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್‌ರಚಿಸಲಾಗಿದೆ.

ಕ್ರ.ಸಂ	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಶಿವಲಿಂಗಪ್ಪ ಚನಬಸಪ್ಪ ಮಟ್ಟಿ, ಸಾ: ಮುಳಗುಂದ	ಹಿಂದುಳಿದ ವರ್ಗ
2	ಶ್ರೀಮತಿ ಲಕ್ಷ್ಮಿ ಕೋಂ ಬುದ್ದವಂತಪ್ಪ ಮಾಡಳ್ಳಿ ಸಾ: ಮುಳಗುಂದ	ಸಾಮಾನ್ಯ ಮಹಿಳೆ
3	ಶ್ರೀ ಪರಶುರಾಮ ಮಲ್ಲಪ್ಪ ದೊಡಮನಿ ಸಾ: ಮುಳಗುಂದ	ಪರಿಶಿಷ್ಟ ಜಾತಿ
4	ಶ್ರೀ ಮೌಲಾಸಾಬ ಹುಸೇನಸಾಬ ಸದರಭಾವಿ ಸಾ: ಮುಳಗುಂದ	ಅಲ್ಪ ಸಂಖ್ಯಾರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಶಿವಲಿಂಗ

ಪೀಠಾಧಿಕಾರಿ –2

ವಸತಿ ಇಲಾಖೆ

ಪಿ.ಆರ್. 2293

ಪಶುಸಂಗೋಪನಾ ಮತ್ತು ಮೀನುಗಾರಿಕಾ ಸಚಿವಾಲಯ

ವಿಷಯ : ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಕೋನೆಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ಪಶುಸಂಗೋಪನಾ ಪಾಲಿಟೆಕ್ನಿಕ್ ಸ್ಥಾಪಿಸಲು ಮಂಜೂರಾತಿ.

ಓದಲಾಗಿದೆ : 1. ಪತ್ರ ಸಂಖ್ಯೆ: ಕುಪ/ಕೃಆ-ನೂಯೋ/2010-11/II/2486, ದಿನಾಂಕ: 26-03-2011.

2. ಪತ್ರ ಸಂಖ್ಯೆ: ಆಪಸಂ/ಶಿಕ್ಷಣ/ವಿವ-31/2010-11, ದಿನಾಂಕ: 01-04-2011.

ಪ್ರಸ್ತಾವನೆ :

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 24-02-2011 ರಂದು ವಿಧಾನಮಂಡಲದಲ್ಲಿ ಮಂಡಿಸಿದ ಕೃಷಿ ಆಯವ್ಯಯದಲ್ಲಿ ನೂತನ ಕಾರ್ಯತಂತ್ರಗಳಡಿ ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜುಗಳನ್ನು ಸ್ಥಾಪಿಸುವುದಾಗಿ ಘೋಷಿಸಿರುತ್ತಾರೆ.

ಮೇಲ್ಕಂಡ ಘೋಷಣೆ ಅನುಸರಿಸಿ, ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಪತ್ರದಲ್ಲಿ ಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರು 2011-12ನೇ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿರುವ ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಕೋನೆಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವ್ಯಾಪ್ತಿಯ ರಾಜ್ಯ ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೋಯ್ಲಾ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳನ್ನು ಸ್ಥಾಪಿಸುವ ಸಂಬಂಧ ಯೋಜನಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಗ್ರಾಮೀಣ ಅಭ್ಯರ್ಥಿಗಳಿಗೆ ಸೀಮಿತವಾಗಿ ತಲಾ 100 ವಿದ್ಯಾರ್ಥಿಗಳ ಪ್ರವೇಶದೊಂದಿಗೆ 2 ವರ್ಷಗಳ ಪಶುಸಂಗೋಪನಾ ಡಿಪ್ಲೋಮಾ ಕೋರ್ಸ್‌ನ್ನು ಪ್ರಾರಂಭಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಒಂದೊಂದು ಪಾಲಿಟೆಕ್ನಿಕ್ ಸ್ಥಾಪನೆಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿ ತಯಾರಿಸಿ ನೀಡಿದ್ದು, ಅದರಂತೆ ಒಂದೊಂದು ಪಾಲಿಟೆಕ್ನಿಕ್ ಸ್ಥಾಪನೆಗೆ ರೂ. 140.00 ಲಕ್ಷಗಳ ಆವರ್ತಕ ಮತ್ತು ರೂ. 196.00 ಲಕ್ಷಗಳ ಅನಾವರ್ತಕ ವೆಚ್ಚ ಹೀಗೆ ಒಟ್ಟು ರೂ. 300.00 ಲಕ್ಷಗಳ ವೆಚ್ಚ ತಗಲುವುದಲ್ಲದೆ, 9 ಬೋಧಕರ ಮತ್ತು 23 ಬೋಧಕೇತರ ಹುದ್ದೆ ಹೀಗೆ ಒಟ್ಟು 32 ಹುದ್ದೆಗಳ ಅಗತ್ಯ ಇರುತ್ತದೆ. ಎಂದು ತಿಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಗ್ರಾಮೀಣ ಪರಿಸರದಲ್ಲಿ ಈಗಿರುವ ಸೇವೆಗಳಿಗೆ ಅನುಗುಣವಾಗಿ ಪಶುಸಂಗೋಪನಾ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ತರಬೇತುಗೊಂಡಿರುವ ಸಿಬ್ಬಂದಿಯ ಅವಶ್ಯಕತೆಯಿರುವುದರಿಂದ ಗ್ರಾಮೀಣ ಪರಿಸರದಲ್ಲಿ ಕೃಷಿಕರೊಡನೆ ಕಾರ್ಯನಿರ್ವಹಿಸುವ ಸಲುವಾಗಿ ತಾಂತ್ರಿಕ ವರ್ಗದಸಿಬ್ಬಂದಿಗಳನ್ನು ತರಬೇತುಗೊಳಿಸಲು 2010-11ನೇ ಸಾಲಿನ ಲೇಖಾನುದಾನದಲ್ಲಿ ಪ್ರಸ್ತಾಪಿಸಿರುವಂತೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಮೂಲಕ ಪಶುಸಂಗೋಪನಾ, ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸುವುದು ಸೂಕ್ತ ಎನ್ನುತ್ತಾ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿಗಳು ಸಲ್ಲಿಸಿರುವ ಯೋಜನಾ ವರದಿಯಂತೆ ರಾಜ್ಯ ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೋಯ್ಲಾ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಕೋನೆಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಾಲಿಟೆಕ್ನಿಕ್‌ಗಳಲ್ಲಿ ಪ್ರತೀ ವರ್ಷ ತಲಾ 100 ಅಭ್ಯರ್ಥಿಗಳಂತೆ ಒಟ್ಟು 200 ಅಭ್ಯರ್ಥಿಗಳಿಗೆ ಪಶುಪಾಲನಾ ವಿಷಯದಲ್ಲಿ 2 ವರ್ಷಗಳ ತರಬೇತಿ ನೀಡಿ, ಡಿಪ್ಲೋಮಾ ಪ್ರಧಾನ ಮಾಡಲು ಮತ್ತು ಡಿಪ್ಲೋಮಾ ಕೋರ್ಸಿನೊಂದಿಗೆ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನೂ ಸಹ ಏರ್ಪಡಿಸಲು ಹಾಗೂ ಡಿಪ್ಲೋಮಾ ಕೋರ್ಸಿನಲ್ಲಿ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಶಿಕ್ಷಣ ಎಂಬ ಎರಡು ವಿಭಾಗಗಳಿದ್ದು, ಪಶುವೈದ್ಯಕೀಯ ಶಿಕ್ಷಣ ವಿಭಾಗಕ್ಕೆ ಅಪ್ರಧಾನ ಪಶುವೈದ್ಯಕೀಯ ಸೇವೆಗಳ ವ್ಯಾಪ್ತಿಯೊಳಗೆ ಹಾಗೂ ಪಶುವೈದ್ಯಕೀಯ ವಿಶ್ವವಿದ್ಯಾಲಯ ಅನುಮೋದಿಸಿರುವ ಡಿಪ್ಲೋಮಾ ಪಠ್ಯಕ್ರಮವನ್ನು ಅಳವಡಿಸಿಕೊಂಡು ಡಿಪ್ಲೋಮಾ ಪಠ್ಯಕ್ರಮವನ್ನು ಪ್ರಾರಂಭಿಸುವುದು ಸೂಕ್ತ ಎಂದು ತಿಳಿಸಿರುತ್ತಾರೆ.

ಮೇಲ್ಕಂಡ ಕುಲಪತಿಗಳು ಮತ್ತು ಆಯುಕ್ತರ, ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಪಶುಸಂಗೋಪನಾ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ತರಬೇತಿ ಪಡೆದಿರುವ ಸಿಬ್ಬಂದಿಗಳ ಅವಶ್ಯಕತೆ ಇದ್ದು, ಹೈನುಗಾರಿಕೆ ಮತ್ತು ಪಶುಸಂಗೋಪನೆ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಸಲುವಾಗಿ ಕೃಷಿಕರೊಡನೆ ಕಾರ್ಯನಿರ್ವಹಿಸಲು ತಾಂತ್ರಿಕ ವರ್ಗದ ಸಿಬ್ಬಂದಿಗಳನ್ನು ತರಬೇತಿಗೊಳಿಸಬೇಕಾದ ಅಂಶದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಪಶುವೈದ್ಯಕೀಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿ ಪಶುಸಂಗೋಪನೆ ಮತ್ತು ಹೈನುಗಾರಿಕೆಯನ್ನು ಉತ್ತೇಜಿಸಲು 2011-12 ನೇ ಸಾಲಿನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಕೋನೆಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ಪಶುಸಂಗೋಪನಾ ಪಾಲಿಟೆಕ್ನಿಕ್ ಸ್ಥಾಪಿಸಲು ತೀರ್ಮಾನಿಸಿದೆ ಹಾಗೂ ಸದರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಗ್ರಾಮೀಣ ಅಭ್ಯರ್ಥಿಗಳಿಗೆ ಸೀಮಿತವಾಗಿ 2 ವರ್ಷಗಳ ಪಶುಸಂಗೋಪನಾ ಡಿಪ್ಲೋಮಾ ಕೋರ್ಸ್‌ನ್ನು ಪ್ರಾರಂಭಿಸಿ 50 ವಿದ್ಯಾರ್ಥಿಗಳನ್ನು ಪ್ರವೇಶಕ್ಕೆ ತೆಗೆದುಕೊಂಡು ತರಬೇತಿ ನೀಡಲು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಪಸಂಮೀ 116 ಪಸಸೇ 2011, ಬೆಂಗಳೂರು, ದಿನಾಂಕ : 14-09-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರ 2011-12ನೇ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ವ್ಯಾಪ್ತಿಯಲ್ಲಿರುವ ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ (LRIC), ಕೋನೆಹಳ್ಳಿ ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಗ್ರಾಮೀಣ ಅಭ್ಯರ್ಥಿಗಳಿಗೆ ಸೀಮಿತವಾಗಿ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಯೋಜನಾ ವರದಿಯಲ್ಲಿ ನಮೂದಿಸಿರುವ ಪಠ್ಯಕ್ರಮದಂತೆ 2 (ಎರಡು) ವರ್ಷಗಳ ಡಿಪ್ಲೋಮಾ ಪಶುಸಂಗೋಪನಾ ಪಾಲಿಟೆಕ್ನಿಕ್ ಸ್ಥಾಪಿಸಲು ಮಂಜೂರಾತಿ ನೀಡಿರುತ್ತದೆ.

ಈ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಪ್ರಾರಂಭದಲ್ಲಿ 50 ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಈ ಪಶುಸಂಗೋಪನಾ ಪಾಲಿಟೆಕ್ನಿಕ್‌ಸ್ಥಾಪಿಸಲು ಅಗತ್ಯವಾದ ಈ ಕೆಳಕಂಡ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸಲು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ಗೆ 2011–12ನೇ ಸಾಲಿನ ಪೂರಕ ಅಂದಾಜು–II ರಲ್ಲಿ ಲೆಕ್ಕಶೀರ್ಷಿಕೆ 2403–00–800–0–22–101 (ಯೋಜನೆ) ಅಡಿ ರೂ. 300–00 (ಮುನ್ನೂರು ಲಕ್ಷ ರೂಪಾಯಿಗಳು ಮಾತ್ರ) ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಕ್ರಮ ಸಂಖ್ಯೆ	ವಿವರ	2011–12ನೇ ಸಾಲು
	ಅ) ಅವರ್ತಕ ವೆಚ್ಚ	
1)	ವೇತನ ಭತ್ಯ ಇತ್ಯಾದಿ	78.00ಲಕ್ಷ
2)	ಶಿಷ್ಯ ವೇತನ ಒಟ್ಟು 100 ವಿದ್ಯಾರ್ಥಿಗಳಿಗೆ ತಲಾ ಮಾಸಿಕ ರೂ. 1000–00 ಗಳಂತೆ	6.00 ಲಕ್ಷ
3)	ಸಾದಿಲ್ವಾರು	10.00 ಲಕ್ಷ
4)	ಇತರೆ ಆವರ್ತಕ ವೆಚ್ಚ (ಪ್ರವಾಸ ಭತ್ಯೆ, ಆರೋಗ್ಯ ಭತ್ಯೆ, ಪಶು ಆಹಾರ ಕೆಮಿಕಲ್ಸ್ ಇತ್ಯಾದಿ)	10.00 ಲಕ್ಷ
	ಒಟ್ಟು	104.00 ಲಕ್ಷ
	ಆ) ಅನಾವರ್ತಕ ವೆಚ್ಚ	
1)	ಕಾಮಗಾರಿಗಳು, ವಿದ್ಯಾರ್ಥಿನಿಲಯ, ಜಾನುವಾರು ಕೊಟ್ಟಿಗೆಗಳ ಉನ್ನತೀಕರಣ ಇತ್ಯಾದಿ	150.00 ಲಕ್ಷ
2)	ವಾಹನ	16.00 ಲಕ್ಷ
3)	ಉಪಕರಣ ಮತ್ತು ಪೀಠೋಪಕರಣಗಳು	30.00 ಲಕ್ಷ
	ಒಟ್ಟು	196.00 ಲಕ್ಷ
	ಒಟ್ಟು ಮೊತ್ತ (ಅ + ಆ)	300.00 ಲಕ್ಷ

ಈ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಯು.ಜಿ.ಸಿ/ ಐ.ಸಿ.ಎ.ಆರ್. ವೇತನ ಶ್ರೇಣಿಯ ಈ ಕೆಳಕಂಡ ಬೋಧಕ ವೃಂದದ 5 ಹುದ್ದೆಗಳನ್ನು ಮತ್ತು ವಿಶ್ವವಿದ್ಯಾಲಯದ ವೇತನಶ್ರೇಣಿಯ ಈ ಕೆಳಕಂಡ ಬೋಧಕೇತರ ವೃಂದದ 11 ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳು ಅನುಮತಿ ನೀಡಲಾಗಿದೆ.

	I. **ಬೋಧಕ ವೃಂದ** (Teaching cadre)	
1)	ಪ್ರಾಂಶುಪಾಲರು (ಸಹ ಪ್ರಾಧ್ಯಾಪಕರ ವೃಂದದಲ್ಲಿ)	01 (ಒಂದು)
	(Principal in the cadre of Associate Professor)	
2)	ಸಹಾಯಕ ಪ್ರಾಧ್ಯಾಪಕರು (Assistant Professors)	04 (ನಾಲ್ಕು)
	ಒಟ್ಟು ಹುದ್ದೆಗಳು	05 ಐದು)
	II. **ಬೋಧಕೇತರ ವೃಂದ** (Non- Teaching cadre)	
1)	ಸಹಾಯಕ (Assistant)	01 (ಒಂದು)
2)	ಪ್ರಯೋಗಾಲಯ ಸಹಾಯಕ (Lab Assistant)	02 (ಎರಡು)
3)	ಕ್ಷೇತ್ರ ಸಹಾಯಕ (Field Assistant)	02 (ಎರಡು)
4)	ವಾಹನ ಚಾಲಕ (Driver)	01 (ಒಂದು)
5)	ಅಡುಗೆ ಪರಿಚಾರಕ (Cook-cum-caretaker)	02 (ಎರಡು)
6)	ಪ್ರಾಣಿ ಪರಿಚಾರಕ (Animal Attendant)	03 (ಮೂರು)
	ಒಟ್ಟು ಹುದ್ದೆಗಳು	11 (ಹನ್ನೊಂದು)

ವಾಹನ ಚಾಲಕರು, ಅಡುಗೆ ಪರಿಚಾರಕ ಮತ್ತು ಪ್ರಾಣಿ ಪರಿಚಾರಕ ಹುದ್ದೆಗಳನ್ನು ಹೊರಗುತ್ತಿಗೆ (Out-source) ಮೂಲಕವೇ ಭರ್ತಿ ಮಾಡಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ : FD 239 Exp-4/ 2011 ದಿನಾಂಕ: 01–08–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಪಿ. ನಾಗರಾಜ

ಪೀಠಾಧಿಕಾರಿ –2

ಪಿ.ಆರ್. 2294

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ–ಎ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಭೂಯ್ಯಾರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 31-08-2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/4971.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಭೂಯ್ಯಾರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಯ್ಯಾರ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ. 1,63,177-00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 08-09-1994.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 16-06-1995.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗಾ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಸಂಖ್ಯೆ : 513/99ನ್ನು ದಾಖಲಿಸಿದ್ದು, ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ರೂ. 45,000/-ಗಳನ್ನು ನಿಗದಿಪಡಿಸಿ ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಂದಾಯ ಇಲಾಖೆಯ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುತ್ತಾರೆ.

ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ.

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ-ಗುಂ	ಗ್ರಾಮ	ಪರಿಹಾರ ಮೊತ್ತ ರೂ.ಗಳಲ್ಲಿ
1	513/09	28/1-2	3-37	ಭೂಯ್ಯಾರ	1,63,177-00
	ಒಟ್ಟು				**1,63,177-00**

- **ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 139 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 14-09-2011

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಭೂಯ್ಯಾರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಯ್ಯಾರ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ನ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನ ಮೊತ್ತ ರೂ. 1,63,177-00 ಗಳನ್ನು (ಒಂದು ಲಕ್ಷದ ಅರವತ್ಮೂರು ಸಾವಿರದ ನೂರ ಎಪ್ಪತ್ತೇಳು ರೂ.ಗಳು ಮಾತ್ರ) ಪರಿಹಾರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 1,63,177/-ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010 ದಿನಾಂಕ : 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2295 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ ಮತ್ತು ತಾಲ್ಲೂಕಿನ ಚಟ್ನಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಬಗದಲ ಗ್ರಾಮದ ಕೆರೆ ಮುಳುಗಡೆ ಮತ್ತು ಒಡ್ಡಿಗಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಭೂಸ್ವಾ/2010–11/2779, ದಿನಾಂಕ : 26–05–2011.

ಪ್ರಸ್ತಾವನೆ :

ಬೀದರ್ ಜಿಲ್ಲೆ ಮತ್ತು ತಾಲ್ಲೂಕಿನ ಚಟ್ನಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಬಗದಲ ಗ್ರಾಮದ 7–20 ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಅವಾರ್ಡ್ ಪೂರ್ವ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ರೂ. 3,50,000/– ಗಳ ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ : 26–05–2011ರ ಪತ್ರದಲ್ಲಿ ಕೋರಿದ್ದಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ : ಕಂಇ 42 ಭೂಸ್ವಾಹಾ 2000, ದಿನಾಂಕ : 08–10–2001ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ವೆಚ್ಚದ ಮುಂಗಡ ಹಣ ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ.

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 84 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 16–09–2011

ಬೀದರ್ ಜಿಲ್ಲೆ ಮತ್ತು ತಾಲ್ಲೂಕಿನ ಚಟ್ನಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಬಗದಲ ಗ್ರಾಮದ 7–20 ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ಮೊತ್ತ 3,50,000–00 ಗಳ (ಮೂರು ಲಕ್ಷದ ಐವತ್ತು ಸಾವಿರ ರೂ.ಗಳು ಮಾತ್ರ) ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು– ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 3,50,000/–ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010 ದಿನಾಂಕ : 20–10–2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2296 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ
ಸೇರ್ಪಡೆ

ಸಂಖ್ಯೆ : ಸನೀಇ 114 ಭೂಸ್ವಾಪ್ರ 2009, ಬೆಂಗಳೂರು ದಿನಾಂಕ : 16–09–2011

ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝರವಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ : ಸನೀಇ 114 ಭೂಸ್ವಾಪ್ರ 2009, ದಿನಾಂಕ : 22–08–2011ರಂದು ಹೊರಡಿಸಲಾದ ಆದೇಶದಲ್ಲಿ ಕೆಳಕಂಡಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಬೂದಿಗೊಪ್ಪ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ)
1	122/03	227/1	0–10	59868
2	134/03	226/1	0–09	53881
3	135/03	232/2B	0–04	23947
4	136/03	234/B	0–05	29934
5	137/03	239	0–14	83815
6	138/03	149	0–14	83815
7	139/03	204	0–02	11974
8	140/03	205	0–03	17960
9	141/03	206	0–04	23947
10	142/03	207	0–04	23947
11	143/03	208	0–05	29934
12	144/03	209	0–04	23947

13	145/03	213	0–06	35921
14	154/03	229/1	0–05	29934
15	155/03	230	0–10	59868
16	156/03	233/B	0–03	17960
17	157/03	235,237B	0–10	59868
18	158/03	240	0–12	71841
	ಒಟ್ಟು			**742361**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2297 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಸತ್ಯನಾರಾಯಣ, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ)(1)ರ ಸೌಲಭ್ಯಕ್ಕೆ ಪರಿಗಣಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂ : ಲಾ 123 ಪಿಪಿಇ 85(1), ದಿನಾಂಕ : 20-02-1986.
2. ಸರ್ಕಾರದ ಆದೇಶ ಸಂಖ್ಯೆ : ಲಾ 177 ಪಿಪಿಇ 86, ದಿನಾಂಕ : 21/23-10-1986.
3. ಶ್ರೀ ಸತ್ಯನಾರಾಯಣ ಇವರ ಮನವಿಯ ದಿನಾಂಕ : 11-10-2007.
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ : ಡಿಪಿಎನ್/ಲೆಕ್ಕ-1/285/2007-08, ದಿನಾಂಕ : 13-06-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 20-02-1986ರ ಸರ್ಕಾರದ ಅಧಿಸೂಚನೆಯ ಕ್ರ.ಸಂ : 14ರ ಅನ್ವಯ ಸತ್ಯನಾರಾಯಣ, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಇವರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ : 03-03-1986ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ದಿನಾಂಕ : 21/23-10-1986ರ ಸರ್ಕಾರದ ಆದೇಶದನ್ವಯ ಸದರಿ ಅಧಿಕಾರಿಯ ಜನ್ಮ ದಿನಾಂಕವನ್ನು 14-07-1951 ಎಂದು ಒಪ್ಪಲಾಗಿದೆ. ಮೇಲೆ (3)ರಲ್ಲಿ ಓದಲಾದ ದಿನಾಂಕ : 11-10-2007ರ ಮನವಿಯಲ್ಲಿ ಶ್ರೀ ಸತ್ಯನಾರಾಯಣರವರು ಅವರಿಗೆ 34 ವರ್ಷ 07 ತಿಂಗಳ 19 ದಿನಗಳಾಗಿದ್ದಾಗ ಸರ್ಕಾರಿ ಸೇವೆಗೆ ಸೇರಿದ್ದು, ನಿಯಮಾನುಸಾರ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಹೆಚ್ಚುವರಿ ಸೇವಾ ಸೌಲಭ್ಯಕ್ಕೆ ಅವರು ಅರ್ಹರಿರುವುದರಿಂದ ಪರಿಗಣಿಸುವಂತೆ ಕೋರಿದ್ದು, ಮೇಲೆ (4)ರಲ್ಲಿ ಓದಲಾದ ದಿನಾಂಕ : 13-06-2011ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರುರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1) ರನ್ವಯ ಸದರಿಯವರು ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಹೆಚ್ಚುವರಿ ಸೇವಾ ಸೌಲಭ್ಯಕ್ಕೆ ಅರ್ಹರಿರುವುದರಿಂದ ಈ ಬಗ್ಗೆ ಆದೇಶವನ್ನು ಹೊರಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 259 ಪಿಪಿಇ 2011, ಬೆಂಗಳೂರು, ದಿನಾಂಕ : 12-09-2011

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಶ್ರೀ ಸತ್ಯನಾರಾಯಣ, ನಿವೃತ್ತ ಅಭಿಯೋಗ ಉಪ ನಿರ್ದೇಶಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ)(1)ರ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಅಧಿಕ ಸೇವಾವಧಿಯನ್ನು ಅವರ ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ : ಆಇ 792 ಸೇ-3/2011, ದಿನಾಂಕ : 10-08-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2298 ಒಳಾಡಳಿತ ಇಲಾಖೆ

(ಪೊಲೀಸ್ ಸೇವೆಗಳು-ಬಿ)

ಒಳಾಡಳಿತ ಸಚಿವಾಲಯ

ವಿಷಯ : ಕಾರಾಗೃಹಗಳ ಮಹಾ ನಿರೀಕ್ಷಕರ ಹುದ್ದೆಯನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರ ಹುದ್ದೆ ಎಂದು ಮುಂದುವರೆಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 45 ಪಿಆರ್‌ಇ 2010, ದಿನಾಂಕ : 06-06-2010.

2. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ : ಕ.ಸಿ/ನಗದು/ಸಿಆರ್-04/2011-12 ದಿನಾಂಕ : 24-08-2011.

ಪ್ರಸ್ತಾವನೆ :

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಹುದ್ದೆಯಲ್ಲಿ ಶ್ರೀ ಕುಚ್ಚಣ್ಣ ಶ್ರೀನಿವಾಸನ್, ಐ.ಪಿ.ಎಸ್. (ಕೆ.ಎನ್. 78) ಇವರು ದಿನಾಂಕ : 29-04-2010 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದರು, ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ, ಸದರಿ ಹುದ್ದೆಯನ್ನು ವೇತನ ಶ್ರೇಣಿ ರೂ. 37,400-67,000 + ಗ್ರೇಡ್ ಪೇ ರೂ. 12,000/- ರಲ್ಲಿ ದಿನಾಂಕ : 01-07-2010 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿತ್ತು.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಕುಚ್ಚಣ್ಣ ಶ್ರೀನಿವಾಸನ್, ಐ.ಪಿ.ಎಸ್. ಇವರು ಪದೋನ್ನತಿ ಹೊಂದಿ ಪೊಲೀಸ್ ಮಹಾನಿರ್ದೇಶಕರು ಮತ್ತು ವ್ಯವಸ್ಥಾಪಕರು, ಕರ್ನಾಟಕ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್, ಬೆಂಗಳೂರು ಇಲ್ಲಿಗೆ ದಿನಾಂಕ : 08-08-2011ರಂದು ಪ್ರಭಾರ ವಹಿಸಿಕೊಂಡಿರುತ್ತಾರೆ. ಆದ್ದರಿಂದ ಎಕ್ಸ್‌ಕೇಡರ್ ಹುದ್ದೆಯಾದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ಈ ಹುದ್ದೆಯನ್ನು ವೇತನ ಶ್ರೇಣಿ ರೂ. 67,000- (Annual Increment @ 3%) 79,000 ರಲ್ಲಿ ದಿನಾಂಕ : 01-07-2011 ರಿಂದ ಒಂದು ವರ್ಷದವರೆಗೆ ಮುಂದುವರೆಸಿ ಆದೇಶ ಹೊರಡಿಸುವಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರು ಕೋರಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 98 ಪಿಆರ್‌ಇ 2011, ಬೆಂಗಳೂರು, ದಿನಾಂಕ : 14-09-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಎಕ್ಸ್‌ಕೇಡರ್ ಹುದ್ದೆಯಾದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕರು, ಬೆಂಗಳೂರು - ಈ ಹುದ್ದೆಯನ್ನು (ವೇತನ ಶ್ರೇಣಿ ರೂ. 67000 - Annual Increment @ 3%) 79000) ರಲ್ಲಿ ದಿನಾಂಕ : 01-07-2011 ರಿಂದ ಒಂದು ವರ್ಷದ ಅವಧಿಯವರೆಗೆ ಮುಂದುವರೆಸಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಸೇವೆಗಳು-4) ಟಿಪ್ಪಣಿ ಸಂಖ್ಯೆ : ಸಿಆಸುಇ 199 ಎಸ್‌ಪಿಎಸ್ 2011, ದಿನಾಂಕ : 13-09-2011ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 2299

ಕಂದಾಯ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ, ಬಾಗಲಕೋಟೆ ಹೆದ್ದಾರಿ ಹುಡ್ಕೋ ಬಡಾವಣೆಯಲ್ಲಿರುವ ಶ್ರೀ ಜೈ ಸಂತೋಷಿ ಮಾತಾ ದೇವಿ ಮಂದಿರವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ : ಎಡಿಎಂ/5/ಸಿಆರ್/46/2010-11 ದಿನಾಂಕ : 26-07-2011.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆಯವರ ಪತ್ರ ದಿನಾಂಕ : 26-07-2011ರಲ್ಲಿ ಬಿಜಾಪುರ ಜಿಲ್ಲೆ, ಬಾಗಲಕೋಟೆ ಹೆದ್ದಾರಿ ಹುಡ್ಕೋ ಬಡಾವಣೆಯಲ್ಲಿರುವ ಶ್ರೀ ಜೈ ಸಂತೋಷಿ ಮಾತಾ ದೇವಿ ಮಂದಿರವನ್ನು ಹಿಂದಿನ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯ್ದೆಯನ್ವಯ 1983ರಲ್ಲಿ ನೋಂದಣಿ ಮಾಡಿದ್ದು, ಸದರಿ ಸಂಸ್ಥೆಯನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ಜಾರಿಗೆ ಬಂದ ನಂತರದಲ್ಲಿ ಸೇರಿಸಿರುವುದಿಲ್ಲವೆಂದೂ, ಈ ಸಂಸ್ಥೆಯು ಯಾವುದೇ ನಿರ್ಧಿಷ್ಟ ಸಮಾಜಕ್ಕೆ ಒಳಪಟ್ಟ ಸಂಸ್ಥೆ ಅಲ್ಲದೇ ಇರುವುದರಿಂದ ಸದರಿ ಸಂಸ್ಥೆಯನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವಂತೆ ಸಂಸ್ಥೆಯ ಸ್ಥಾಪಕ ಟ್ರಸ್ಟಿಗಳು ಕೋರಿರುತ್ತಾರೆ. ಈ ಕುರಿತಂತೆ ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆರವರು ಶ್ರೀ ಜೈ ಸಂತೋಷಿ ಮಾತಾ ದೇವಿ ಮಂದಿರವು 1983 ರಲ್ಲಿ ಹಿಂದಿನ ಬಾಂಬೆ ಪಬ್ಲಿಕ್ ಟ್ರಸ್ಟ್ ಕಯ್ದೆಯಡಿ ನೊಂದಣಿಯಾಗಿದ್ದು, ದೇವಸ್ಥಾನದ ಸಮಿತಿಯ ಕೋರಿಕೆಯಂತೆ ಇದನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕೆಂದು ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆರವರ ಕೋರಿಕೆಯಂತೆ ಬಿಜಾಪುರ ಜಿಲ್ಲೆ, ಬಾಗಲಕೋಟೆ ಹೆದ್ದಾರಿ ಹುಡ್ಕೋ ಬಡಾವಣೆಯಲ್ಲಿರುವ ಶ್ರೀ ಜೈ ಸಂತೋಷಿ ಮಾತಾ ಮಂದಿರವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ಸರ್ಕಾರದಿಂದ ಆದೇಶ ಹೊರಡಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆಯವರು ಕೋರಿಕೆ ಸಲ್ಲಿಸಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 72 ಮುಅಬಿ 2011, ಬೆಂಗಳೂರು, ದಿನಾಂಕ : 12-09-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ, ಬಾಗಲಕೋಟೆ ಹೆದ್ದಾರಿ ಹುಡ್ಕೋ ಬಡಾವಣೆಯಲ್ಲಿರುವ ಶ್ರೀ ಜೈ ಸಂತೋಷಿ ಮಾತಾ ದೇವಿ ಮಂದಿರವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ಸೆಕ್ಷನ್ 23 ಅನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ಶ್ರೀಕಂಠಬಾಬು
ಪೀಠಾಧಿಕಾರಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 2300

ಕಂದಾಯ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆಯ ಕಡೂರು ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಕಂಇ 52 ಮುಸರ 2008 ದಿನಾಂಕ: 03.02.2009.

2. ಮಾನ್ಯ ಶಾಸಕರು, ಕಡೂರು ವಿಧಾನಸಭಾ ಕ್ಷೇತ್ರರವರ ಪತ್ರ ಸಂಖ್ಯೆ: ಕೆ.ಎ.ಸಿ. (127) ದಿನಾಂಕ: 07-07-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ ಆದೇಶ ದಿನಾಂಕ: 03.02.2009ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿರುತ್ತದೆ.

1)	ಮಾನ್ಯ ವಿಧಾನ ಸಭಾ ಸದಸ್ಯರು, ಕಡೂರು ವಿಧಾನ ಸಭಾ ಕ್ಷೇತ್ರ	ಅಧ್ಯಕ್ಷರು
2)	ತಹಶೀಲ್ದಾರ್, ಕಡೂರು ತಾಲ್ಲೂಕು	ಸದಸ್ಯ ಕಾರ್ಯದರ್ಶಿ
3)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು	ಸದಸ್ಯರು
4)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕಡೂರು ತಾಲ್ಲೂಕು	ಸದಸ್ಯರು
5)	ಶ್ರೀ ಬಿ. ರಾಜಶೇಖರ್ ಬಿನ್ ಬೆಮ್ಮಲಿಂಗಪ್ಪ, ಬಿಟ್ಟೇನಹಳ್ಳಿ, ಪಂಚನಹಳ್ಳಿ ಹೋಬಳಿ, ಕಡೂರು ತಾಲ್ಲೂಕು (ಸಾಮಾನ್ಯ)	ಸದಸ್ಯರು
6)	ಜಿ. ಸುಧಾ ಕೋಂ ಎಸ್.ಬಿ. ಶಿವಕುಮಾರ್ ವೀರಶೈವ ಎಸ್. ಕೊಪ್ಪಲು, ದೇವನೂರು ಅಂಚೆ, ಕಡೂರು ತಾಲ್ಲೂಕು (ಮಹಿಳೆ)	ಸದಸ್ಯರು
7)	ಶ್ರೀ ಚಂದ್ರಾನಾಯ್ಕ ಬಿನ್ ಗೋವಿಂದ ನಾಯ್ಕ ಮಚ್ಚೇರಿ, ಎಂ. ಕೋಡಿಹಳ್ಳಿ, ಕಡೂರು (ಪರಿಶಿಷ್ಟ ಜಾತಿ)	ಸದಸ್ಯರು
8)	ಶ್ರೀ ಕೆಂಚಪ್ಪ ಬಿನ್ ಕಂಬಪ್ಪ, ಕಾಮನಕೆರೆ ಅಂಚೆ, ಕಡೂರು ತಾಲ್ಲೂಕು (ಪರಿಶಿಷ್ಟ ಪಂಗಡ)	ಸದಸ್ಯರು

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಮಾನ್ಯ ಶಾಸಕರು, ಕಡೂರು ವಿಧಾನಸಭ ಕ್ಷೇತ್ರ ಇವರ ಪತ್ರ ದಿನಾಂಕ: 07.07.2011ರಲ್ಲಿ ಚಿಕ್ಕಮಗಳೂರು ಜಿಲ್ಲೆ, ಕಡೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯಲ್ಲಿ ಕ್ರಮ ಸಂಖ್ಯೆ: (7)ರಲ್ಲಿರುವ ಅಧಿಕಾರೇತರ ಸದಸ್ಯರಾದ ಶ್ರೀ ಚಂದ್ರನಾಯ್ಕ ಬಿನ್ ಗೋವಿಂದನಾಯ್ಕ (ಪರಿಶಿಷ್ಟ ಜಾತಿ) ಇವರನ್ನು ನೇಮಕ ಮಾಡಲಾಗಿದೆ. ಇವರು ಹಾಲಿ ಬೆಂಗಳೂರಿನಲ್ಲಿ ವಾಸವಿರುವುದರಿಂದ ಇವರ ಬದಲಿಗೆ ಶ್ರೀ ಜಿ.ಆರ್. ಮಂಜನಾಯ್ಕ ಬಿನ್ ರೂಪ್ಲಾನಾಯ್ಕ ಗೋವಿಂದಪುರ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಪರಿಶಿಷ್ಟ ಜಾತಿ) ಇವರನ್ನು ನೇಮಕ ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಈ ಕೋರಿಕೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಕಂಇ 06 ಮುಸರ 2011, ಬೆಂಗಳೂರು, ದಿನಾಂಕ: 14ನೇ ಸೆಪ್ಟಂಬರ್, 2011

ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ:ಕಂಇ 52 ಮುಸರ 2008 ದಿನಾಂಕ: 03.02.2009ರಲ್ಲಿ ರಚಿಸಲಾದ ಚಿಕ್ಕಮಗಳೂರು ಜಿಲ್ಲೆಯ ಕಡೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯಲ್ಲಿ ನೇಮಿಸಲಾದ ಅಧಿಕಾರೇತರ ಸದಸ್ಯರುಗಳಲ್ಲಿ ಶ್ರೀ ಚಂದ್ರನಾಯ್ಕ ಬಿನ್. ಗೋವಿಂದನಾಯ್ಕ, ಮಚ್ಚೇರಿ, ಎಂ. ಕೋಡಿಹಳ್ಳಿ, ಕಡೂರು ಇವರ ಬದಲಿಗೆ ಶ್ರೀ ಜಿ.ಆರ್. ಮಂಜನಾಯ್ಕ ಬಿನ್ ರೂಪ್ಲಾನಾಯ್ಕ, ಗೋವಿಂದಪುರ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಪರಿಶಿಷ್ಟ ಜಾತಿ) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ, ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 2301

ಸಹಕಾರ ಸಚಿವಾಲಯ

ವಿಷಯ : ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಶ್ರೀನಿವಾಸಪುರ ಇದರ 2007–08 ರಿಂದ 2009–10ನೇ ಸಾಲುಗಳ ವಾರ್ಷಿಕ ಮಹಾ ಸಭೆಗಳನ್ನು ದಿನಾಂಕ: 30.09.2011ರೊಳಗಾಗಿ ಜರುಗಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರ ಪತ್ರ ಸಂಖ್ಯೆ ಡಿಎಸ್‌ಕೆ–ಇಎಸ್ ಟಿ ಎಸ್–98–2003–04 ದಿ: 23.09.2010 ಹಾಗೂ ದಿ: 05–08 2011.

2) ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ) ರವರ ಪತ್ರ ಸಂಖ್ಯೆ: ಅನಿ–ಕೈ.ಸ.ಸಂ–2–187–ಮಸ–2009–10 ದಿನಾಂಕ: 12.07.2011.

ಪ್ರಸ್ತಾವನೆ:

ಮೇಲೆ ಓದಲಾದ 1 ರಲ್ಲಿನ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರು, ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಶ್ರೀನಿವಾಸಪುರ ಚೆನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ ಇದರ ವ್ಯವಸ್ಥಾಪಕ ನಿರ್ದೇಶಕರು 2009–10ನೇ ಸಾಲಿನ ಆಡಿಟ್ ಪ್ರಗತಿಯಲ್ಲಿದ್ದು ಕಾರ್ಖಾನೆಯಲ್ಲಿ ಈಗಾಗಲೇ ಗುತ್ತಿಗೆ ನೀಡಿರುವುದರಿಂದ ನೇರ ನಿರ್ವಹಣೆ ಕಾರ್ಯ ಇಲ್ಲದೇ ಇರುವುದರಿಂದ 2007–08, 2008–09 ಮತ್ತು 2010–11 ನೇ ಸಾಲುಗಳ ವಾರ್ಷಿಕ ಮಹಾ ಸಭೆಯನ್ನು ದಿನಾಂಕ: 30.09.2011 ರೊಳಗಾಗಿ ಜರುಗಿಸಿದಲ್ಲಿ ಕಾರ್ಖಾನೆಗೆ ಆರ್ಥಿಕ ಹೊರೆ ಕಡಿಮೆಯಾಗುವ ದೃಷ್ಟಿಯಿಂದಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–1959ರ ಕಲಂ 121 ರನ್ವಯ ಅಧಿಕಾರ ಚಲಾಯಿಸಿ ಕಲಂ 27(1)ರ ಪರಂತುಕವನ್ನು ಸಡಿಲಿಸಿ ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ) ರವರು ಸದರಿ ಕಾರ್ಖಾನೆಯು 2007–08ರಿಂದ 2009–10 ನೇ ಸಾಲುಗಳ ವಾರ್ಷಿಕ ಮಹಾಸಭೆಗಳನ್ನು 2010–11 ನೇ ಸಾಲಿನ ಮಹಾಸಭೆಯೊಂದಿಗೆ ಸೇರಿಸಿ ದಿನಾಂಕ: 30–09–2011 ರೊಳಗೆ ನಡೆಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಪ್ರಕರಣ 27(1)ನ್ನು ಮಾರ್ಪಡಿಸಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 38 ಸಸಕಾ 2010, ಬೆಂಗಳೂರು, ದಿನಾಂಕ : 09–09–2011

ಪ್ರಸ್ತಾವನೆಯಲ್ಲಿನ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣ 27(1)ನ್ನು ಮಾರ್ಪಡಿಸಿ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ, ನಿ. ಶ್ರೀನಿವಾಸಪುರ ಚೆನ್ನರಾಯಪಟ್ಟಣ ತಾಲೂಕು ಹಾಸನ ಜಿಲ್ಲೆ ಇದರ 2007–08 ರಿಂದ 2009–10ನೇ ಸಾಲುಗಳ ವಾರ್ಷಿಕ ಮಹಾಸಭೆಗಳನ್ನು 2010–11ನೇ ಸಾಲಿನ ವಾರ್ಷಿಕ ಮಹಾಸಭೆಯೊಂದಿಗೆ ಸೇರಿಸಿ ದಿನಾಂಕ: 30.09.2011ರೊಳಗೆ ನಡೆಸಲು ಅನುಮತಿ ನೀಡಿದೆ.

ಸೂಚನೆ: ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1) ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30.09.2011 ರವರೆಗೆ ಜಾರಿಯಲ್ಲಿರತಕ್ಕದ್ದು, ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ, ಪ್ರಕರಣ 27(1) ರ ಪ್ರಕರಣದ ಉಪಬಂಧಗಳು ಪುನ: ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪಿ.ಆರ್. 2302 ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : 2010–11ನೇ ಸಾಲಿಗೆ ಇದ್ದಂತೆ ವಿವಿಧ ಯೋಜನೆಗಳಡಿ NCDC ಯಿಂದ ಪಡೆದಿರುವ ಸಾಲಗಳ ವಾರ್ಷಿಕ ಕಂತಿನ ಅಸಲು ಮತ್ತು ಬಡ್ಡಿಯನ್ನು ಪಾವತಿಸುವ ಬಗ್ಗೆ.

ಓದಲಾಗಿದೆ : ಸಹಕಾರ ಸಂಘಗಳ ಜಂಟಿ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಪತ್ರ ಸಂಖ್ಯೆ RCS-LNS-31-NCDC-2011-12 dt: 16.08.2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ) ರವರು 2010–11ನೇ ಸಾಲಿನ ಅಂತ್ಯಕ್ಕೆ ಇದ್ದಂತೆ NCDC ವತಿಯಿಂದ ವಿವಿಧ ಯೋಜನೆಗಳಿಗೆ ಪಡೆದಿರುವ ಸಾಲಗಳಿಗೆ ಸಂಬಂಧಿಸಿದಂತೆ ದಿನಾಂಕ: 05.10.2011 ರೊಳಗೆ NCDC ಗೆ ಸರ್ಕಾರದಿಂದ ಹಣ ಪಾವತಿಸಿದರೆ ಹಣದ ಮೇಲೆ ಶೇ. 0.25 ರಷ್ಟು ರಿಯಾಯಿತಿ ದೊರಕಲಿದ್ದು, ಒಟ್ಟು ರೂ. 3,76,03,155,.00 ಗಳನ್ನು ಪಾವತಿಸಬೇಕೆಂದು ಇದಕ್ಕೆ ತಪ್ಪಿದಲ್ಲಿ ವಿಳಂಬವಾಗಿ ಪಾವತಿಸಿದರೆ ರೂ. 3,84,97,230.00 ಗಳನ್ನು ಪಾವತಿಸಬೇಕಾಗುತ್ತದೆಂದು ಸಹಾಯಕ ನಿರ್ದೇಶಕರು NCDC ನವದೆಹಲಿ ರವರ ಪತ್ರ ಸಂಖ್ಯೆ ಎನ್‌ಸಿಡಿ ಎ&ಸಿ/10 (1) ಆರ್ ಇ.ಪಿ. /2001–02–182–(II) ದಿನಾಂಕ: 06.07.2011 ರಲ್ಲಿ ತಿಳಿಸಿರುತ್ತಾರೆ. ಆದುದರಿಂದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 127 ಸಂಮಾಸ 2011 ಬೆಂಗಳೂರು, ದಿನಾಂಕ : 07–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2010-11ನೇ ಸಾಲಿನ ಅಂತ್ಯಕ್ಕೆ NCDC ವತಿಯಿಂದ ವಿವಿಧ ಯೋಜನೆಗಳಿಗೆ ಪಡೆದಿರುವ ಸಾಲಗಳ ಬಾಬ್ತು ಅಸಲು ಮತ್ತು ಬಡ್ಡಿ ಮರು ಪಾವತಿ ಬಾಬ್ತು ಒಟ್ಟು ರೂ. 3,76,03,155-00 (ಮೂರು ಕೋಟಿ ಎಪ್ಪತ್ತಾರು ಲಕ್ಷದ ಮೂರು ಸಾವಿರದ ಒಂದುನೂರ ಐವತ್ತೈದು ರೂಪಾಯಿಗಳು ಮಾತ್ರ) ಗಳನ್ನು, ಅಂದರೆ ಅಸಲು ರೂ. 2,80,38,600-00 (ಎರಡು ಕೋಟಿ ಎಂಬತ್ತು ಲಕ್ಷದ ಮೂವತ್ತೆಂಟು ಸಾವಿರದ ಆರುನೂರು ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ 6003-00-108-0-01-240 (ಯೋಜನೇತರ) (ಪ್ರಭುತ) ರಡಿಯಲ್ಲಿ ಹಾಗೂ ಬಡ್ಡಿ ರೂ. 95,64,555-00 (ತೊಂಬತ್ತೈದು ಲಕ್ಷದ ಅರವತ್ತನಾಲ್ಕು ಸಾವಿರದ ಐನೂರ ಐವತ್ತೈದು ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ 2049-01-200-2-03-240 (ಯೋಜನೇತರ) (ಪ್ರಭುತ) ರಡಿಯಲ್ಲಿ ಬಿಡುಗಡೆ ಮಾಡಿ NCDC, ನವದೆಹಲಿ ಈ ಸಂಸ್ಥೆಗೆ ಪಾವತಿಸಲು ಆದೇಶಿಸಿದೆ. ಸದರಿ ಮೊಬಲಗನ್ನು ಪಾವತಿಸಲು ಅನುವಾಗಲು ಹಾಗೂ ಖಜಾನೆಯಿಂದ ಡ್ರಾ ಮಾಡಲು ಸಲ್ಲಿಸಬೇಕಾದ ಹಣ ಸಂದಾಯ ರಸೀದಿಯಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಸಹಿ ಮತ್ತು ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ರವರ ಮೇಲು ಸಹಿ ಪಡೆದು ಡ್ರಾ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ಆಇ 112-ಆಂ.ಆಸ.2011 ದಿನಾಂಕ: 29.08.2011 ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪಿ.ಆರ್. 2303 ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ದಿನಾಂಕ: 30.09.2011ರೊಳಗೆ ನಡೆಸಬೇಕಾಗಿರುವ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಸಿಒ 213 ಸಿಎಲ್‌ಎಂ 2009, ದಿನಾಂಕ: 04.01.2010, 20.07.2010 ಮತ್ತು 18.02.2011.
2) ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ ಅಧ್ಯಕ್ಷರ ಪತ್ರ ಸಂಖ್ಯೆ: ಎಂಸಿಎಸ್‌ಎಂ/ಆ.ಮಂ.ಚು./2011-12/66. ದಿನಾಂಕ: 25.07.2011.

ಪ್ರಸ್ತಾವನೆ:

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2)ರಡಿ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ ಆಡಳಿತ ಸಮಿತಿಯ ಚುನಾವಣೆಯನ್ನು ದಿನಾಂಕ: 30.09.2011ರವರೆಗೆ ಮುಂದೂಡಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (2)ರ ಅಧ್ಯಕ್ಷರ ಪತ್ರದಲ್ಲಿ ಮೇಲ್ಕಂಡ ಸಹಕಾರ ಸಕ್ಕರೆ ಕಾರ್ಖಾನೆ ನಿ. ಇದರ ಜೋಡಣೆಯ ಕೆಲಸ ಅಂತಿಮ ಹಂತದಲ್ಲಿದ್ದು ಹಾಗೂ ಈಗ ಸುತ್ತಮುತ್ತ ಎಲ್ಲಾ ಹಳ್ಳಿಗಳು ಜಲಾವೃತವಾಗಿರುವುದರಿಂದ ಸದರಿ ಆಡಳಿತ ಸಮಿತಿಯ ಚುನಾವಣೆಯನ್ನು ದಿನಾಂಕ: 31.03.2012 ರವರೆಗೆ ಮುಂದೂಡಲು ಕೋರಿರುತ್ತಾರೆ. ಈಗಾಗಲೇ 18 ತಿಂಗಳ ಅವಧಿಗೆ ಚುನಾವಣೆಯನ್ನು ಮುಂದೂಡಿದ್ದು ಕಾನೂನಿನಲ್ಲಿ ಇನ್ನು ಆರು ತಿಂಗಳ ಅವಧಿಗೆ ಮಾತ್ರ ಮುಂದೂಡಲು ಅವಕಾಶವಿರುತ್ತದೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 14 ಸಸಕಾ 2011, ದಿನಾಂಕ : 09-09-2011

ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಅನ್ನು ಮಾರ್ಪಾಟು ಮಾಡಿ ಸದರಿ ಬ್ಯಾಂಕಿನ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ: 31.03.2012ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ: ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 31.03.2012ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2304 **ಆರ್.ಎಸ್. ನೂಲಿ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಸಹಕಾರ ಸಂಘಗಳ ಸಭೆ/ಚುನಾವಣೆಗಳಿಗೆ ಸಂಬಂಧಪಟ್ಟಂತೆ ನೋಟೀಸನ್ನು ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ : ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 124

ಪ್ರಸ್ತಾವನೆ:

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 124ರ ಪರಂತುಕದ ಅಡಿಯಲ್ಲಿ ಪದಾಧಿಕಾರಿಗಳ ಚುನಾವಣೆಯ ಉದ್ದೇಶಕ್ಕಾಗಿ ನಡೆಸುವ ಸಭೆಯನ್ನು ಹೊರತುಪಡಿಸಿ ಸಹಕಾರ ಸಂಘದ ಯಾವುದೇ ಸಭೆಗೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ನೋಟೀಸನ್ನು ಅಂಚೆ ಪ್ರಮಾಣ ಪತ್ರದ ಮೂಲಕ ನೀಡತಕ್ಕದ್ದು ಎಂದಿರುತ್ತದೆ. ಆದರೆ, ದಿನಾಂಕ: 31.01.2011 ರಿಂದ ಅಂಚೆ ಇಲಾಖೆಯು ಅಂಚೆ ಪ್ರಮಾಣ ಪತ್ರದ ಮೂಲಕ ಕಳುಹಿಸಿಕೊಡುವ ವ್ಯವಸ್ಥೆಯನ್ನು ರದ್ದುಗೊಳಿಸಿರುತ್ತಾರೆ. ಈ ಕುರಿತು ಸಹಕಾರ ಸಂಘಗಳ ನಿಬಂಧಕರು ತಮ್ಮ ವರದಿಯನ್ನು ಸಲ್ಲಿಸಿ ಈಗಿರುವ ಪ್ರಕರಣ 124ರ ಅಡಿಯಲ್ಲಿ ಸರ್ವಸದಸ್ಯರ ಸಭಾ ನೋಟೀಸುಗಳನ್ನು ಯಾವ ವಿಧಾನದ ಮೂಲಕ ಕಳುಹಿಸಬೇಕೆಂಬ ಬಗ್ಗೆ ಗೊಂದಲಕರ ಪರಿಸ್ಥಿತಿ ಉಂಟಾಗಿರುತ್ತದೆ. ಮುಂದುವರೆದು, ನೋಂದಾಯಿತ ಅಂಚೆ, ಕೊರಿಯರ್, ತ್ವರಿತ ಅಂಚೆ ಮೂಲಕ ನೋಟೀಸು ಕಳುಹಿಸಿದಲ್ಲಿ ಸಂಘಗಳಿಗೆ ಆರ್ಥಿಕ ಹೊರೆ ಹೆಚ್ಚಾಗಿ ದುಬಾರಿ ವೆಚ್ಚವಾಗುವುದರಿಂದ ಈಗಿರುವ ಪ್ರಕರಣ 124ರ ಪರಂತುಕವನ್ನು ಭಾಗಶಃ ಮಾರ್ಪಡಿಸಿ ಪ್ರಕರಣ 121ರ ಅಡಿಯಲ್ಲಿ ಇರುವ ಅಧಿಕಾರದ ಮೇರೆಗೆ ಮಾರ್ಪಾಡು ಮಾಡಲು ಶಿಫಾರಸು ಮಾಡಿರುತ್ತಾರೆ. ಸರ್ಕಾರವು ಈ ಪ್ರಸ್ತಾವವನ್ನು ಪರಿಶೀಲಿಸಿ ಪ್ರಕರಣ 124ರ ಪರಂತುಕಕ್ಕೆ ಮಾರ್ಪಾಡು ಮಾಡುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 159 ಸಿಎಲ್ಎಂ 2011, ಬೆಂಗಳೂರು, ದಿನಾಂಕ : 12–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 124ರ ಪರಂತುಕವನ್ನು ಕೂಡಲೇ ಜಾರಿಗೆ ಬರುವಂತೆ ಕೆಳಗಿನಂತೆ ಮಾರ್ಪಾಡು ಮಾಡಿ ಆದೇಶಿಸುತ್ತದೆ.

"ಪ್ರಕರಣ–124 ಈ ಅಧಿನಿಯಮದ ಮೇರೆಗೆ ನೋಟೀಸಿನ ಜಾರಿ:–

ಪರಂತು, ಪದಾಧಿಕಾರಿಗಳ ಚುನಾವಣೆಯ ಉದ್ದೇಶಕ್ಕಾಗಿ ನಡೆಸುವ ಸಭೆಯನ್ನು ಹೊರತುಪಡಿಸಿ ಸಹಕಾರ ಸಂಘದ ಯಾವುದೇ ಸಭೆಗೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ನೋಟೀಸನ್ನು ಸಾಮಾನ್ಯ ಅಂಚೆ ಅಥವಾ ಬಲ್ಕ್ ಪೋಸ್ಟಿಂಗ್ ವ್ಯವಸ್ಥೆ ಇರುವಂತಹ ಸ್ಥಳಗಳಲ್ಲಿ ಅದರ ಮೂಲಕ ಮತ್ತು ನೋಂದಾಯಿತ ಕಚೇರಿಯ ಸೂಚನಾ ಫಲಕ ಹಾಗೂ ಸಂಘದ ಶಾಖೆಗಳಿದ್ದಲ್ಲಿ ಅದರ ಸೂಚನಾ ಫಲಕಗಳಲ್ಲಿ ಮತ್ತು

(1) ಜಿಲ್ಲಾ ಮಟ್ಟಕ್ಕಿಂತ ಕಡಿಮೆ ವ್ಯಾಪ್ತಿಯುಳ್ಳ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಆಯಾ ಪ್ರದೇಶದಲ್ಲಿ ಹೆಚ್ಚಿನ ಪ್ರಸಾರವುಳ್ಳ ಒಂದು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

(2) ಜಿಲ್ಲಾ ಮಟ್ಟ ಮತ್ತು ಮೇಲ್ಪಟ್ಟ ಹಾಗೂ ರಾಜ್ಯ ವ್ಯಾಪ್ತಿಯುಳ್ಳ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಆಯಾ ಪ್ರದೇಶದಲ್ಲಿ ಹೆಚ್ಚಿನ ಪ್ರಸಾರವುಳ್ಳ ಒಂದು ಕನ್ನಡ ದಿನಪತ್ರಿಕೆಯಲ್ಲಿ ಹಾಗೂ ಒಂದು ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2305

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

CO-OPERATION SECRETARIAT

Sub: Service of Notice relating to any meeting / election of the Co-operative societies regarding.

Read: Proviso to Section 124 of the Karnataka Co-operative Societies Act 1959.

Preamble:

As per the proviso to section 124 of the Karnataka Co-operative Societies act 1959, a notice relating to any meeting or election of a co-operative society, other than the meeting convened for the purpose of election of office bearers, shall be issued by certificate of posting. But, the postal department has discontinued certificate of posting system from 31-01-2011. The Registrar of Co-operative Societies in his report informed that there is a confusion regarding the mode of service of notice as provided under section 124 of the Karnataka Co-operative Societies act 1959. Further, if the notices are sent by registered post, courier, speed post, it will be heavy financial burden on the Co-operative Societies, and has recommended for partial modification of proviso to section 124 by exercising power under section 121 of the Karnataka Co-operative Societies act 1959. The Government has considered the proposal and decided to modify proviso to section 124 of the Karnataka Co-operative Societies act 1959, Hence, the following Order.

Government Order No. CO 159 CLM 2011, Bangalore, dated 12-09-2011

In the circumstances stated in the preamble, the Government in exercise of the powers vested under section 121 of the Karnataka Co-operative Societies act 1959 hereby modify the proviso to section 124 of the said act with immediate effect as below.

Section 124: Service of notice under the act

Provided that a notice relating to any meeting or election of a Co-operative Society, other than the meeting convened for the purpose of election of office bearers shall be issued by ordinary post or through bulk posting facility, wherever available, besides publishing it on the notice board of the registered office and the branches of the society, if any and

i) In respect of Co-operative societies whose area of operation is less than the district, by publishing it in one Kannada daily newspaper having wide circulation in that area;

ii) In respect of Co-operative societies whose area of operation is district and above and up to State level, by publishing it in one Kannada daily and one English daily newspaper having wide circulation in that area.

By Order and in the name of the Governor of Karnataka
R. S. Nuli
Officer on Special Duty & Ex-officio
Joint Secretary to Government
Co-operation Department

P.R. 2306

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ವಿಶ್ವ ಬಂಡವಾಳ ಹೂಡಿಕೆ ಸಮಾವೇಶ–2012ಕ್ಕೆ ಕಾರ್ಯಪಡೆ ರಚಿಸುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಪತ್ರ ಸಂಖ್ಯೆ: ಕೆಯುಎಂ/ಜಿಐಎಂ–2012–ಎಫ್‌ಓಸಿ/2011–12, ದಿನಾಂಕ 23–07–2011.

(2) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರ ಪತ್ರ ಸಂಖ್ಯೆ: ಡಿಐಟಿ/ಎಸ್‌ಎ/ಓಟಿಹೆಚ್/03/2008–09/432, ದಿನಾಂಕ 29–08–2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 23–07–2011ರ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಇವರ ಪತ್ರದಲ್ಲಿ ವಿಶ್ವ ಬಂಡವಾಳ ಹೂಡಿಕೆ ಸಮಾವೇಶ–2012ನ್ನು ದಿನಾಂಕ 07–08–2012 ರಂದು ನಡೆಸಲಾಗುತ್ತಿದ್ದು, ಸದರಿ ಸಮಾವೇಶದಲ್ಲಿ ಎಲ್ಲಾ ಇಲಾಖೆಗಳು ಅತಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವ ನಿರೀಕ್ಷೆ ಇರುವ ಕಾರಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಕ್ಕೆ ಸಂಬಂಧಪಟ್ಟಂತೆ ಹೂಡಿಕೆಗಳನ್ನು ಸಂಗ್ರಹಣೆಯ ಎಲ್ಲಾ ಜವಾಬ್ದಾರಿ ಹಾಗೂ ಈ ಸಮಾವೇಶಕ್ಕೆ ಸಂಬಂಧಿಸಿದಂತೆ ನಡೆಸಲಾಗುವ ಸೆಮಿನಾರ್, ಕಾನ್‌ಫರೆನ್ಸ್‌ಗಳನ್ನು ಸಂಯೋಜಿಸಲು (Co-ordinate), ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಮಾಹಿತಿ ತಂತ್ರಜ್ಞಾನ ಕಾರ್ಯಪಡೆ ರಚಿಸುವಂತೆ ಸೂಚಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಂತೆ ಮಾಹಿತಿ ತಂತ್ರಜ್ಞಾನ ಕಾರ್ಯಪಡೆಯನ್ನು ರಚಿಸಲು ಶಿಫಾರಸ್ಸು ಮಾಡಿರುತ್ತಾರೆ.

1) ಬಿ.ಎಂ.ಆರ್.ಡಿ.ಎ. ... ಸದಸ್ಯರು
2) ಇಂಡಿಯನ್ ಸೆಮಿಕಂಡಕ್ಟರ್ ಅಸೋಸಿಯೇಷನ್ (ISA) ... „
3) ಅಸೋಸಿಯೇಷನ್ ಆಫ್ ಬಯೋಟೆಕ್ನಾಲಜಿ ಲೆಡ್ ಎಂಟರ್‌ಪ್ರೈಸಸ್ (ABLE) ... ಸದಸ್ಯರು
4) ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರೀ (ABAI) ... „

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಮಾತಂಇ 24 ಎಂಐಎಸ್ 2011, ಬೆಂಗಳೂರು, ದಿನಾಂಕ : 16–09–2011.

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ವಿಶ್ವ ಬಂಡವಾಳ ಹೂಡಿಕೆ ಸಮಾವೇಶ–2012ರ ಅಂಗವಾಗಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಮಾಹಿತಿ ತಂತ್ರಜ್ಞಾನ ಕಾರ್ಯಪಡೆಯನ್ನು ರಚಿಸಲು ಆದೇಶಿಸಿದೆ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಾತಂ, ಜೈತಂ ಹಾಗೂ ವಿತಂ ಇಲಾಖೆ ... ಅಧ್ಯಕ್ಷರು
2) ಆಯುಕ್ತರು, ಬಿ.ಎಂ.ಆರ್.ಡಿ.ಎ. ... ಸದಸ್ಯರು
3) ಅಧ್ಯಕ್ಷರು, ಇಂಡಿಯನ್ ಸೆಮಿಕಂಡಕ್ಟರ್ ಅಸೋಸಿಯೇಷನ್ (ISA) ... „
4) ಅಧ್ಯಕ್ಷರು, ಅಸೋಸಿಯೇಷನ್ ಆಫ್ ಬಯೋಟೆಕ್ನಾಲಜಿ ಲೆಡ್ ಎಂಟರ್‌ಪ್ರೈಸಸ್ (ABLE) ... „
5) ಅಧ್ಯಕ್ಷರು, ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರೀ (ABAI) ... „
6) ಪ್ರಾಂತೀಯ ನಿರ್ದೇಶಕರು, (Nasscom) ... „
7) ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ ... „
8) ಅಪರ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ... „
9) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ... ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಇ. ರಾಮಕೃಷ್ಣಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2307

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಗವಿಕಲರಿಗಾಗಿ ಕನಿಷ್ಠ 10% ರಷ್ಟು ಅನುದಾನ ಮೀಸಲಿಡುವ ಕುರಿತು.

ಓದಲಾಗಿದೆ : 1. ಕರ್ನಾಟಕ ವಿಧಾನ ಪರಿಷತ್ ಕಛೇರಿಯ ಪತ್ರ ಸಂಖ್ಯೆ: ಕವಿಪ/ಶಾರಶಾ/423/ಶಾನಿಕ್ಷೇಮಿಬ, ದಿನಾಂಕ 8–6–2011.

2. ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿ–ಕರ್ನಾಟಕ ಇವರ ಪತ್ರ ಸಂಖ್ಯೆ: ಅಂ.ಆ.ನಿ./3%/ವಿಸಸ/2011–2012/119, ದಿನಾಂಕ 10–5–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ಮತ್ತು (2)ರ ದಿನಾಂಕ 8–6–2011 ಮತ್ತು 10–5–2011ರ ಕರ್ನಾಟಕ ವಿಧಾನ ಪರಿಷತ್ ಕಛೇರಿ ಮತ್ತು ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿ–ಕರ್ನಾಟಕ ಇವರ ಪತ್ರಗಳಲ್ಲಿ ಕೋರಿರುವುದರ ಅನ್ವಯ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಗವಿಕಲರಿಗಾಗಿ ಗರಿಷ್ಠ 10 ಲಕ್ಷ ಅನುದಾನ ಒದಗಿಸುವ ಕುರಿತು ಸರ್ಕಾರ ತೀರ್ಮಾನಿಸಿರುತ್ತದೆ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು ಮಾರ್ಗಸೂಚಿಯನುಸಾರ ವೈಯಕ್ತಿಕ ಫಲಾನುಭವ ಆಧಾರಿತ ಕಾರ್ಯಕ್ರಮಗಳಿಗೆ ಒದಗಿಸಲು ಅವಕಾಶವಿಲ್ಲ. ಅಂಗವಿಕಲರ ಅಭಿವೃದ್ಧಿ ಹಿತದೃಷ್ಟಿಯಿಂದ ಈ ಮಾರ್ಗಸೂಚಿಗಳನ್ನು ಸಡಿಲಗೊಳಿಸಲು ನಿರ್ಧರಿಸಲಾಗಿದೆ. ಅಂತೆಯೇ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಯೋಇ 79 ಯೋವಿವಿ 2011, ಬೆಂಗಳೂರು, ದಿನಾಂಕ 08–09–2011.

2011–12 ಸಾಲಿನಿಂದ ಒದಗಿಸಲಾದ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಗವಿಕಲರ ಅಭಿವೃದ್ಧಿಗಾಗಿ ಪ್ರತಿ ವರ್ಷ ಶಾಸಕರುಗಳು ಗರಿಷ್ಠ 10 ಲಕ್ಷ ಅನುದಾನ ಒದಗಿಸಿ ಸದರಿ ಅನುದಾನದಿಂದ ಅಂಗವಿಕಲರಿಗೆ ತ್ರಿಚಕ್ರ ವಾಹನ ಮತ್ತು ಕೃತಕ ಕಾಲುಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಅಂಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ.

"ಜಿಲ್ಲಾಧಿಕಾರಿಗಳನ್ನೊಳಗೊಂಡ ಜಿಲ್ಲೆಯ ಮುಖ್ಯ ವೈದ್ಯಾಧಿಕಾರಿಗಳು ಅಂಗವಿಕಲರ ಅರ್ಜಿಗಳನ್ನು ಪರಿಶೀಲಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಅರ್ಹತೆಯನ್ನು ದೃಢೀಕರಿಸಿ ಅರ್ಹ ಫಲಾನುಭವಿಗಳಿಗೆ ಮಾತ್ರ ಈ ಯೋಜನೆಯ ಸವಲತ್ತು ಒದಗಿಸಬೇಕು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 2308

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಜಿ. ಸಿ. ಅನಿಲ್‌ಕುಮಾರ್, ಕೆಎಎಸ್ (ಹಿರಿಯ ಶ್ರೇಣಿ), ಶ್ರೀ ಕೆ. ಬಿ. ಚಿಕ್ಕಬೆಟ್ಟಯ್ಯ, ಕೆಎಎಸ್ (ಕಿರಿಯ ಶ್ರೇಣಿ) ಮತ್ತು ಶ್ರೀ ಹೆಚ್. ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ) ಇವರ ಅಮಾನತ್ತನ್ನು ರದ್ದುಗೊಳಿಸಿ ಸೇವೆಯಲ್ಲಿ ಪುನರ್ ಸ್ಥಾಪಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 043 ಕೆಇವಿ 10 (ಭಾಗ), ಬೆಂಗಳೂರು, ದಿನಾಂಕ 16–09–2011.

ಶ್ರೀ ಜಿ. ಸಿ. ಅನಿಲ್‌ಕುಮಾರ್, ಕೆಎಎಸ್ (ಹಿರಿಯ ಶ್ರೇಣಿ) ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಶ್ರೀ ಕೆ. ಬಿ. ಚಿಕ್ಕಬೆಟ್ಟಯ್ಯ, ಕೆಎಎಸ್ (ಕಿರಿಯ ಶ್ರೇಣಿ) ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಮತ್ತು ಶ್ರೀ ಹೆಚ್. ಎಸ್. ರಾಮಕೃಷ್ಣ, ಕೆಎಎಸ್, (ಕಿರಿಯ ಶ್ರೇಣಿ) ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಇವರುಗಳನ್ನು ದಿನಾಂಕ 25–09–10 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 043 ಕೆಇವಿ 2010ರಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ.

ಶ್ರೀ ಜಿ. ಸಿ. ಅನಿಲ್ ಕುಮಾರ್, ಕೆಎಎಸ್ (ಹಿರಿಯ ಶ್ರೇಣಿ), ಶ್ರೀ ಕೆ. ಬಿ. ಚಿಕ್ಕಬೆಟ್ಟಯ್ಯ, ಕೆಎಎಸ್ (ಕಿರಿಯ ಶ್ರೇಣಿ) ಮತ್ತು ಶ್ರೀ ಹೆಚ್. ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ) ಇವರುಗಳ ಅಮಾನತ್ತನ್ನು ತೆರವುಗೊಳಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಲು ಸರ್ಕಾರವು ಭಾವಿಸಿರುವುದರಿಂದಲೂ.

ಸರ್ಕಾರವು ಶ್ರೀ ಜಿ. ಸಿ. ಅನಿಲ್‌ಕುಮಾರ್, ಕೆಎಎಸ್ (ಹಿರಿಯ ಶ್ರೇಣಿ), ಶ್ರೀ ಕೆ. ಬಿ. ಚಿಕ್ಕಬೆಟ್ಟಯ್ಯ, ಕೆಎಎಸ್ (ಕಿರಿಯ ಶ್ರೇಣಿ) ಮತ್ತು ಶ್ರೀ ಹೆಚ್. ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ) ಇವರುಗಳ ವಿರುದ್ಧದ ಶಿಸ್ತು ಕ್ರಮವನ್ನು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ, ಇವರನ್ನು ಸೇವೆಯಲ್ಲಿ ಪುನರ್‌ಸ್ಥಾಪಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಸೇವೆಗಳು–2)

ಪಿ.ಆರ್. 2309

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ ಆದೇಶ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಜಿಎಡಿ 7 ಡಿಎಸ್‌ಡಬ್ಲ್ಯೂ 69, ದಿನಾಂಕ 19-10-1972
2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 215 ಎಲ್‌ಎಂಎಕ್ಸ್ 86, ದಿನಾಂಕ 20-10-1990
3) ಅಧಿಸೂಚನೆ ಸಂಖ್ಯೆ: ಸಿಆಸುಇ 667 ಎಲ್‌ಎಂಎಕ್ಸ್ 98, ದಿನಾಂಕ 22-10-1999
4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಈಸಪ 2010, ದಿನಾಂಕ 26-08-2010
5) ದಿನಾಂಕ 14-06-2011ರಂದು 2-00 ಗಂಟೆಗೆ ನಡೆದ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿ ಸಭೆ.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1), (2) ಮತ್ತು (3)ರಂತೆ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ರಚಿಸುವ ಬಗ್ಗೆ ನಿಯಮಗಳನ್ನು ರೂಪಿಸಲಾಗಿದೆ. ಅದರಂತೆ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಕಾಲಕಾಲಕ್ಕೆ ಎರಡು ವರ್ಷಗಳ ಅವಧಿಗೆ ಪುನರ್ ರಚಿಸಲಾಗುತ್ತಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರಲ್ಲಿನ ದಿನಾಂಕ 26-08-2010ರ ಸರ್ಕಾರದ ಆದೇಶದಲ್ಲಿ ರಚಿಸಲಾಗಿರುವ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಎರಡು ವರ್ಷಗಳ ಅವಧಿಗೆ ರಚಿಸಲಾಗಿತ್ತು. ದಿನಾಂಕ 14-06-2011 ರಂದು ನಡೆದ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಮಾತನಾಡುತ್ತಾ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಪುನರ್ ರಚಿಸಿ ದಿನಾಂಕ 26-08-2010 ರಂದು ಆದೇಶವನ್ನು ಹೊರಡಿಸಲಾಗಿದೆ. ಆದರೆ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿ ಸಭೆಯನ್ನು 2 ತಿಂಗಳಿಗೊಮ್ಮೆಯಾದರೂ ನಡೆಸಬೇಕಾಗಿದ್ದು, ರಚನೆಗೊಂಡ ನಂತರ ಈ ದಿನದವರೆವಿಗೂ ಕಾರ್ಯಬಾಹುಳ್ಯದಿಂದ ಒಂದೂ ಸಭೆಯನ್ನು ನಡೆಸಿಲ್ಲವಾದ ಪ್ರಯುಕ್ತ ದಿನಾಂಕ 14-06-2011 ರಿಂದ ಜಾರಿಗೆ ಬರುವಂತೆ 2 ವರ್ಷಗಳ ಅವಧಿಗೆ ಪುನಃ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ಪುನರ್ ರಚಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಈಸಪ 2010, ಬೆಂಗಳೂರು, ದಿನಾಂಕ 03-09-2011.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು/ಜಂಟಿ ಸಮಾಲೋಚನಾ ಸಮಿತಿ ಪ್ರಧಾನ ಕಾರ್ಯದರ್ಶಿಗಳ ಕೋರಿಕೆ ಮೇರೆಗೆ, ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಮತ್ತು ನೌಕರರ ಸಂಘದ ಪ್ರತಿನಿಧಿಗಳನ್ನೊಳಗೊಂಡ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿಯನ್ನು ದಿನಾಂಕ 14-06-2011 ರಿಂದ ಜಾರಿಗೆ ಬರುವಂತೆ 2 ವರ್ಷಗಳ ಅವಧಿಗೆ ಕೆಳಕಂಡಂತೆ ಪುನರ್ ರಚಿಸಿದೆ.

ಸರ್ಕಾರದ ಪ್ರತಿನಿಧಿಗಳು

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ... ಅಧ್ಯಕ್ಷರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಆಡಳಿತ) ... ಸದಸ್ಯರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ) ... ,,
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ... ,,
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ) ... ,,
6) ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ ... ,,
7) ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ... ,,

ನೌಕರರ ಸಂಘದ ಪ್ರತಿನಿಧಿಗಳು

ಕ್ರ.ಸಂ.	ಹೆಸರು ಮತ್ತು ಕಛೇರಿ	ಇಲಾಖೆ	ಸಮಿತಿಯಲ್ಲಿನ ಪದನಾಮ
01	ಶ್ರೀ ಎಲ್. ಬೈರಪ್ಪ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು	ಕರ್ನಾಟಕ ಸರ್ಕಾರದ ಸಚಿವಾಲಯ, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು	ಸದಸ್ಯರು
02	ಶ್ರೀ ರಂಗೇಗೌಡ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು	ಸದಸ್ಯರು
ಕ್ರಮ ಸಂಖ್ಯೆ	ಗ್ರಾಮ	ಸ.ಸಂ.	ಎಂ.ಎಸ್.ಇ. ಝೆಡ್–ಟ್ರಕ್ ಟರ್ಮಿನಲ್ ಸ್ಥಾಪನೆ ಬಗ್ಗೆ ಮಂಡಳಿಗೆ ಹಿಂಪಡೆಯಲು ಉದ್ದೇಶಿಸಿರುವ ವಿಸ್ತೀರ್ಣ (ಎಕರೆಗಳಲ್ಲಿ)	ಪ್ರಸಕ್ತ ಸ್ಥಿತಿ
1	2	3	4	5
1	ಕೆಂಜಾರು	126/7	0.88	CRZ-III
2	ಕೆಂಜಾರು	126/14	0.38	CRZ-III
3	ಕೆಂಜಾರು	126/15A	0.2	CRZ-III
4	ಕೆಂಜಾರು	126/15B	0.56	CRZ-III
5	ಕೆಂಜಾರು	127/1	0.88	
6	ಕೆಂಜಾರು	127/2	1.37	
7	ಕೆಂಜಾರು	128/1	0.32	
8	ಕೆಂಜಾರು	128/2	1.86	
9	ಕೆಂಜಾರು	130/1	1.32	CRZ-I
10	ಕೆಂಜಾರು	130/2	1.02	CRZ-I
11	ಕೆಂಜಾರು	131/6	0.31	CRZ-I
12	ಕೆಂಜಾರು	131/7	0.85	CRZ-I
13	ಕೆಂಜಾರು	131/8	0.27	CRZ-I
14	ಕೆಂಜಾರು	131/11	0.69	CRZ-I
15	ಕೆಂಜಾರು	131/13	1.02	CRZ-I
16	ಕೆಂಜಾರು	133/4	0.44	CRZ-I
17	ಕೆಂಜಾರು	133/9	0.32	CRZ-I
18	ಕೆಂಜಾರು	133/10	0.57	CRZ-I
19	ಕೆಂಜಾರು	133/11	0.31	CRZ-I
20	62–ತೋಕೂರು	73/1B	2.71	CRZ-I & III
21	62–ತೋಕೂರು	73/2	0.59	CRZ-I & III
22	62–ತೋಕೂರು	76/C	0.23	CRZ-I
23	62–ತೋಕೂರು	76/D1	0.14	CRZ-I
24	62–ತೋಕೂರು	76/D2	1.16	CRZ-I
25	62–ತೋಕೂರು	76/D3	0.092	CRZ-I
26	62–ತೋಕೂರು	76/E	1.13	CRZ-I
27	62–ತೋಕೂರು	77/1	0.19	CRZ-I
28	62–ತೋಕೂರು	77/2	0.38	CRZ-I
29	62–ತೋಕೂರು	77/3	0.4	CRZ-I
30	62–ತೋಕೂರು	77/4	1.47	CRZ-I
31	62–ತೋಕೂರು	77/5	0.05	CRZ-I
32	62–ತೋಕೂರು	78/1	0.46	CRZ-I
33	62–ತೋಕೂರು	78/2A	1.02	CRZ-I
34	62–ತೋಕೂರು	78/2B	0.38	CRZ-I
35	62–ತೋಕೂರು	78/3	2.39	CRZ-I
36	62–ತೋಕೂರು	78/4	0.8	CRZ-I
37	62–ತೋಕೂರು	78/5	1.35	CRZ-I
38	62–ತೋಕೂರು	78/6	0.43	CRZ-I
39	62–ತೋಕೂರು	78/7	0.98	CRZ-I

40	62–ತೋಕೂರು	79/1A	0.35	
41	62–ತೋಕೂರು	79/1B	0.54	
42	62–ತೋಕೂರು	79/2	0.45	
43	62–ತೋಕೂರು	79/3	0.83	
44	62–ತೋಕೂರು	79/3	0.82	
45	62–ತೋಕೂರು	79/4	2.33	
46	62–ತೋಕೂರು	79/5	0.93	
47	62–ತೋಕೂರು	79/6A	1.87	
48	62–ತೋಕೂರು	79/6B	0.08	
49	62–ತೋಕೂರು	79/6C	0.09	
50	62–ತೋಕೂರು	79/6D	0.12	
51	62–ತೋಕೂರು	79/6E	0.13	
52	62–ತೋಕೂರು	79/6F	0.41	
53	62–ತೋಕೂರು	79/7A	0.24	
54	62–ತೋಕೂರು	79/7B	0.14	
55	62–ತೋಕೂರು	79/9	0.3	
56	62–ತೋಕೂರು	79/10	0.15	
57	62–ತೋಕೂರು	79/17	0.25	
58	62–ತೋಕೂರು	79/18	0.09	
59	62–ತೋಕೂರು	82/10	0.19	
60	62–ತೋಕೂರು	82/11	1.14	
61	62–ತೋಕೂರು	82/12	0.59	
62	62–ತೋಕೂರು	82/13	0.7	
63	62–ತೋಕೂರು	82/15	0.38	
64	62–ತೋಕೂರು	82/16	0.74	
65	62–ತೋಕೂರು	82/17	0.26	
66	62–ತೋಕೂರು	82/18	0.42	
67	62–ತೋಕೂರು	83/1	1.75	CRZ-I & III
68	62–ತೋಕೂರು	83/2	0.16	CRZ-I & III
69	62–ತೋಕೂರು	83/11	0.59	CRZ-I & III
70	62–ತೋಕೂರು	83/13	0.58	CRZ-I & III
71	62–ತೋಕೂರು	83/14	0.85	CRZ-I & III
			48.39	

ಘೋಷ್ವಾರೆ

ಕ್ರಮ ಸಂಖ್ಯೆ	ವಿವರ	ಮೆ॥ ಜೆಸ್ಕೋ ಸಂಸ್ಥೆಗೆ ಸ್ವಾಧೀನ ವಹಿಸಿಕೊಟ್ಟ ಜಮೀನಿನಿಂದ ಮಂಡಳಿಗೆ ಹಿಂಪಡೆಯಲು ಉದ್ದೇಶಿಸಿರುವ ವಿಸ್ತೀರ್ಣ (ಎಕರೆಗಳಲ್ಲಿ)
1	ಜಿಲ್ಲಾಡಳಿತದ ಕಛೇರಿ, ಕ್ರೀಡಾಂಗಣ ನಿರ್ಮಾಣ ಹಾಗೂ ಕೈಗಾರಿಕಾ ಪ್ರದೇಶದ ಸ್ಥಾಪನೆ ಬಗ್ಗೆ	127.37
2	ಜಿಲ್ಲಾಡಳಿತದ ಕಛೇರಿ, ಕ್ರೀಡಾಂಗಣ ಹಾಗೂ ಕೈಗಾರಿಕಾ ಪ್ರದೇಶದ ಸಂಪರ್ಕ ರಸ್ತೆ ನಿರ್ಮಾಣ ಬಗ್ಗೆ	17.81
3	ಮಂಗಳೂರು ವಿಶೇಷ ಆರ್ಥಿಕ ವಲಯದ ಟ್ರಕ್ ಟರ್ಮಿನಲ್ ಸ್ಥಾಪನೆ ಬಗ್ಗೆ	48.39
	ಮಂಡಳಿಗೆ ಹಿಂಪಡೆಯಲು ಉದ್ದೇಶಿಸಿರುವ ಒಟ್ಟು ಜಮೀನು	193.57

A.V. SRINIVASA DIKSHIT
Desk Officer (Technical Cell)
Commerce & Industries Department.

P.R. No. 2320

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ : ನಅಇ 61 ಯುಎಂಎಸ್ 2011, ಬೆಂಗಳೂರು ದಿನಾಂಕ : 15–09–2011

ವಿಷಯ : ಶಿರಾ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 4595.00 ಲಕ್ಷಗಳಲ್ಲಿ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ : ನಅಇ 10 ಯುಡಿಎಸ್ 2010, ದಿನಾಂಕ : 10–05–2011.

ಶಿರಾ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸರ್ಕಾರದ ಆದೇಶ ಸಂಖ್ಯೆ : ನಅಇ 10 ಯುಡಿಎಸ್ 2010, ದಿನಾಂಕ : 10–05–2011ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಸದರಿ ಆದೇಶ ಭಾಗದಲ್ಲಿ "ಶಿರಾ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ. 4409.00 ಲಕ್ಷಗಳು ಎಂಬುದಕ್ಕೆ ಬದಲಾಗಿ ರೂ. 4236.60 ಲಕ್ಷಗಳು ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2321 ನಗರಾಭಿವೃದ್ಧಿ ಇಲಾಖೆ

COMMERCE AND INDUSTRIES SECRETARIAT

Sub :- Releasing Rs. 20,00,000/- (Rupees twenty lakhs) in favour of the Committee constituted to undertake a comprehensive exercise for evaluation of the damages caused to the jambunatheshwara Temple due to mining operations - regarding.

Read :- 1. G.O. No. CI 119 : MPP 2010, dated : 28-06-2011.

2. Letter No. DMG : LS : SLP : 20180 : 2010-11-12 : 3799 dated : 26-08-2011.

Preamble:

Shri K. Guruprasad Rao filed a S.L.A. No. 20180/2010 before Hon'ble Supreme Court seeking direction to stay the mining operations by M/s Aarpee Iron ore Mines. The Hon'ble Supreme Court in its proceedings held on 26-04-2011 has constituted a Committee to undertake comprehensive exercise for evaluation of damages if any caused to Jambunatheshwara Temple due to mining operations. Accordingly, a G.O. has been issued on 28-06-2011 vide reference read at Sl.No. (1) above.

Hon'ble Supreme Court in their record of proceedings dated 29-07-2011 has directed the State Government to take suitable steps to release a sum of Rs. 20 lakhs in favour of the Committee to undertake exercise as per the Court Order.

Pursuant to this, the Director of Mines and Geology in his letter read at Sl.No. (2) above has requested to release Rs. 20 lakhs in favour of the Committee.

After careful consideration of the record of proceedings of the Hon'ble Supreme Court dated 29-07-2011 and the proposal of the Director of Mines and Geology dated 26-08-2011, Government has felt it necessary to issue Government Order in this regard. Hence, the following order :-

Government Order No. CI 119 : MPP 2010 (P), Bangalore, dated : 17-09-2011

A sum of Rs. 20 Lakhs (Twenty lakhs Rupees only) is sanctioned in favour of the Committee constituted as per the proceedings of the Hon'ble Supreme Court dated : 26-04-2011 to undertake the exercise envisaged in the Court's Order.

This amount may be met out under the Head of Account 2853-02-001-0-01(125) modernization.

This order is issued as per the financial power delegated to the Secretaries to Government vide Order No. FD 1 : TFP 2008 dated 16-05-2008.

By Order and in the name of the Governor of Karnataka

M.V. Shivasubramani

Under Secretary to Government (Mines)

P.R. 2322 Commerce & Industries Department

ಇಂಧನ ಸಚಿವಾಲಯ

ವಿಷಯ : M/s KSK Wind Energy Nandgaon Athni Private Limited ಇವರಿಗೆ 137.5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 205 ಎನ್‌ಸಿಇ 2005 ದಿನಾಂಕ : 19–08–2005.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 226 ಎನ್‌ಸಿಇ 2011 ದಿನಾಂಕ : 10–05–2011.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/KSK-WENA(P)L (5 MW to 142.5 MW)/2011/1963, ದಿನಾಂಕ: 02/07–07–2011.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ : Fiza Developers & Inter Trade Pvt. Ltd. ರವರಿಗೆ ಬೆಳಗಾಂ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಟ್ಟು 36.35 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ : Fiza Developers & Inter Trade Pvt. Ltd. ರವರಿಗೆ ಮೇಲಿನ ಆದೇಶದಲ್ಲಿ ಹಂಚಿಕೆ ಮಾಡಲಾಗಿದ್ದ ಪವನ ವಿದ್ಯುತ್ ಯೋಜನೆಯಿಂದ 5.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ : KSK Wind Energy Nandgaon Athni Private Limited ಇವರಿಗೆ ಬೆಳಗಾಂ ಜಿಲ್ಲೆಯ Athni and Nandgaon ಗ್ರಾಮಗಳಲ್ಲಿ ಅನುಷ್ಠಾನಮಾಡಲು ವರ್ಗಾವಣೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s KSK Wind Energy Nandgaon Athni Private Limited ಇವರಿಗೆ ಬೆಳಗಾಂ ಜಿಲ್ಲೆಯ Athni and Nandgaon ಗ್ರಾಮಗಳಲ್ಲಿ ಅನುಷ್ಠಾನ ಮಾಡಲು ವರ್ಗಾವಣೆ ಮಾಡಲಾಗಿರುವ 5.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 142.5 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಶಿಫಾರಸ್ಸನ್ನು ಪರಿಶೀಲಿಸಲಾಯಿತು. M/s KSK Wind Energy Nandgaon Athni Private Limited ಇವರ ಯೋಜನಾ ಸಾಮರ್ಥ್ಯವನ್ನು 5.00 ಮೆ.ವ್ಯಾ. ನಿಂದ 142.5 ಮೆ.ವ್ಯಾ.ಗೆ ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸದರಿಯವರ ಕೋರಿಕೆಯನ್ನು ಹೊಸ ಕೋರಿಕೆ/ಅರ್ಜಿ ಎಂದು ಪರಿಗಣಿಸಿ 137.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s KSK Wind Energy Nandgaon Athni Private Limited ಇವರಿಗೆ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 302 ಎನ್‌ಸಿಇ 2011, ಬೆಂಗಳೂರು, ದಿನಾಂಕ: 15–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ M/s KSK Wind Energy Nandgaon Athni Private Limited ಇವರಿಗೆ ಬೆಳಗಾಂ ಜಿಲ್ಲೆಯ Athni and Nandgaon ಗ್ರಾಮಗಳಲ್ಲಿ ಒಟ್ಟು 137.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಡಲಾಗಿದೆ :–

Geographical area details	Transferred capacity in MW	Proposed capacity in MW
A large plain area with N.S. and S.W. orientation is situated on East of Athni town. This area appears to be agriculture and the complete area earmarked may not be fully utilized. The proposal is areas covered in the following Geographical Co-ordinates : Latitude : $16^0$40'24-$16^0$45'0"N Longitude : $75^0$3'22"-$75^0$7'56 E Ridge Peaks : 612, 609, 617,624 and 620m Amsl.	5.00	137.5

1. ಸದರಿ ಯೋಜನೆಯನ್ನು financial closure ಸಾಧಿಸಿದ 24 ತಿಂಗಳುಗಳ ಒಳಗಾಗಿ ಪ್ರಾರಂಭ ಮಾಡತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಯೋಜನಾಭಿವೃದ್ಧಿದಾರರು ರೂ. 400ರ ಛಾಪಾ ಕಾಗದದಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.
7. ಸದರಿ ಪ್ರಸ್ತಾವನೆಯು ವಿದ್ಯುತ್ ವಿತರಣಾ ಕಂಪನಿಗಳಿಗೆ ವಿದ್ಯುತ್ ಮಾರಾಟ ಮಾಡದೆ ಮೂರನೆಯ ವ್ಯಕ್ತಿಗಳಿಗೆ (Third Party) ಮಾರಾಟ ಮಾಡಲು ಉದ್ದೇಶಿಸಿರುವುದರಿಂದ ಹಾಗೂ ಎಸ್ಕಾಂಗಳ ಜೊತೆ ವಿದ್ಯುತ್ ಖರೀದಿ ಒಪ್ಪಂದದ ಒಡಂಬಡಿಕೆ ಮಾಡುವ ಅಗತ್ಯವಿಲ್ಲದ್ದರಿಂದ ಅಭಿವೃದ್ಧಿದಾರರು ನೇರವಾಗಿ ವಿದ್ಯುತ್ ಜಾಲದ ವ್ಯವಸ್ಥೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ. ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಲಾಗಿದೆ.
8. ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗುವುದು.
9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
10. ಈ ಹಂಚಿಕೆ ಅದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
11. ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ, ಸರ್ಕಾರದ ಆದೇಶದನುಸಾರ ಹೊಸ ಯೋಜನೆಗಳಿಗೆ ಅನ್ವಯಿಸುವಂತೆ ನಿಗದಿಪಡಿಸಿರುವ ಯಾವುದೇ ರೀತಿಯ ಶುಲ್ಕಗಳನ್ನು ಪಾವತಿಸತಕ್ಕದ್ದು.
12. ಸದರಿ ಪವನ ವಿದ್ಯುತ್ ಯೋಜನೆಗೆ ಯಾವುದೇ ಸರ್ಕಾರಿ ಜಮೀನಿನ ಅವಶ್ಯಕತೆ ಇಲ್ಲದೆ ಸಂಪೂರ್ಣವಾಗಿ ಖಾಸಗೀ ಜಮೀನಿನಲ್ಲಿಯೇ ಬರುತ್ತದೆ ಎಂಬುದನ್ನು ಖಾತರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಖಾಸಗೀ ಜಮೀನಿಗೆ ಸಂಬಂಧಿಸಿದ ಆರ್‌ಟಿಸಿ ಪ್ರತಿಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸತಕ್ಕದ್ದು ಹಾಗೂ ಅಭಿವೃದ್ಧಿದಾರರು ಜಮೀನಿನ ಮಾಲೀಕರಿಂದ ಈ ಬಗ್ಗೆ ಸಮ್ಮತಿಯನ್ನು ಪಡೆದುಕೊಳ್ಳತಕ್ಕದ್ದು. ಒಂದು ವೇಳೆ ಇದಕ್ಕೆ ತಪ್ಪಿದಲ್ಲಿ ನೀಡಲಾಗಿರುವ ಅನುಮೋದನೆಯು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತದೆ.
13. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿಆರ್.ನಂ. 2323

ಇಂಧನ ಸಚಿವಾಲಯ

ವಿಷಯ : ಇಲಾಖಾ ಮುಂಬಡ್ತಿ ಸಮಿತಿಗಳ ರಚನೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರ ನೇಮಕದ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಂಇ 23 ಇಬಿಎಸ್ 98 ದಿನಾಂಕ : 11-06-1998.
2. ಸರ್ಕಾರಿ ಆದೇಶ ಸಂಖ್ಯೆ : ಡಿಇ 29 ಇಬಿಎಸ್ 2002 ದಿನಾಂಕ : 03-05-2002.
3. ತಿದ್ದೋಲೆ ಸಂಖ್ಯೆ : ಡಿಇ 29 ಇಬಿಎಸ್ 2002 ದಿನಾಂಕ : 28-05-2002.
4. ಸಿಆಸುಇ ಆದೇಶ ಸಂಖ್ಯೆ : ಸಿಆಸುಇ 18 ಸೇನೆನಿ 11 ದಿನಾಂಕ : 29-08-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿನ 'ಬಿ' ಸಮೂಹದ ನೌಕರರನ್ನು 'ಎ' ಸಮೂಹದ ಹುದ್ದೆಗಳಿಗೆ ಮತ್ತು 'ಸಿ' ಸಮೂಹದಿಂದ 'ಬಿ' ಸಮೂಹದ ಹುದ್ದೆಗಳಿಗೆ ಮುಂಬಡ್ತಿ ನೀಡಲು 4 ಸದಸ್ಯರ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸಲಾಗಿದೆ.

ನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು/ಉಪ ವಿದ್ಯುತ್ ಪರಿವೀಕ್ಷಕರು/ವಿದ್ಯುತ್ ಪರಿವೀಕ್ಷಕರು/ಹಿರಿಯ ಲೆಕ್ಕಾಧಿಕಾರಿ ಹುದ್ದೆ ಮತ್ತು ಲೆಕ್ಕಾಧಿಕಾರಿ ಹುದ್ದೆ (ಗ್ರೂಪ್ 'ಎ') ಗಳಿಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನೊಳಗೊಂಡಂತೆ ನೇಮಿಸಿ ಆದೇಶಿಸಲಾಗಿದೆ. ನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ತಿದ್ದುಪಡಿಯಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಿಂದ ಒಬ್ಬರನ್ನು ಸದಸ್ಯರನ್ನಾಗಿ ನೇಮಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ : 19-05-2010ರ ಆದೇಶವನ್ನು ಭಾಗಶಃ ಮಾರ್ಪಡಿಸಿ ಜೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇಲೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮುಂಬಡ್ತಿಯನ್ನು ಪರಿಗಣಿಸುವ ಉದ್ದೇಶಕ್ಕಾಗಿ ರಚಿಸಲಾದ ಇಲಾಖಾ ಮುಂಬಡ್ತಿ ಸಮಿತಿಗಳಲ್ಲಿ ಯಾವ ಹುದ್ದೆಗೆ ಮುಂಬಡ್ತಿಯನ್ನು ಪರಿಗಣಿಸಲಾಗುತ್ತದೆಯೋ ಆ ಹುದ್ದೆಗೆ ಸಮಾನವಾದ ಹುದ್ದೆಯನ್ನು ಅಥವಾ ಆ ಹುದ್ದೆಗಿಂತ ಮೇಲ್ಮಟ್ಟದ ಹುದ್ದೆಯನ್ನು ಧಾರಣ ಮಾಡಿರಬೇಕು. ಈ ಷರತ್ತನ್ನು ಪೂರೈಸುವ ಅಧಿಕಾರಿಯು ಅದೇ

ಇಲಾಖೆಯಲ್ಲಿರದಿದ್ದಲ್ಲಿ, ಈ ಷರತ್ತನ್ನು ಪೂರೈಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಧಿಕಾರಿಯ ಹೆಸರನ್ನು ಸೂಚಿಸುವಂತೆ ಆಡಳಿತ ಇಲಾಖೆಗಳು ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಅವರನ್ನು ಕೋರತಕ್ಕದ್ದು ಎಂದು ಸೂಚಿಸಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹೊರಡಿಸಿರುವ ಆದೇಶದಲ್ಲಿ ಸೂಚಿಸಿರುವಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ :

ಸರ್ಕಾರದ ಆದೇಶ ಸಂಖ್ಯೆ : ಇಎನ್ 105 ಇಬಿಎಸ್ 2011, ಬೆಂಗಳೂರು, ದಿನಾಂಕ : 14–09–2011

ಇಂಧನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಸುರೇಶ್ ಬಿ. ಕೃಷ್ಣಪ್ಪನವರ್, ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ (ಪರಿಶಿಷ್ಟ ಪಂಗಡ) ಇವರನ್ನು ಮುಖ್ಯ ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳಿಗೆ ಪದೋನ್ನತಿ ನೀಡಲು ರಚಿಸಲಾಗಿರುವ ಇಲಾಖಾ ಮುಂಬಡ್ತಿ ಸಮಿತಿಯ ಸದಸ್ಯರನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2324

ಸುಜಾತಮ್ಮ

ಪೀಠಾಧಿಕಾರಿ, ಇಂಧನ ಇಲಾಖೆ

ವಸತಿ ಸಚಿವಾಲಯ

ವಿಷಯ : ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವ್ಯಾಪ್ತಿಯಲ್ಲಿ "ನನ್ನ ಮನೆ–ಭರಿಸಬಹುದಾದ ವಸತಿ ಯೋಜನೆ" (Affordable Housing Scheme) ಅಡಿಯಲ್ಲಿ ಯೋಜನೆ ಜಾರಿಗೊಳಿಸಲು ತಾಂತ್ರಿಕ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ :
1. ದಿನಾಂಕ: 26.08.2011ರ ಸರ್ಕಾರದ ಆದೇಶ ಸಂಖ್ಯೆ:ವಇ 40 ಹೆಚ್ಎಹೆಚ್ 2010.
2. ದಿನಾಂಕ: 07.09.2011ರ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: MD RGRHCL 31 ADM 13 2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ "ನನ್ನ ಮನೆ–ಭರಿಸಬಹುದಾದ ವಸತಿ ಯೋಜನೆ" (Affordable Housing Scheme) ಯಡಿ ಬೆಂಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಮನೆಗಳ ನಿರ್ಮಾಣ ಕಾರ್ಯವನ್ನು ಅನುಷ್ಠಾನಗೊಳಿಸಲು ಆದೇಶವನ್ನು ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು ಇವರು "ನನ್ನ ಮನೆ–ಭರಿಸಬಹುದಾದ ವಸತಿ ಯೋಜನೆ" ಯಡಿ ಬೆಂಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಒಟ್ಟು 1668 (ನೆಲ+2ಮಹಡಿ) ಮನೆಗಳನ್ನು ನಿರ್ಮಾಣ ಮಾಡಲು ಆದೇಶ ನೀಡಲಾಗಿದೆ. ಸದರಿ ಮನೆಗಳ ನಿರ್ಮಾಣವನ್ನು ಪ್ರಿಫರ್ಡ್ ಬಿಡ್ಡರ್ M/s. KCP Project Ltd., Hyderabad ಸಂಸ್ಥೆಯಿಂದ Alternative Technology ಯನ್ನು ಅಳವಡಿಸಿ ಸದರಿ ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವ ಅವಶ್ಯಕತೆಯಿದ್ದು, ಈ ಕೆಳಕಂಡಂತೆ ತಾಂತ್ರಿಕ ತಜ್ಞರ ಸಮಿತಿಯನ್ನು ರಚಿಸಲು ಕೋರಿರುತ್ತಾರೆ.

1. Dr. V. Chandrashekar, IAS, Managing Director, RGRHCL
2. Dr. Vishwanatha, Chairman, Task Force, Gok
3. Chief Engineer (C&B) PWD, Bangalore
4. Shri R. Jaiprasad, Retired Engineer in Chief, PWD
5. Prof. Ranganath, BMS College of Engineering, Bangalore
6. Prof. B.R.S.Murthy, Retired Professor, IISc, Bangalore
7. Shri N.S.Mahadeva Prasad, General Manager (Programme Implementation)
8. Shri K. Vasudev, GM (Tech)
9. Shri Mr. E.P. Prakash, AGM (Tech)

ಈ ಸಮಿತಿಯ ಕಾರ್ಯವ್ಯಾಪ್ತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

1. "ನನ್ನ ಮನೆ" ಯೋಜನೆಯ ಅನುಷ್ಠಾನದಲ್ಲಿ ಈಗಾಗಲೇ ಪ್ರಿಫರ್ಡ್ ಬಿಡ್ಡರ್‌ನ ಪ್ರಸ್ತಾವನೆಯನ್ನು ಪರಿಶೀಲಿಸಲು ಹೊಸ ತಾಂತ್ರಿಕತೆ ಹಾಗೂ ಸಮಾನಾಂತರ ಇತರೆ ತಾಂತ್ರಿಕತೆಯ ಬಗ್ಗೆ ನಿಗಮಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.
2. ಪ್ರಿಫರ್ಡ್ ಬಿಡ್ಡರ್ M/s. KCP Project Ltd., Hyderabad ಸಂಸ್ಥೆಯು ಸದರಿ ತಾಂತ್ರಿಕತೆಯಲ್ಲಿನ ಅನುಭವ, ನೈಪುಣ್ಯತೆ, ಸಾಮರ್ಥ್ಯ ಅದಕ್ಕೆ ಬೇಕಾದಂತಹ ಸಂಪನ್ಮೂಲಗಳ ಲಭ್ಯತೆ ಹಾಗೂ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ವಿಧಾನದ ಬಗ್ಗೆ ವಿಶ್ಲೇಷಣಾ ವರದಿಯನ್ನು ಸಲ್ಲಿಸುವುದು.
3. ನಾಲ್ಕು ಪ್ಯಾಕೇಜ್‌ಗಳಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು PMC (Project Management Consultant) ಆಯ್ಕೆ ಮಾಡುವ ಬಗ್ಗೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: 40 ಹೆಚ್ಎಹೆಚ್, ಬೆಂಗಳೂರು, ದಿನಾಂಕ: 17ನೇ ಸೆಪ್ಟಂಬರ್ 2011

"ನನ್ನ ಮನೆ–ಭರಿಸಬಹುದಾದ ವಸತಿ ಯೋಜನೆ" ಅಡಿಯಲ್ಲಿ ಬೆಂಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಮನೆಗಳನ್ನು ಹೊಸ ತಾಂತ್ರಿಕತೆಯನ್ನು ಬಳಸಿ ನಿರ್ಮಾಣ ಮಾಡಲು ಈ ಕೆಳಕಂಡ ತಂತ್ರಜ್ಞರನ್ನೊಳಗೊಂಡ ತಜ್ಞರ ಸಮಿತಿ ರಚಿಸಿ ಸಮಿತಿಗೆ ಸೂಚಿಸಿರುವ ಕಾರ್ಯವ್ಯಾಪ್ತಿಯ ಅನುಗುಣವಾಗಿ ಜಾರಿಗೆ ತರಲು ಅನುಮೋದಿಸಿ ಸರ್ಕಾರದ ಆದೇಶ ಹೊರಡಿಸಿದೆ.

1. Dr. V. Chandrashekar, IAS, Managing Director, RGRHCL
2. Dr. Vishwanatha, Chairman, Task Force, Gok
3. Chief Engineer (C&B) PWD, Bangalore
4. Shri R. Jaiprasad, Retired Engineer in Chief, PWD
5. Prof. Ranganath, BMS College of Engineering, Bangalore
6. Prof. B.R.S.Murthy, Retired Professor, IISc, Bangalore
7. Shri N.S.Mahadeva Prasad, General Manager (Programme Implementation)
8. Shri K. Vasudev, GM (Tech)
9. Shri Mr. E.P. Prakash, AGM (Tech)

ಈ ಸಮಿತಿಯ ಕಾರ್ಯವ್ಯಾಪ್ತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

1. "ನನ್ನ ಮನೆ" ಯೋಜನೆಯ ಅನುಷ್ಠಾನದಲ್ಲಿ ಈಗಾಗಲೇ ಪ್ರಿಫರ್ಡ್ ಬಿಡ್ಡರ್‌ನ ಪ್ರಸ್ತಾವನೆಯನ್ನು ಪರಿಶೀಲಿಸಲು ಹೊಸ ತಾಂತ್ರಿಕತೆ ಹಾಗೂ ಸಮಾನಾಂತರ ಇತರೆ ತಾಂತ್ರಿಕತೆಯ ಬಗ್ಗೆ ನಿಗಮಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.
2. ಪ್ರಿಫರ್ಡ್ ಬಿಡ್ಡರ್ M/s. KCP Project Ltd., Hyderabad ಸಂಸ್ಥೆಯು ಸದರಿ ತಾಂತ್ರಿಕತೆಯಲ್ಲಿನ ಅನುಭವ, ನೈಪುಣ್ಯತೆ, ಸಾಮರ್ಥ್ಯ ಅದಕ್ಕೆ ಬೇಕಾದಂತಹ ಸಂಪನ್ಮೂಲಗಳ ಲಭ್ಯತೆ ಹಾಗೂ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ವಿಧಾನದ ಬಗ್ಗೆ ವಿಶ್ಲೇಷಣಾ ವರದಿಯನ್ನು ಸಲ್ಲಿಸುವುದು.
3. ನಾಲ್ಕು ಪ್ಯಾಕೇಜ್‌ಗಳಿಗೆ ಯೋಜನಾ ನಿರ್ವಹಣೆ ಸಲಹೆಗಾರರನ್ನು PMC (Project Management Consultant) ಆಯ್ಕೆ ಮಾಡುವ ಬಗ್ಗೆ.
4. ಟೆಂಡರ್‌ಗಳನ್ನು ಆಹ್ವಾನಿಸಲು Terms of Reference and Tender Documents, ಮೌಲ್ಯಮಾಪನವನ್ನು ತಯಾರಿಸಲು ಸರ್ಕಾರ/ನಿಗಮಕ್ಕೆ ಸಲಹೆ ಸೂಚನೆಗಳನ್ನು ನೀಡುವುದು.

ಸಮಿತಿಯು ಸಭೆ ಸೇರಿ ಹೊಸ ತಾಂತ್ರಿಕತೆ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಪ್ರತಿ ಸಭೆಗೆ ರೂ. 1000/–ದಂತೆ ಗೌರವಧನವನ್ನು ನೀಡಲು, ಸಭೆಗಳನ್ನು ನಿಗಮದ ಕೇಂದ್ರ ಕಛೇರಿಯಲ್ಲಿ ನಡೆಸಲು ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2325

ಶಿವಲಿಂಗ

ಪೀಠಾಧಿಕಾರಿ–2, ವಸತಿ ಇಲಾಖೆ

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಖಾನಾಪುರ ತಾಲ್ಲೂಕು ಖೇರವಾಡ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2011–12/3883, ದಿನಾಂಕ 22–07–2011.

ಪ್ರಸ್ತಾವನೆ:

ಬೆಳಗಾಂ ಜಿಲ್ಲೆ, ಖಾನಾಪುರ ತಾಲ್ಲೂಕು ಖೇರವಾಡ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಖೇರವಾಡ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ದಿನಾಂಕ 22–07–11ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ಗ್ರಾಮ ಚಾವಡಿಯಲ್ಲಿ ದಿನಾಂಕ 21–12–2005ರಂದು ಹೊರಡಿಸಿದೆ. ಭೂಸ್ವಾಧೀನಾಧಿಕಾರಿಗಳು ದಿನಾಂಕ 29–12–07 ರಂದು ರಚಿಸಿದ ಐತೀರ್ಪಿನಲ್ಲಿ ಪ್ರತಿ ಎಕರೆಗೆ ರೂ. 45,000/ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಧನ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಖಾನಾಪುರ ಸಿವಿಲ್ (ಹಿರಿಯ ವಿಭಾಗ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣವನ್ನು ದಾಖಲಿಸಿದ್ದು, ನ್ಯಾಯಾಲಯವು ಪ್ರತಿ ಎಕರೆಗೆ ರೂ. 1,75,000/–ಗಳನ್ನು ನಿಗದಿಪಡಿಸಿದೆ. ಸಿವಿಲ್ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ:ಆರ್‌ಡಿ 464 ಎಲ್‌ಸಿಬಿ 2010, ಆರ್‌ಡಿ 465 ಎಲ್‌ಸಿಬಿ 2010 ಮತ್ತು ಆರ್‌ಡಿ 466 ಎಲ್‌ಸಿಬಿ 2010, ದಿನಾಂಕ 06–07–2010ರಲ್ಲಿ ಅಭಿಪ್ರಾಯ ನೀಡಿದೆ. ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್‌ಎಸಿ	ಕೇರವಾಡ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	1/09	150/ಎ1, 150ಎ2, 150/ಬಿ	0–35	251169
2	2/09	345	1–08	333067
3	3/09	150/1ಪಿ1, 156/1ಪಿ2, 156/1ಪಿ3, 156/2	1–05	312282
	ಒಟ್ಟು			**896518**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 103 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 15ನೇ ಸೆಪ್ಟೆಂಬರ್ 2011

ಬೆಳಗಾಂ ಜಿಲ್ಲೆ, ಖಾನಾಪುರ ತಾಲ್ಲೂಕು ಖೇರವಾಡ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಖೇರವಾಡ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ರೂ. 8,96,518–00 ಗಳನ್ನು (ಎಂಟು ಲಕ್ಷದ ತೊಂಭತ್ತಾರು ಸಾವಿರದ ಐನೂರ ಹದಿನೆಂಟು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 8,96,518–00ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್. 2326

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು ಬಬಲಾದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010–11/4766, ದಿನಾಂಕ 16–12–2010.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು ಬಬಲಾದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಬಲಾದ ಗ್ರಾಮದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸಲು ರೂ. 6,71,003–00ಗಳ ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ದಿನಾಂಕ 27–04–2011ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ 06–01–2000ರಂದು ಹೊರಡಿಸಿದೆ. ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಉಪವಿಭಾಗಾಧಿಕಾರಿ, ಇಂಡಿ ಇವರು ದಿನಾಂಕ 30–10–2001ರಂದು ರಚಿಸಿರುವ ಐತೀರ್ಪಿನಲ್ಲಿ ಪ್ರತಿ ಎಕರೆಗೆ ರೂ. 25,000/–ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ. ಐತೀರ್ಪಿನಂತೆ ಪರಿಹಾರ ಧನ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಬಿಜಾಪುರ ಇವರು ದಿನಾಂಕ 03–09–2010 ರಂದು ನೀಡಿದ ಆದೇಶದಲ್ಲಿ ಈ ಕೆಳಕಂಡ ಜಮೀನಿನ ಮಾರುಕಟ್ಟೆ ಬೆಲೆಯನ್ನು ಪ್ರತಿ ಎಕರೆ ರೂ. 66,000/–ಗಳಿಗೆ ನಿಗದಿಪಡಿಸಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಮಾಲೀಕರು ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎಸಂಖ್ಯೆ:3997/05ನ್ನು ದಾಖಲಿಸಿರುತ್ತಾರೆ. ನ್ಯಾಯಾಲಯವು ಪ್ರತಿ ಎಕರೆಗೆ ರೂ. 66,000/–ಗಳಿಂದ ರೂ. 1.00 ಲಕ್ಷಕ್ಕೆ ನಿಗದಿಪಡಿಸಿ ಇತರೆ ಸವಲತ್ತುಗಳೊಂದಿಗೆ ಪಾವತಿಸಲು ಆದೇಶಿಸಿದೆ,

ಕ್ರ.ಸಂ.	ಎಲ್‌ಎಸಿ	ಎಂಎಫ್‌ಎ	ಬಬಲಾದ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	97/03	3997/05	84	5–20	6,71,003–00

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಲ್ಲವೆಂದು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ:ಲಾ 667 ಎಲ್‌ಬಿಎಸ್ 2010, ದಿನಾಂಕ 14–09–2010 ರಂದು ಅಭಿಪ್ರಾಯ ಪಟ್ಟಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 151 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 19ನೇ ಸೆಪ್ಟೆಂಬರ್ 2011

ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು ಬಬಲಾದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಬಲಾದ ಗ್ರಾಮಕ್ಕೆ ಸೇರಿದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಐ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಪರಿಹಾರ ಪಾವತಿಸಲು ರೂ. 6,71,003–00ಗಳನ್ನು (ಆರು ಲಕ್ಷದ ಎಪ್ಪತ್ತೊಂದು ಸಾವಿರದ ಮೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 6,71,003–00ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರದನ್ವಯ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2327 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಬಗ್ಗೆ ಇರುವ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಓದಲಾಗಿದೆ :
1. ದಿನಾಂಕ 17–10–2006ರ ಸರ್ಕಾರಿ ಆದೇಶ ಸಂಖ್ಯೆ: ಮಮಇ 99 ಮಮಅ 2006.
2. ದಿನಾಂಕ 19–06–2007ರ ಸರ್ಕಾರಿ ಆದೇಶ ಸಂಖ್ಯೆ: ಮಮಇ 99 ಮಮಅ 2006. (ಭಾಗ–2)
3. ದಿನಾಂಕ 23–03–2011ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರ ಸುತ್ತೋಲೆ ಸಂಖ್ಯೆ: ಮಮಅಇ:ಮಕ:ಬಾಯೋ:ಫಲೇ: 10–10–11.

ಪ್ರಸ್ತಾವನೆ :

ಹೆಣ್ಣು ಮಗುವಿನ ಸ್ಥಾನವನ್ನು ಕುಟುಂಬ ಹಾಗೂ ಸಮುದಾಯದಲ್ಲಿ ಹೆಚ್ಚಿಸುವ ದೃಷ್ಟಿಯಿಂದ 'ಭಾಗ್ಯಲಕ್ಷ್ಮಿ' ಎಂಬ ವಿನೂತನ ಯೋಜನೆಯನ್ನು ರಾಜ್ಯದ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಜಾರಿಗೆ ತಂದಿದೆ. ಅದರ ಪ್ರಕಾರ ರಾಜ್ಯದ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ, ಗುರುತಿನ ಚೀಟಿ ಹೊಂದಿರುವ ದಿನಾಂಕ 31–03–2006ರ ನಂತರ ಹುಟ್ಟಿದ ಹೆಣ್ಣು ಮಗುವಿನ ಹೆಸರಿನಲ್ಲಿ ಠೇವಣಿ ಇರಿಸಿ ಆ ಹೆಣ್ಣು ಮಗು 18 ವರ್ಷದ ಪ್ರಾಯಕ್ಕೆ ಬಂದ ನಂತರ ಆ ಮಗುವಿನ ಠೇವಣಿ ಮತ್ತು ಅದರ ಬಡ್ಡಿಯನ್ನು ನೀಡಲಾಗುವುದು. ಈ ಯೋಜನೆಯು ಬಡತನ ರೇಖೆಗಿಂತ ಕೆಳಗಿನ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ.

ಫಲಾನುಭವಿಗಳನ್ನು ನೋಂದಾಯಿಸಿಕೊಳ್ಳುವಾಗ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಬಡತನ ರೇಖೆಗಿಂತ ಕೆಳಗಿನ ಕುಟುಂಬ ಎಂದ ಗುರುತಿಸಿ ಕಡ್ಡಾಯ ಗುರುತಿನ ಚೀಟಿ ವಿತರಿಸದಿದ್ದ ಪ್ರಕರಣಗಳಲ್ಲಿ ಆ ಇಲಾಖೆಯು ನಿಗದಿಪಡಿಸಿರುವ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶಗಳಿಗೆ ರೂ. 12,000/– ಹಾಗೂ ಪಟ್ಟಣ ಪ್ರದೇಶಗಳಿಗೆ ರೂ. 17,000/– ಮಿತಿಯನ್ನು ಪರಿಗಣಿಸಿ ಅಧಿಕಾರ ವ್ಯಾಪ್ತಿ ಹೊಂದಿರುವ ತಹಸೀಲ್ದಾರರು ನೀಡುವ ಆದಾಯ ಪ್ರಮಾಣ ಪತ್ರವನ್ನೂ ಸಹ ಪರಿಗಣಿಸಲು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ನಿಯಮದ ಸಡಿಲಿಕೆಯಿಂದ ಬಡತನ ರೇಖೆಗಿಂತ ಮೇಲ್ಪಟ್ಟ ಕುಟುಂಬದವರೂ ಸಹ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬರಲಾಗಿ, ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಇನ್ನು ಮುಂದೆ ಎಲ್ಲಾ ಫಲಾನುಭವಿಗಳು ಮೂಲ ಬಿ.ಪಿ.ಎಲ್. ಕಾರ್ಡ್ ಮತ್ತು ಆದಾಯ ಪ್ರಮಾಣ ಪತ್ರಗಳೆರಡನ್ನೂ ಕಡ್ಡಾಯವಾಗಿ ಒದಗಿಸಬೇಕೆಂಬ ಷರತ್ತನ್ನು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸುತ್ತೋಲೆಯಲ್ಲಿ ತಿಳಿಸಲಾಯಿತು.

ಕೆಲವು ಫಲಾನುಭವಿಗಳನ್ನು ಈಗಾಗಲೇ ಹಿಂದಿನ ಮಾರ್ಗಸೂಚಿಗಳ ಪ್ರಕಾರ ಆಯ್ಕೆ ಮಾಡಲಾಗಿದ್ದು, ಅವರಿಗೆ ಈ ಹಂತದಲ್ಲಿ ಮಾನದಂಡಗಳನ್ನು ಬದಲಾವಣೆ ಮಾಡುವುದು ಸೂಕ್ತವಲ್ಲವೆಂದು ಭಾವಿಸಿದ್ದು, ಮುಂದಿನ ಫಲಾನುಭವಿಗಳನ್ನು ಆಯ್ಕೆ ಸಂದರ್ಭದಲ್ಲಿ ಅರ್ಹರಾದವರನ್ನು ಮಾತ್ರ ಗುರುತಿಸಿ ನೋಂದಣಿ ಮಾಡಿಕೊಳ್ಳಲು ಸರ್ಕಾರವು ತೀರ್ಮಾನಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಮಮಿ 97 ಮಮ 2011, ಬೆಂಗಳೂರು, ದಿನಾಂಕ: 17–09–2011.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ 23–03–2011 ರಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಹೊರಡಿಸಿರುವ ಸುತ್ತೋಲೆಯನ್ನು ರದ್ದುಪಡಿಸಿ ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ನೋಂದಾಯಿಸಿಕೊಳ್ಳುವಾಗ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಬೇಕೆಂದು ಆದೇಶಿಸಿದೆ.

1) ಪ್ರಸ್ತುತ ಅನುಷ್ಠಾನದಲ್ಲಿರುವ ದಿನಾಂಕ 17–10–2006ರ ಆದೇಶ ಸಂಖ್ಯೆ: ಮಮಇ 99 ಮಮಅ 2006 ಹಾಗೂ ಆದೇಶ ಸಂಖ್ಯೆ: ಮಮಇ 99 ಮಮಅ 2006 (ಭಾಗ–2), ದಿನಾಂಕ 19–06–2007 ರಲ್ಲಿನ ಆದೇಶದಂತೆ ಭಾಗ್ಯಲಕ್ಷ್ಮಿ ಯೋಜನೆಯಡಿ ದಿನಾಂಕ 31–03–2011 ರವರೆಗೆ ಜನಿಸಿದ ಹೆಣ್ಣು ಮಕ್ಕಳನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲು ಬಿ.ಪಿ.ಎಲ್. ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರವನ್ನು ಆಯ್ಕೆಯ ಮಾನದಂಡವಾಗಿ ಪರಿಗಣಿಸುವುದು.

2) **ದಿನಾಂಕ 01-04-2011** ರಿಂದ ಜನಿಸಿದ ಹೆಣ್ಣು ಮಕ್ಕಳನ್ನು ಫಲಾನುಭವಿಗಳಾಗಿ ಆಯ್ಕೆ ಮಾಡಲು **ಬಿ.ಪಿ.ಎಲ್. ಕಾರ್ಡ್‌ನ್ನು ಕಡ್ಡಾಯಗೊಳಿಸುವುದು** ಹಾಗೂ ಹೆಣ್ಣು ಮಕ್ಕಳಿಗೆ ವಿತರಿಸುವ ಬಾಂಡ್‌ಗಳ ಸಂಖ್ಯೆ ವರ್ಷಕ್ಕೆ 1.75 ಲಕ್ಷಕ್ಕಿಂತ ಹೆಚ್ಚಿಗೆ ಆದಲ್ಲಿ ಅವರಿಗೂ ಬಾಂಡ್ ವಿತರಿಸುವ ವಿಷಯದಲ್ಲಿ ನೋಂದಣಿ ಮಾಡುವ ಮುನ್ನ ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

3) ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ಬಿ.ಪಿ.ಎಲ್. ಕಾರ್ಡ್‌ನ್ನು ಆಯ್ಕೆ ಮಾನದಂಡವಾಗಿ ಪರಿಗಣಿಸುವಾಗ ಕುಟುಂಬದ ಮುಖ್ಯಸ್ಥನ ಭಾವಚಿತ್ರ ಅಥವಾ ಕುಟುಂಬದ ಸದಸ್ಯರ ಹೆಸರು ಇದ್ದಲ್ಲಿ ಸಹ ಆಯ್ಕೆಗಾಗಿ ಪರಿಗಣಿಸತಕ್ಕದ್ದು.

4) ಭಾಗ್ಯಲಕ್ಷ್ಮಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಬಾಂಡ್‌ಗಳ ದ್ವಿಗುಣನೆಗೆ (duplication of bonds) ಹಾಗೂ ತಪ್ಪು ಮಾಹಿತಿ ಸಲ್ಲಿಸಲು ಅವಕಾಶ ನೀಡದಂತೆ ಕ್ರಮವಹಿಸತಕ್ಕದ್ದು ಹಾಗೂ ಈಗಾಗಲೇ ಯೋಜನೆಯಡಿ ಹೊರಡಿಸಲಾದ ಇತರ ಮಾರ್ಗಸೂಚಿಗಳನ್ನು ಫಲಾನುಭವಿ ಕುಟುಂಬವು ಪಾಲಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.

5) ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕ್ಷೇತ್ರ ಮಟ್ಟದ ಅಧಿಕಾರಿಗಳು ಫಲಾನುಭವಿಗಳ ಆಯ್ಕೆಯ ಹಂತದಲ್ಲಿ ಹೆಚ್ಚಿನ ಜಾಗ್ರತೆ ವಹಿಸಿ ಯಾವುದೇ ದೋಷಪೂರಿತ/ಅಪೂರ್ಣಗೊಂಡ/ಅನರ್ಹ ಅರ್ಜಿಗಳು ಕಂಡುಬಂದಲ್ಲಿ, ಅವುಗಳನ್ನು ತಿರಸ್ಕರಿಸುವುದು ತಪ್ಪು ಮಾಹಿತಿ ನೀಡಿದ ಅಥವಾ ಅದಕ್ಕೆ ಆಸ್ಪದ ನೀಡಿದ ಅಧಿಕಾರಿಗಳ/ಸಿಬ್ಬಂದಿಯ ವಿರುದ್ಧ ನಿಯಮಾನುಸಾರ ಕಟ್ಟುನಿಟ್ಟಾಗಿ ಶಿಸ್ತು ಕ್ರಮ ಕೈಗೊಳ್ಳುವುದು.

6) ಫಲಾನುಭವಿಗಳು ಅರ್ಜಿಯನ್ನು ನಿಗದಿತ ಅವಧಿಯಲ್ಲಿ ಸಲ್ಲಿಸಿದಾಗ ಕ್ಷೇತ್ರಮಟ್ಟದ ಅಧಿಕಾರಿಗಳು/ಸಿಬ್ಬಂದಿಗಳು ವಿನಾಕಾರಣ ವಿಳಂಬಕ್ಕೆ ಆಸ್ಪದ ಕೊಡದೆ ನಿಗದಿತ ಸಮಯದಲ್ಲಿ ಮಂಜೂರಾತಿಗಾಗಿ ಅರ್ಹ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ವಿಳಂಬವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಗಳು ನೇರ ಹೊಣೆಗಾರರಾಗುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ನಾರಾಯಣಸ್ವಾಮಿ

ಸರ್ಕಾರದ ಜಂಟಿ ಕಾರ್ಯದರ್ಶಿ,

ಪಿ.ಆರ್. 2328 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ ಈ ಸಂಸ್ಥೆಗೆ ನೇಮಕ ಮಾಡಿರುವ ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಇ 156 ಸಸಂನೋ 2010, ದಿನಾಂಕ 13-01-2011

2. ಆಡಳಿತಾಧಿಕಾರಿಗಳು, ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಪತ್ರ ದಿನಾಂಕ 23-08-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ 13-01-2011ರ ಆದೇಶದಲ್ಲಿ ಮಹಿಳಾ ಸಮಾಜ ಕಸ್ತೂರಿಬಾ ಶಿಶವಿಹಾರ (ರಿ) ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಸಂಸ್ಥೆಯ ಆಡಳಿತ ಮಂಡಳಿಯ ಅವಧಿಯು ಮುಗಿದಿದ್ದು ಹಾಗೂ ಸಂಘದ ಆಡಳಿತ ಮಂಡಳಿಯು ನೂತನ ಆಡಳಿತ ಸಮಿತಿಯನ್ನು ಕಾನೂನು ಬದ್ಧವಾಗಿ ಚುನಾವಣೆ ನಡೆಸಿ ರಚಿಸುವಲ್ಲಿ ವಿಫಲವಾಗಿರುವುದು ದೃಢಪಟ್ಟಿರುವುದರಿಂದ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ರಡಿಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ದೊಡ್ಡಬಳ್ಳಾಪುರ ಇವರನ್ನು ಸಮಾಜದ ಆಡಳಿತ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಗಾರರನ್ನಾಗಿ 06 ತಿಂಗಳ ಅವಧಿಗೆ ಅಥವಾ ಸದರಿ ಸಂಸ್ಥೆಗೆ ಕಾನೂನು ಬದ್ಧವಾಗಿ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿ, ಆಡಳಿತಾಧಿಕಾರಿಗಳು ಸಂಘಗಳ ನೋಂದಣಿ ಅಧಿನಿಯಮ 1960, ಸಂಘಗಳ ನೋಂದಣಿ ನಿಯಮಗಳು/ಸಮಾಜದ ನಿಬಂಧನೆಗಳ ಅವಕಾಶಗಳನ್ನು ಗಮನಿಸಿ ಸಂಘದ ಆಡಳಿತ ಸಮಿತಿಗೆ ಚುನಾವಣೆ ನಡೆಸಿ, ನೂತನ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ 23-08-2011ರ ಪತ್ರದಲ್ಲಿ ಆಡಳಿತಾಧಿಕಾರಿಗಳು ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ದೊಡ್ಡಬಳ್ಳಾಪುರ ಆಗಿ ಕಾರ್ಕಳದಿಂದ ವರ್ಗಾವಣೆಗೊಂಡು ದೊಡ್ಡಬಳ್ಳಾಪುರ ಕಛೇರಿಯಲ್ಲಿ ದಿನಾಂಕ 11-07-2011 ರಂದು ಅಧಿಕಾರ ವಹಿಸಿಕೊಂಡಿದ್ದು ನಂತರ ದಿನಾಂಕ21-07-2011 ರಂದು ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ ಈ ಸಂಘದ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದು, ಸದರಿ ಮಹಿಳಾ ಸಮಾಜದಲ್ಲಿ ಇದುವರೆವಿಗೂ ನಡೆದಿರುವ ಆಡಳಿತದಲ್ಲಿ ಹಾಗೂ ಸದಸ್ಯರ ಪಟ್ಟಿಯಲ್ಲಿ ನ್ಯೂನತೆಗಳಿದ್ದು ಇವುಗಳನ್ನು ಕಾನೂನು ರೀತಿ ಸರಿಪಡಿಸಿ ಚುನಾವಣೆ ನಡೆಸಲು ಇನ್ನೂ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಗಳ ಅವಧಿಯನ್ನು ಮುಂದುವರೆಸುವಂತೆ ಕೋರಿರುತ್ತಾರೆ.

ಆಡಳಿತಾಧಿಕಾರಿಗಳು ಸರ್ಕಾರಕ್ಕೆ ಬರೆದಿರುವ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 117 ಸಸಂನೋ 2011, ಬೆಂಗಳೂರು, ದಿನಾಂಕ: 12-09-2011.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ) ರನ್ವಯ ಸರ್ಕಾರಕ್ಕೆ ಪ್ರದತ್ತವಾದ

ಅಧಿಕಾರವನ್ನು ಚಲಾಯಿಸಿ, ಆಡಳಿತಾಧಿಕಾರಿಯಾಗಿ ನೇಮಕವಾಗಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ದೊಡ್ಡಬಳ್ಳಾಪುರ ಇವರ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ 09–07–2011 ರಿಂದ ಪೂರ್ವಾನ್ವಯವಾಗಿ ಮುಂದಿನ ಆರು (06) ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ, ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಎಸ್. ವಿಶ್ವೇಶ್ವರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–2
ಸಹಕಾರ ಇಲಾಖೆ

ಪಿ. ಆರ್. 2329

ಸಹಕಾರ ಸಚಿವಾಲಯ

ವಿಷಯ : ಬಿ.ಇ.ಎಲ್. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ ಸಂಘ, ಜಾಲಹಳ್ಳಿ, ಬೆಂಗಳೂರು ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಕುರಿತು.

ಓದಲಾಗಿದೆ :
1) ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಆರ್/ಎಸ್‌ಓಆರ್/384/2010–11, ದಿನಾಂಕ 05–04–2011
2. ದಿನಾಂಕ: 29–04–2011ರ ಕಾರಣ ಕೇಳುವ ನೋಟೀಸು ಸಂಖ್ಯೆ: ಸಇ 76 ಸಸಂಯೋ 2010.
3. ದಿನಾಂಕ: 16–05–2011 ರಂದು ಸಂಘದ ಕಾರ್ಯದರ್ಶಿಗಳು ನೀಡಿರುವ ಹೇಳಿಕೆ
4. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/20/ಎಸ್‌ಓಆರ್–3/2011–12, ದಿನಾಂಕ 22–08–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ 05–04–2011ರ ಪತ್ರದಲ್ಲಿ ಬಿ.ಇ.ಎಲ್. ಎಸ್.ಸಿ./ಎಸ್.ಟಿ. ಕ್ಷೇಮಾಭಿವೃದ್ಧಿ ಸಂಘದಲ್ಲಿ ಸರ್ವ ಸದಸ್ಯರ ಸಭೆ ನಡೆಸದಿರುವುದು ಸಂಘಕ್ಕೆ ಚುನಾವಣೆ ನಡೆಸದಿರುವುದು ಕಾರ್ಯಕಾರಿ ಸಮಿತಿ ಬಹುಪಾಲು ಸದಸ್ಯರುಗಳು ರಾಜೀನಾಮೆ ನೀಡಿ ಚುನಾವಣೆ ನಡೆಯುವ ತನಕ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿರುವುದು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯುವ ಮುಂಚಿತವಾಗಿ ತಿದ್ದುಪಡಿ ಬೈಲಾಗಳನ್ನು ಸಂಘದಲ್ಲಿ ಜಾರಿ ತಂದಿದ್ದು, ಈ ಬಗ್ಗೆ ಹಲವು ಭಾರಿ ತಿಳುವಳಿಕೆ ನೀಡಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದಿರುವ ಪ್ರಯುಕ್ತ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 11 ಹಾಗೂ ಸಂಘದ ನಿಯಮ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುವುದರಿಂದ, ಸದರಿ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ 29–04–2011ರ ಪತ್ರದಲ್ಲಿ ಸಂಘದಲ್ಲಿ ನಡೆದಿದೆ ಎನ್ನಲಾದ ಕಾನೂನು ಉಲ್ಲಂಘನೆ ಮಾಡಿರುವ ಬಗ್ಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ ಈ ಬಗ್ಗೆ ನಿಮ್ಮ ಲಿಖಿತ/ಮೌಖಿಕ ಹೇಳಿಕೆಯನ್ನು ಪತ್ರ ತಲುಪಿದ ಹದಿನೈದು (15) ದಿವಸಗಳ ಒಳಗಾಗಿ ಸಲ್ಲಿಸುವುದು, ತಪ್ಪಿದಲ್ಲಿ ನೀವು ಹೇಳುವುದು ಏನು ಇಲ್ಲವೆಂದು ಭಾವಿಸಿ, ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಸೂಚಿಸಲಾಗಿತ್ತು. ಸದರಿ ನೋಟೀಸಿಗೆ ನೀಡಲಾದ ಲಿಖಿತ ಹೇಳಿಕೆಗಳನ್ನು ಹಾಗೂ ಕಾರಣ ಕೇಳುವ ನೋಟೀಸನ್ನು ದಿನಾಂಕ 24–05–2011ರ ಪತ್ರಕ್ಕೆ ಲಗತ್ತಿಸಿ ಸದರಿ ಉತ್ತರವನ್ನು ನಿಯಮಾನುಸಾರ ಪರಿಶೀಲಿಸಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಸಹಕಾರ ಸಂಘಗಳ ನಿಬಂಧಕರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ 22–08–2011ರ ಪತ್ರದಲ್ಲಿ ಸಂಘದ ಜಿಲ್ಲಾ ನೋಂದಣಾಧಿಕಾರಿಗಳು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ರವರು ದಿನಾಂಕ 12–08–2011 ರಂದು ಸಲ್ಲಿಸಿರುವ ವರದಿಯನ್ವಯ ಸಂಘದ ಪದಾಧಿಕಾರಿಗಳು ಸಂಘದ ಕಾರ್ಯಕಾರಿ ಸಮಿತಿ ಅವಧಿ ಮುಗಿದಿದ್ದರೂ ಸಹಾ ಸಂಘಕ್ಕೆ ಚುನಾವಣೆ ನಡೆಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಸಂಘದ ಪ್ರಧಾನ ಕಾರ್ಯದರ್ಶಿಯವರು ದಿನಾಂಕ 21–11–2009 ರಂದು 2009–12ರ ವರೆಗಿನ ಅವಧಿ ಚುನಾವಣೆ ನಡೆಸಿರುವುದಾಗಿ ಮೌಖಿಕವಾಗಿ ತಿಳಿಸಿ, ಅದಕ್ಕೆ ಪೂರಕವಾದ ದಾಖಲೆಗಳು, ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸರ್ವ ಸದಸ್ಯರ ಸಭೆಯ ತೀರ್ಮಾನದ ನಡವಳಿಗಳನ್ನು ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆ. ಈ ಸಭೆಯು ಅಭ್ಯರ್ಥಿಗಳು ಹಾಜರಾಗದೇ ಇದ್ದರೂ ಚುನಾವಣಾಧಿಕಾರಿಗಳು ಘೋಷಣೆ ಮಾಡಿದ್ದು, ದಾಖಲೆಗಳು ಸೃಷ್ಠಿ ಮಾಡಿದ ಸುಳ್ಳು ದಾಖಲೆಗಳಾಗಿರುವುದಾಗಿ ಕಂಡು ಬರುತ್ತದೆ ಎಂದು ತಿಳಿಸುತ್ತಾ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 10 ರಂತೆ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಸಲು ಅವಕಾಶವಿರುವುದಿಲ್ಲ ಹಾಗೂ ಕಾರ್ಯಕಾರಿ ಸಮಿತಿ ಅವಧಿ ಒಂದು ವರ್ಷದಿಂದ ಮೂರು ವರ್ಷಗಳ ಅವಧಿಗೆ ವಿಸ್ತರಿಸಿ ತಿದ್ದುಪಡಿ ಮಾಡಿಕೊಂಡಿರುವ ಬೈಲಾ ದಿನಾಂಕ 23–12–2009 ರಂದು ಅನುಮೋದನೆಗೊಂಡಿದ್ದು, ಬೈಲಾ ಅನುಮೋದನೆಯಾದ ನಂತರ ಕಾರ್ಯಕಾರಿ ಸಮಿತಿ ಚುನಾವಣೆ ನಡೆಯದೇ ಇರುವುದರಿಂದ ಹಾಲಿ ಇರುವ ಆಡಳಿತ ಮಂಡಳಿ ಅವಧಿ ಮುಗಿದಿದ್ದು, ಕೂಡಲೇ ಚುನಾವಣೆ ನಡೆಸುವುದು ಸೂಕ್ತವೆಂದು ವರದಿ ಸಲ್ಲಿಸಿರುತ್ತಾರೆ. ಸದರಿ ಸಂಘವು ಸಂಘದ ಬೈಲಾ ಅನುಮೋದನೆ ಪಡೆಯುವ ಮುನ್ನಾ ಜಾರಿಗೆ ತಂದಿರುವುದು ಹಾಗೂ ಹಲವಾರು ಬಾರಿ ಸರ್ವ ಸದಸ್ಯರ ಸಭೆ ಚುನಾವಣೆ ನಡೆಸಲು ತಿಳುವಳಿಕೆಗಳನ್ನು ನೀಡಿದ್ದರೂ, ಚುನಾವಣೆ ಮತ್ತು ಸರ್ವ ಸದಸ್ಯರ ಸಭೆ ನಡೆಸದೆ ಇರುವುದರಿಂದ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಗಳನ್ನು ನೇಮಿಸಬಹುದೆಂದು ಅಭಿಪ್ರಾಯ ಪಟ್ಟಿದ್ದು, ಅದರಂತೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲು ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಸಇ 76 ಸಸಂನೋ 2010, ಬೆಂಗಳೂರು, ದಿನಾಂಕ : 15-09-2011.

ಬಿ.ಇ.ಎಲ್. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ ಸಂಘ, ಜಾಲಹಳ್ಳಿ, ಬೆಂಗಳೂರು. ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ರ ಪ್ರಕಾರ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಉತ್ತರ ವಲಯ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ಆರು (06) ತಿಂಗಳ ಅವಧಿಗೆ ನೇಮಿಸಿ ಆದೇಶಿಸಲಾಗಿದೆ.

ಸದರಿ ಅವಧಿಯಲ್ಲಿ ಸಂಘದಲ್ಲಿ ಹಾಲಿ ಇರುವ ಸದಸ್ಯರಿಂದ ಸಂಘಕ್ಕೆ ಚುನಾವಣೆಯನ್ನು ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಅಥವಾ ಆರು (06) ತಿಂಗಳ ಅವಧಿಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಎಸ್. ವಿಶ್ವೇಶ್ವರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ-2

ಸಹಕಾರ ಇಲಾಖೆ

ಪಿ.ಆರ್. 2330

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಯೋಇ 309 ಪಿಟಿಪಿ 94, ದಿನಾಂಕ 07-08-1995
2. ಮಾನ್ಯ ಭಾರತೀಯ ಜನತಾ ಪಾರ್ಟಿಯ ರಾಜ್ಯಾಧ್ಯಕ್ಷರ ಪತ್ರ ಸಂಖ್ಯೆ: ರಾಕಾ/ನಾನಿ/309/2011, ದಿನಾಂಕ 05-07-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈ ಆದೇಶದ ಮೇರೆಗೆ ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಓದಲಾದ (2)ರ ದಿನಾಂಕ 05-07-2011ರ ಮಾನ್ಯ ಭಾರತೀಯ ಜನತಾ ಪಾರ್ಟಿಯ ರಾಜ್ಯಾಧ್ಯಕ್ಷರ ಪತ್ರದಲ್ಲಿ ಕೋರಿರುವಂತೆ ಮಾನ್ಯ ಮುಖ್ಯಮಂತ್ರಿಗಳು ಅನುಮೋದಿಸಿರುವಂತೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಯೋಇ 71 ಯೋವಿವಿ 2009, ಬೆಂಗಳೂರು, ದಿನಾಂಕ : 19-09-2011.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಆರು ಜನರನ್ನು ಪಾಂಡವಪುರ ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಲಾಗಿದೆ.

ಮಂಡ್ಯ ಜಿಲ್ಲೆ

ಪಾಂಡವಪುರ ತಾಲ್ಲೂಕು

ಕ್ರ.ಸಂ.	ಹೆಸರು	ವರ್ಗ
1	ಶ್ರೀ ನಿಂಗೇಗೌಡ ಬಿನ್ ತಿಬ್ಬೇಗೌಡ ದೇವೆಗೌಡನಕೊಪ್ಪಲು	ಸಾಮಾನ್ಯ
2	ಶ್ರೀಮತಿ ವನಜಾಕ್ಷಿ ಕೋಂ. ಅಂಕೇಗೌಡ ಚಿನಕುರುಳಿ	ಮಹಿಳೆ
3	ಶ್ರೀ ಆರ್. ಗೋವಿಂದ ಬಿನ್ ರಾಮಯ್ಯ ಮೇಲುಕೋಟೆ	ಬಿ.ಸಿ.ಎಂ.
4	ಶ್ರೀ ಸೌಕತ್ ಆಲಿ ಬಿನ್ ಮಹಮದ್ ಗೌಸ್ ಪಾಂಡವಪುರ	ಅ.ಸಂ.
5	ಶ್ರೀ ಜಿ. ಮಂಜುನಾಥ್ ಬಿನ್ ಗುರುಲಿಂಗೇಗೌಡ, ತಿಮ್ಮನಹೊಸೂರು	ಸಾಮಾನ್ಯ
6	ಶ್ರೀ ಎ. ಜಿ. ಬಸವರಾಜು ಬಿನ್ ಗೋವಿಂದಯ್ಯ, ಅಂತನಹಳ್ಳಿ	ಎಸ್. ಸಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಇಲಾಖೆ

ಪಿ.ಆರ್. 2331

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ 07-08-1995.

2. ಶ್ರೀ ಕೆ.ಎಸ್. ಈಶ್ವರಪ್ಪ, ರಾಜ್ಯಾಧ್ಯಕ್ಷರು, ಭಾ.ಜ.ಪ. ಇವರ ಪತ್ರ ಸಂಖ್ಯೆ : ರಾಕಾ/ನಾನಿ/302/ 2011, ದಿನಾಂಕ 01-07-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯ ಮಂತ್ರಿಯವರು ಅನುಮೋದಿಸಿರುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 90 ಯೋವಿವಿ 2011, ಬೆಂಗಳೂರು, ದಿನಾಂಕ 19ನೇ ಸೆಪ್ಟೆಂಬರ್ 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಐದು ಜನರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕ್ರ ಸಂ.	ಹೆಸರು	ವರ್ಗ
1	ಶ್ರೀ ಹನುಮಂತರಾಯಪ್ಪ ಬಿನ್ ಸೊಣ್ಣೇಗೌಡ ಯಲಿಯಾರು ಅಂಚೆ, ದೇವನಹಳ್ಳಿ ತಾಲ್ಲೂಕು	ಸಾಮಾನ್ಯ
2	ಶ್ರೀ ಅಹ್ಮದ್ ಪಾಷಾ, ಮಾಜಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು	ಅ.ಸಂ.
3	ಶ್ರೀಮತಿ ಮೋಹನಕುಮಾರಿ ಕೋಂ. ರವಿಕುಮಾರ್ ನರಸಾಪುರ, ಕಳಘಟ್ಟ ಅಂಚೆ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು	ಮಹಿಳೆ
4	ಶ್ರೀ ವೆಂಕಟೇಶ್ ಬಿನ್ ವೆಂಕಟರಮಣಪ್ಪ, ದೊಡ್ಡ ತುಮಕೂರು, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು	ಎಸ್.ಸಿ.
5	ಶ್ರೀ ಆಂಜಿನಪ್ಪ ಸೋಲೂರು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಚಿಕ್ಕರಾಜು,
ಸರ್ಕಾರದ ಅಧೀನ ಕಾರ್ಯದರ್ಶಿ -1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್.ನಂ. 2332

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ 07-08-1995.

2. ಶ್ರೀ ಕೆ.ಎಸ್. ಈಶ್ವರಪ್ಪ, ರಾಜ್ಯಾಧ್ಯಕ್ಷರು, ಭಾ.ಜ.ಪ. ಇವರ ಪತ್ರ ಸಂಖ್ಯೆ : ರಾಕಾ/ನಾನಿ/210/ 2011, ದಿನಾಂಕ 26-05-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಚಾಮರಾಜನಗರ ಜಿಲ್ಲೆ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 88 ಯೋವಿವಿ 2011, ಬೆಂಗಳೂರು, ದಿನಾಂಕ 19ನೇ ಸೆಪ್ಟೆಂಬರ್ 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಐದು ಜನರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಚಾಮರಾಜನಗರ ಜಿಲ್ಲೆ

ಕ್ರ. ಸಂ.	ಹೆಸರು	ವರ್ಗ
1	ಶ್ರೀ ಬಿ.ಕೆ. ಶಿವಕುಮಾರ್ ಬಿನ್ ಲೇ. ಬಸವರಾಜ್ ಕಾಮಗೆರೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ	ಸಾಮಾನ್ಯ
2	ಶ್ರೀ ವೆಂಕಟಸ್ವಾಮಿ ಬಿನ್ ವೆಂಕಟರಮಣ ಶೆಟ್ಟಿ ಭೂದಬಾಳು ಮಂಗಲ ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ	ಬಿ.ಸಿ.ಎಂ.ಎ.
3	ಶ್ರೀ ಪ್ರಕಾಶ್ ಬಿನ್ ಮಹದೇವಯ್ಯ ಮೂಡ್ನಕೊಡ್ಲ ಅಂಚೆ ಮತ್ತು ಗ್ರಾಮ, ಹರವೆ ಹೋಬಳಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ	ಎಸ್.ಸಿ.
4	ಶ್ರೀಮತಿ ಜಯಶೀಲ ರಾಜಶೇಖರ್ ಕೋಂ. ರಾಜಶೇಖರ್ ಉಡಿಗಾಲ ಅಂಚೆ ಮತ್ತು ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ	ಮಹಿಳೆ
5	ಶ್ರೀ ವಸುಪಾಲ್ ಬಿನ್ ಲಕ್ಷ್ಮೀರಮಣ ಪಂಡಿತ್, ಕುದೇರು ಗ್ರಾಮ ಮತ್ತು ಅಂಚೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ	ಅ.ಸಂ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಚಿಕ್ಕರಾಜು,
ಸರ್ಕಾರದ ಅಧೀನ ಕಾರ್ಯದರ್ಶಿ –1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್.ನಂ. 2333

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಮತ್ತು ಉಪ ಆಯುಕ್ತರು (ಭೂಸ್ವಾ) ಇವರುಗಳಿಗೆ ಅವಾರ್ಡ್‌ಗಳನ್ನು ಅನುಮೋದನೆ ಮಾಡಲು ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ : ಬೆಂಅಪ್ರಾ/ಆಯು/ಉಆ (ಭೂ.ಸ್ವಾ)/47/2011–12, ದಿನಾಂಕ 02–06–2011

ಪ್ರಸ್ತಾವನೆ :

ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಓದಲಾದ ದಿನಾಂಕ 02–06–2011ರ ಪತ್ರದಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ, ಡಾ. ಶಿವರಾಮಕಾರಂತ ಬಡಾವಣೆ ಮತ್ತು ಅರ್ಕಾವತಿ ಬಡಾವಣೆಗಳಲ್ಲಿ ಸಾವಿರಾರು ಎಕರೆಗಳ ಜಮೀನಿಗೆ ಭೂಸ್ವಾಧೀನ ಪ್ರಕರಣಗಳಲ್ಲಿ ಐತೀರ್ಪು ಅನುಮೋದನೆ ಮಾಡಬೇಕಾಗಿದೆಯೆಂದು ಪ್ರಸ್ತುತ ಪ್ರಾಧಿಕಾರದ ಉಪ ಆಯುಕ್ತರು (ಭೂಸ್ವಾ) ರವರಿಗೆ ರೂ. 50,00,000/– (ರೂ. ಐವತ್ತು ಲಕ್ಷ) ವರೆಗಿನ ಅವಾರ್ಡ್‌ಗಳನ್ನು ಅನುಮೋದನೆ ಮಾಡಲು ಹಾಗೂ ಆಯುಕ್ತರು ರೂ. 50,00,000/– (ರೂ. ಐವತ್ತು ಲಕ್ಷ) ದಿಂದ ರೂ. 1,00,00,000/– (ರೂ. ಒಂದು ಕೋಟಿ) ಮೀರದ ಮೊತ್ತಗಳಿಗೆ ಅವಾರ್ಡ್ ಅನುಮೋದನೆ ಮಾಡಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆಂದು ತಿಳಿಸಿರುತ್ತಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಿರ್ಮಿಸುವ ಸಂಬಂಧ ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯಾಗಿರುವ ಜಮೀನುಗಳ ಬೆಲೆಯು ಅತ್ಯಧಿಕವಾಗಿದ್ದು, ರೂ. 1,00,00,000/– (ರೂಪಾಯಿ ಒಂದು ಕೋಟಿ) ಮೀರಿದ ಅವಾರ್ಡ್ ಅನುಮೋದನೆಗಾಗಿ ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಕಳುಹಿಸಬೇಕಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಧಿಸೂಚನೆ ಮಾಡಿರುವ ಶೇ. 60 ಭಾಗಕ್ಕಿಂತ ಮೇಲ್ಪಟ್ಟು ಜಮೀನುಗಳ ಮಾರುಕಟ್ಟೆ ಬೆಲೆ ರೂ. 1,00,00,000/– (ಒಂದು ಕೋಟಿ) ಮೀರಿರುವುದರಿಂದ, ಅಂತಹ ಎಲ್ಲಾ ಪ್ರಕರಣಗಳನ್ನು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಅನುಮೋದನೆಗಾಗಿ ಸಲ್ಲಿಸಬೇಕಾಗಿದೆ. ಇದರಿಂದಾಗಿ ಕಾರ್ಯದ ಒತ್ತಡ ಜಾಸ್ತಿ ಆಗಲಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಧಿಸೂಚನೆ ಮಾಡಿರುವ ಜಮೀನುಗಳ ಬಗ್ಗೆ 2,00,00,000/– (ಎರಡು ಕೋಟಿ) ರೂ.ವರೆಗಿನ ಅವಾರ್ಡ್‌ಗಳನ್ನು ಅನುಮೋದನೆ ಮಾಡಲು ಪ್ರಾಧಿಕಾರದ ಉಪ ಆಯುಕ್ತರು (ಭೂಸ್ವಾ) ರವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಹಾಗೂ ರೂ. 2,00,00,000/– (ಎರಡು ಕೋಟಿ) ಯಿಂದ ರೂ. 5,00,00,000/– (ರೂಪಾಯಿ ಐದು ಕೋಟಿ) ವರೆಗಿನ ಅವಾರ್ಡ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಪ್ರತ್ಯಾಯೋಜಿಸಿ ಆದೇಶ ಹೊರಡಿಸಲು ಆಯುಕ್ತರು ಕೋರಿರುತ್ತಾರೆ. ಸರ್ಕಾರವು ಆಯುಕ್ತರ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿದೆ. ರೂ. ಐದು ಕೋಟಿಗೂ ಹೆಚ್ಚಿನ ಐತೀರ್ಪಿನ ಮೊತ್ತವನ್ನು ಪ್ರಾಧಿಕಾರದ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳತಕ್ಕದ್ದೆಂಬುದನ್ನು ಸೇರಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 364 ಬೆಂಭೂಸ್ವಾ 2011, ಬೆಂಗಳೂರು, ದಿನಾಂಕ 16ನೇ ಸೆಪ್ಟೆಂಬರ್ 2011

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಿರ್ಮಿಸುವ ಸಂಬಂಧ ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯಾಗಿರುವ ಜಮೀನುಗಳ ಐತೀರ್ಪು (ಅವಾರ್ಡ್) ಅನುಮೋದನೆ ಮಾಡಲು ಆರ್ಥಿಕ ಅಧಿಕಾರವನ್ನು ಈ ಕೆಳಕಂಡಂತೆ ಪ್ರತ್ಯಾಯೋಜಿಸಿ ಆದೇಶಿಸಿದೆ.

ಕ್ರ. ಸಂ.	ಪದನಾಮ	ಅಧಿಕಾರಿಗಳ ಕಾರ್ಯವ್ಯಾಪ್ತಿಗೆ ಒಳಪಡುವ ಐತೀರ್ಪಿನ ಮೊತ್ತ
1	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂಡಳಿ, ಬೆಂಗಳೂರು	ರೂ. 5,00,00,000 (ಐದು ಕೋಟಿ ರೂಪಾಯಿ) ಮೀರಿದ ಐತೀರ್ಪು ಅನುಮೋದಿಸುವ ಅಧಿಕಾರ.

2	ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ರೂ. 2,00,00,000 (ಎರಡು ಕೋಟಿ ರೂಪಾಯಿ) ಯಿಂದ ರೂ. 5,00,00,000 (ಐದು ಕೋಟಿ ರೂಪಾಯಿ) ವರೆಗಿನ ಐತೀರ್ಪು ಅನುಮೋದಿಸುವ ಅಧಿಕಾರ.
3	ಉಪ ಆಯುಕ್ತರು (ಭೂಸ್ವಾಧೀನ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ರೂ. 2,00,00,000 (ಎರಡು ಕೋಟಿ ರೂಪಾಯಿ) ವರೆಗೆ ಐತೀರ್ಪು ಅನುಮೋದಿಸುವ ಅಧಿಕಾರ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಪ್ರೇಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್.ನಂ. 2334

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮುಧೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ. 5270.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1. ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ : ಕಜಮಂ : ವ್ಯನಿ/ಮುಅ(ಉ)/ಎಸ್‌ಜಿಇಇ-ಬಿಜಿಎಂ-ಡಿಸಿಇ-1:244:2011-12 ದಿನಾಂಕ : 28-04-2011.

2. ಸರ್ಕಾರದ ಆದೇಶ ಸಂಖ್ಯೆ : ನಅಇ 10 ಯುಡಿಎಸ್ 2011, ದಿನಾಂಕ : 29-06-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಮುಧೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ. 5270.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಲ್ಪಿಸಲು ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿತ್ತು. ಈ ಯೋಜನೆಗೆ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ಹೊರಡಿಸಬೇಕಾಗಿರುತ್ತದೆ.

ಮುಧೋಳ ಪಟ್ಟಣವು ಬಾಗಲಕೋಟೆ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 42.433 ಇದ್ದು ಪ್ರಸ್ತುತ 52,000 ಇರುತ್ತದೆ. ಪಟ್ಟಣದ ಜನಸಂಖ್ಯೆಯು 2043ಕ್ಕೆ 1,20,000 ಜನಸಂಖ್ಯೆ ಆಗಬಹುದೆಂದು ನಿರೀಕ್ಷಿಸಲಾಗಿದೆ. ಈ ಪಟ್ಟಣಕ್ಕೆ ಪ್ರಸ್ತುತ ಘಟಪ್ರಭಾ ಎಡದಂಡೆ ಕಾಲುವೆಯ ಮೂಲದಿಂದ ವೆಂಕಟೇಶ್ ಟ್ಯಾಂಕಿಗೆ ನೀರನ್ನು ಹಾಯಿಸಿ ನೀರು ಸರಬರಾಜು ಯೋಜನೆಯನ್ನು 1962ರಲ್ಲಿ ಕಲ್ಪಿಸಲಾಯಿತು. ಕುಡಿಯುವ ನೀರಿನ ವ್ಯವಸ್ಥೆಯನ್ನು ಸುಧಾರಿಸಲು ಘಟಪ್ರಭಾ ನದಿಯನ್ನು ಮೂಲವಾಗಿಟ್ಟುಕೊಂಡು ನೀರು ಸರಬರಾಜು ಯೋಜನೆ ಅಭಿವೃದ್ಧಿಗೊಳಿಸಲು ಸರ್ಕಾರದ ಆದೇಶ ಸಂಖ್ಯೆ : ನಅಇ 22 ಯುಡಬ್ಲ್ಯೂಎಸ್ 2003, ದಿನಾಂಕ : 22-08-2003ರಲ್ಲಿ ರೂ. 1299.36 ಲಕ್ಷಗಳ ವೆಚ್ಚದಲ್ಲಿ ಯೋಜನೆಯನ್ನು ಅನುಮೋದಿಸಲಾಗಿದೆ. ಸದರಿ ಯೋಜನೆಯು ಪ್ರಗತಿಯಲ್ಲಿದ್ದು, 2012ರ ಅಂತ್ಯಕ್ಕೆ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ಈ ಪಟ್ಟಣಕ್ಕೆ ಪ್ರಸ್ತುತ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಪಟ್ಟಣದ ಜನತೆಯು ಆಳಗುಂಡಿ (ಇಂಗುಗುಂಡಿ) ಮತ್ತು ಸೆಪ್ಟಿಕ್ ಟ್ಯಾಂಕ್‌ಗಳನ್ನು ಅಳವಡಿಸಿಕೊಂಡಿದ್ದು, ತ್ಯಾಜ್ಯ ನೀರನ್ನು ನಾಲೆಗಳ ಮೂಲಕ ಮತ್ತು ತೆರೆದ ಚರಂಡಿಗಳ ಮೂಲಕ ಹರಿದುಬಿಡುತ್ತಿದ್ದು, ಇದರಿಂದ ಘಟಪ್ರಭಾ ನದಿಯ ನೀರು ಕಲುಷಿತಗೊಳ್ಳುತ್ತಿದೆ ಮತ್ತು ಪಟ್ಟಣದ ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿದೆ. ಆದ್ದರಿಂದ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು ಅನಿವಾರ್ಯವಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆಗೆ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕೆಂದು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಸಾಲ (30%)	ರೂ. 1581.00 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (50%)	ರೂ. 2635.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (20%)	ರೂ. 1054.00 ಲಕ್ಷಗಳು
ಒಟ್ಟು	**ರೂ. 5270.00 ಲಕ್ಷಗಳು**

ಈ ಯೋಜನೆಯನ್ನು ಮಂಡಳಿಯ 2010-11ನೇ ಸಾಲಿನ ಅನುಮೋದಿತ ಪರಿಷ್ಕೃತ ಕ್ರಿಯಾಯೋಜನೆಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ಪ್ರವರ್ಗ ಡಿ ಅಡಿಯಲ್ಲಿ ರೂ. 1833.33 ಲಕ್ಷಗಳನ್ನು ಅನುವು ಮಾಡಲಾಗಿದೆ.

ಮುಧೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಯ ಅಂದಾಜನ್ನು ಸ್ಥಳೀಯ ಸಂಸ್ಥೆಯು ದಿನಾಂಕ : 28-03-2011ರ ಸಭೆಯ ವಿಷಯ ಸಂಖ್ಯೆ : 10/3 ರಲ್ಲಿ ಒಪ್ಪಿರುತ್ತದೆ. ಮುಂದುವರೆದು ವಿಷಯ ಸಂಖ್ಯೆ : 51/3 ರಲ್ಲಿ ಒಳಚರಂಡಿ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು, ಯೋಜನೆಯ ಮುಕ್ತಾಯವಾದ ತಕ್ಷಣ ಪುರಸಭೆಗೆ ವಹಿಸಿಕೊಟ್ಟ ನಂತರ ಯೋಜನೆಯ ನಿರ್ವಹಣೆಯನ್ನು ನೋಡಿಕೊಳ್ಳಲು ಹಾಗೂ ಅಗತ್ಯ ಸೌಕರ್ಯವನ್ನು ಕಲ್ಪಿಸಲು, ಹಾಗೂ ಮಂಡಳಿಯು ನಿಗದಿಪಡಿಸಿದ ನಿರ್ವಹಣಾ ದರಗಳನ್ನು ಜಾರಿಗೊಳಿಸಲು, ಮತ್ತು ಎಸ್.ಟಿ.ಪಿ. ಮತ್ತು ಪಂಪಿಂಗ್ ಸ್ಟೇಷನ್ ಗಳನ್ನು ನಿರ್ಮಿಸಲು ಬೇಕಾಗುವ ಭೂಮಿಯನ್ನು ನೀಡಲು, ಹಾಗೂ ಯೋಜನೆಯನ್ನು ಕಾರ್ಯಗತ ಮಾಡುವ ಸಮಯದಲ್ಲಿ ಸಾಮಗ್ರಿಗಳ ಬೆಲೆ ಏರಿಕೆಯಿಂದ ಅಥವಾ ಇತರೆ ಅನಿರೀಕ್ಷಿತ ಕಾರಣಗಳಿಂದ ವೆಚ್ಚ ಹೆಚ್ಚಾದಲ್ಲಿ ಪುರಸಭೆ ಭರಿಸಲು ಒಪ್ಪಿದೆ. ಅದರಂತೆ ಅಂದಾಜು ವೆಚ್ಚದಲ್ಲಿ ಭೂ ಸ್ವಾಧೀನಕ್ಕೆ ನಿಗದಿಪಡಿಸಿರುವ ಮೊತ್ತವಾದ ರೂ. 130.00 ಲಕ್ಷಗಳನ್ನು ಕಡಿತಗೊಳಿಸಲಾಗಿದೆ.

ಇ.ಟಿ.ಪಿ. ಡಬ್ಲ್ಯೂಸಿಇ ಮತ್ತು ಸಾದಿಲ್ವಾರು ವೆಚ್ಚಗಳನ್ನು ಯೋಜನೆಯ ಮೂಲ ಅಂದಾಜು ವೆಚ್ಚದ ಶೇ.5ರಷ್ಟು ಮಾತ್ರ ವಿಧಿಸಲು ನಿರ್ಭಂದಿಸಿರುವುದರಿಂದ ಮೂಲ ಅಂದಾಜು ಮೊತ್ತವಾದ ರೂ. 3888.64 ಲಕ್ಷಗಳಿಗೆ ರೂ. 194.43 ಲಕ್ಷಗಳನ್ನು ಮಾತ್ರ ಸೇರಿಸಿ, ಉಳಿದ ಇಟಿಪಿ ಮತ್ತು

ಸಾದಿಲ್ವಾರು ಮೊತ್ತವನ್ನು ಅಂದಾಜು ಮೊತ್ತದಿಂದ ಕೈಬಿಡಲಾಗಿದೆ. ಇದಲ್ಲದೆ ಎಸ್ಕಲೇಷನ್ ದರಗಳನ್ನು ಸ್ಥಳೀಯ ಸಂಸ್ಥೆಯೇ ಭರಿಸಲು ಠರಾವು ಪಾಸುಮಾಡಿರುವ ಹಿನ್ನೆಲೆಯಲ್ಲಿ, ಮಂಡಳಿಯು ಅಂದಾಜು ಪಟ್ಟಿಯಲ್ಲಿ ಸೇರಿಸಿರುವ ರೂ. 466.64 ಲಕ್ಷಗಳನ್ನು ಕಡಿತಗೊಳಿಸಿದೆ.

ಯೋಜನೆಯ ಅಂದಾಜಿನಲ್ಲಿ ಒಟ್ಟು ರೂ. 200.00 ಲಕ್ಷಗಳನ್ನು 5 ವರ್ಷಗಳ ಕಾಲ ಯೋಜನಾ ನಿರ್ವಹಣೆಗೆ ಅನುವು ಮಾಡಲಾಗಿದೆ. ಸ್ಥಳೀಯ ಸಂಸ್ಥೆಯು ತನ್ನ ಠರಾವಿನಲ್ಲಿ ಯೋಜನೆ ಮುಕ್ತಾಯವಾದ ತಕ್ಷಣ ಹಸ್ತಾಂತರಿಸಿಕೊಳ್ಳಲು ಒಪ್ಪಿರುವ ಪ್ರಯುಕ್ತ ಸದರಿ ಮೊತ್ತವನ್ನು ಅಂದಾಜು ಪಟ್ಟಿಯಿಂದ ಹೊರತುಪಡಿಸಿದೆ. ಆದ್ದರಿಂದ ಯೋಜನೆಯ ಒಟ್ಟು ಅಂದಾಜು ಮೊತ್ತವನ್ನು ರೂ. 5270.00 ಲಕ್ಷಗಳಿಂದ ರೂ. 4083.10 ಲಕ್ಷಗಳಿಗೆ ಮಿತಿಗೊಳಿಸಿ ಅನುಮೋದನೆ ನೀಡಬೇಕಾಗಿರುತ್ತದೆ.

ಸದರಿ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 10 ಯುಡಿಎಸ್ 2011, ಬೆಂಗಳೂರು, ದಿನಾಂಕ : 05–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮುಧೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ. 4083.10 ಲಕ್ಷಗಳಲ್ಲಿ (ನಾಲ್ಕು ಸಾವಿರದ ಎಂಭತ್ತಮೂರು ಲಕ್ಷಗಳು ಮತ್ತು ಹತ್ತು ಸಾವಿರ ರೂಪಾಯಿಗಳು ಮಾತ್ರ) ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. The Escalation charges should not form part of the estimate. It should be borne by the concerned ULB. The estimate is reduced to such extent.
2. The consent of the ULB shall be obtained for the extra cost that might occur due to deviations, extra item works or variations in the scheme.
3. Adequate provision to be made by the Board in the following years for timely completion of the project.
4. Escalations and Tender premium over and above the approved estimate cost should be approved with the prior consent of the ULB.
5. Water rates as proposed by KUWS & DB have to be implemented to meet O & M cost of UGD.
6. KTPP provisions, quality control and timely completion should ensured.
7. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
8. ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 298 Exp-9 : 2011, ದಿನಾಂಕ : 27–05–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2335 ನಗರಾಭಿವೃದ್ಧಿ ಇಲಾಖೆ

ಇಂಧನ ಸಚಿವಾಲಯ

ವಿಷಯ : ಇಂಧನ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 3 ಡಿಎಸ್‌ವೈ 2011 ದಿನಾಂಕ : 03–05–2011.
2. ಸರ್ಕಾರದ ಪತ್ರ ಸಂಖ್ಯೆ : ಇಎನ್ 04 ಸಮನ್ವಯ 2011 ದಿನಾಂಕ : 24–06–2011.
3. ಸರ್ಕಾರದ ಪತ್ರ ಸಂಖ್ಯೆ : ಇಎನ್ 04 ಸಮನ್ವಯ 2011 ದಿನಾಂಕ : 21–07–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ : 1ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶದಲ್ಲಿ ಸಚಿವಾಲಯದಲ್ಲಿ ವಿವಿಧ ಇಲಾಖೆಗಳಿಗೆ ಬೇಕಾಗುವ ಲೇಖನ ಸಾಮಗ್ರಿಗಳನ್ನು ಮತ್ತು ಇನ್ನಿತರ ಬಳಕೆ ಪದಾರ್ಥಗಳನ್ನು ಖರೀದಿಸುವ ಅಧಿಕಾರವನ್ನು ಆಯಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ವಹಿಸಲಾಗಿದೆ ಮತ್ತು ಈ ಆದೇಶದಲ್ಲಿ ಇಂಧನ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಖರೀದಿಸಲು ಲೆಕ್ಕ ಶೀರ್ಷಿಕೆ 2052–00–090–0–01–051 (ಸಾಮಾನ್ಯ ವೆಚ್ಚ) ರಲ್ಲಿ ರೂ. 30,000/– (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಒದಗಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 2ರ ಪತ್ರದಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ದರಪಟ್ಟಿಗಳನ್ನು ಸಲ್ಲಿಸುವಂತೆ ಸಂಸ್ಥೆಗಳಿಗೆ ಕೋರಲಾಗಿತ್ತು. ಅದರಂತೆ ಮೆ: ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್, 617/2 ರಾಜೇಶ್ವರಿ ಮಾರ್ಕೆಟ್, ಅವೆನ್ಯೂ ರೋಡ್, ಬೆಂಗಳೂರು, ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, 13, 20ನೇ ಕ್ರಾಸ್, ಕಬ್ಬನ್‌ಪೇಟೆ, ಬೆಂಗಳೂರು ಮತ್ತು ಮೆ: ಎಸ್.ವಿ. ಏಜೆನ್ಸಿಸ್, ನಂ. 2659, 2ನೇ ಹಂತ, ರಾಜಾಜಿನಗರ, ಬೆಂಗಳೂರು ಇವರು ದರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಮೂರು ಸಂಸ್ಥೆಗಳ ದರಪಟ್ಟಿಯನ್ನು ಪರಿಶೀಲಿಸಿದಾಗ ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್ ಇವರು ಸಲ್ಲಿಸಿರುವ ಬೆಲೆಗಳ ದರಪಟ್ಟಿ ಕಡಿಮೆ ಇರುತ್ತದೆ. ಆದುದರಿಂದ, ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, ಇವರಿಂದ ಲೇಖನ ಸಾಮಗ್ರಿಗಳನ್ನು ಪಡೆಯಲು ತೀರ್ಮಾನಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 3ರ ಪತ್ರದಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, ಇವರನ್ನು ಕೋರಲಾಗಿತ್ತು. ಅದರಂತೆ ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, ಇವರು ಲೇಖನ

ಸಾಮಗ್ರಿಗಳನ್ನು ಸರಬರಾಜು ಮಾಡಿ ಇದಕ್ಕೆ ಸಂಬಂಧಿಸಿದ ವೆಚ್ಚ ಬಾಬ್ತು ರೂ. 28,033/- (ಇಪ್ಪತ್ತೆಂಟು ಸಾವಿರದ ಮೂವತ್ತ ಮೂರು ರೂಪಾಯಿಗಳು ಮಾತ್ರ) (ಮೌಲ್ಯವರ್ಧಿತ ತೆರಿಗೆ ಸೇರಿ) ಗಳನ್ನು ಸಂದಾಯ ಮಾಡುವಂತೆ ಬಿಲ್ಲನ್ನು ದಿನಾಂಕ : 09-08-2011ರಂದು ಸಲ್ಲಿಸಿರುತ್ತಾರೆ. ಆದುದರಿಂದ, ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, ಇವರಿಗೆ ಬಿಲ್ಲಿನ ಹಣವನ್ನು ಸಂದಾಯ ಮಾಡಲು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 04 ಸಮನ್ವಯ 2011, ಬೆಂಗಳೂರು, ದಿನಾಂಕ : 08-09-2011

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನೆಲೆಯಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಬಿಲ್ಲಿನ ಮೊತ್ತ ವೆಚ್ಚ ರೂ. 28,033/- (ಇಪ್ಪತ್ತೆಂಟು ಸಾವಿರದ ಮುವತ್ತ ಮೂರು ರೂಪಾಯಿಗಳು ಮಾತ್ರ) (ಮೌಲ್ಯವರ್ಧಿತ ತೆರಿಗೆ ಸೇರಿ) ಗಳನ್ನು ಮೆ: ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, 13, 20ನೇ ಕ್ರಾಸ್, ಕಬ್ಬನ್‌ಪೇಟೆ, ಬೆಂಗಳೂರು ಇವರಿಗೆ ಸಂದಾಯ ಮಾಡಲು ಮಂಜೂರಾತಿ ನೀಡಿದೆ.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2052-00-090-0-01-051 (ಸಾಮಾನ್ಯ ವೆಚ್ಚ) (ಯೋಜನೇತರ)" ರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ : 10-07-1996ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2336 ಇಂಧನ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜೆ.ಐ. ಕಿತ್ತೂರ್, ಜಂಟಿ ಅಭಿಯೋಗ ನಿರ್ದೇಶಕರು ಮತ್ತು ಕಾನೂನು ಅಧಿಕಾರಿ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ಅವರ ಸ್ಥಾನಪನ್ನಾ ಅವಧಿಯನ್ನು ಘೋಷಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 369 ಪಿಪಿಇ 2007, ದಿನಾಂಕ: 30.09.2008.

2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ: ಡಿಪಿಎನ್/ನಿಶಾ-1/80/2011-12, ದಿನಾಂಕ: 21-07-2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 30.09.2008ರ ಅಧಿಸೂಚನೆಯಲ್ಲಿ ಶ್ರೀ ಜೆ.ಐ. ಕಿತ್ತೂರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉಡುಪಿ ಇವರಿಗೆ ಜಂಟಿ ಅಭಿಯೋಗ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನಾ ಬಡ್ತಿ ನೀಡಲಾಗಿದ್ದು, ಅದರನ್ವಯ ಸದರಿ ಅಧಿಕಾರಿಯವರು ದಿನಾಂಕ 29.06.2009ರಂದು ಪೂರ್ವಾಹ್ನ ಜಂಟಿ ಅಭಿಯೋಗ ನಿರ್ದೇಶಕರ ಹುದ್ದೆಯ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ

ಮೇಲೆ (2)ರಲ್ಲಿ ಓದಲಾದ ದಿನಾಂಕ: 21.07.2011ರ ಪತ್ರದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು, ಶ್ರೀ ಜೆ.ಐ. ಕಿತ್ತೂರ್, ಜಂಟಿ ಅಭಿಯೋಗ ನಿರ್ದೇಶಕರು ಮತ್ತು ಕಾನೂನು ಅಧಿಕಾರಿ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ಇವರ ಸ್ಥಾನಪನ್ನಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 19(3)(ಸಿ)ರ ಪ್ರಕಾರ ದಿನಾಂಕ: 29.06.2009 ರಿಂದ 28.06.2010ರ ಅವಧಿಯಲ್ಲಿ ಸದರಿ ಅಧಿಕಾರಿಯವರು ಜಂಟಿ ಅಭಿಯೋಗ ನಿರ್ದೇಶಕರ ಹುದ್ದೆಯಲ್ಲಿ ತೃಪ್ತಿಕರವಾಗಿ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದರಿಂದ, ದಿನಾಂಕ: 29.06.2010ರಿಂದ ಸ್ಥಾನಪನ್ನ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಅಧಿಕಾರಿಯವರ 2009-10ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಪರಿಶೀಲಿಸಲಾಗಿ ಯಾವುದೇ ಪ್ರತಿಕೂಲ ಷರಾ ಇಲ್ಲದೇ ಇರುವುದು ಕಂಡುಬರುತ್ತದೆ. ಇವರ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಅಥವಾ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಹಾಗೂ ಹೂಡಲು ಉದ್ದೇಶಿಸಿರುವುದಿಲ್ಲ.

ಸದರಿ ಅವಧಿಯಲ್ಲಿ ಸದರಿ ಅಧಿಕಾರಿಯವರು ಯಾವುದೇ ರೀತಿಯ ವೇತನ ರಹಿತ ರಜೆಯನ್ನು ಪಡೆದಿರುವುದಿಲ್ಲ.

ಆದುದರಿಂದ, ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 378 ಪಿಪಿಇ 2011, ಬೆಂಗಳೂರು, ದಿನಾಂಕ: 20ನೇ ಸೆಪ್ಟಂಬರ್ 2011

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 19(3)(ಸಿ)ರ ಪ್ರಕಾರ ಶ್ರೀ ಜೆ.ಐ. ಕಿತ್ತೂರ್, ಜಂಟಿ ಅಭಿಯೋಗ ನಿರ್ದೇಶಕರು ಮತ್ತು ಕಾನೂನು ಅಧಿಕಾರಿ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ಇವರ ಸ್ಥಾನಪನ್ನ ಅವಧಿಯನ್ನು ದಿನಾಂಕ: 29.06.2010ರಿಂದ ತೃಪ್ತಿಕರವಾಗಿ ಪೂರೈಸಿರುವುದರೆಂದು ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2337 **ಹೆಚ್.ಕೆ. ನಿಂಗಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಪೊಲೀಸ್ ಸೇವೆಗಳು-ಬಿ)

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಒಇ 90 ಕಸೈಸೇ 2011, ಬೆಂಗಳೂರು, ದಿನಾಂಕ : 09–09–2011

ಸರ್ಕಾರದ ಆದೇಶ ಸಂಖ್ಯೆ: ಒಇ 52 ಕಸೈಸೇ 99, ದಿನಾಂಕ: 25–6–1999ರ ಆದೇಶ ಭಾಗದಲ್ಲಿನ ಕಂಡಿಕೆ–3 ರ ಬದಲಾಗಿ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

"ಬಿ.ಎಸ್.ಎಫ್., ಆರ್.ಪಿ.ಎಫ್., ಸಿ.ಆರ್.ಪಿ.ಎಫ್. ಮುಂತಾದ ಅರೆ ಮಿಲಿಟರಿ ಪಡೆಯ ಯೋಧರುಗಳು ಗಡಿ ರಕ್ಷಣೆ ಸಂದರ್ಭದಲ್ಲಿ ಅಥವಾ ರಾಷ್ಟ್ರದಲ್ಲಿನ ಆಂತರಿಕ ಸಂಘರ್ಷಗಳ ಸಂದರ್ಭದಲ್ಲಿ ಭಾಗವಹಿಸಿ ಮರಣವನ್ನಪ್ಪಿದಾಗ ಅವರ ಅವಲಂಬಿತರಿಗೂ ಸಹ ಸೈನ್ಯದ ಯೋಧರಿಗೆ ನೀಡುತ್ತಿರುವ ಅನುಗ್ರಹ ಪೂರ್ವಕ ಅನುದಾನವನ್ನು ವಿಸ್ತರಿಸಿದೆ".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಪೊಲೀಸ್ ಸಹಾಯಕ ಸೇವೆಗಳು)

ಪಿ.ಆರ್. 2338

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲಾನಯನ ಇಲಾಖೆಯನ್ನು ಪ್ರಾಯೋಗಿಕವಾಗಿ ರಾಜ್ಯದ ಗುಲ್ಬರ್ಗಾ, ಯಾದಗಿರಿ, ಬೀದರ್, ದಾವಣಗೆರೆ, ಕೊಪ್ಪಳ, ಗದಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಯನ್ನಾಗಿ ಪರಿಗಣಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಜಲಾನಯನ ಅಭಿವೃದ್ಧಿ ಇವರ ಪತ್ರದ ಸಂಖ್ಯೆ : ಜಅಇ/ಕಾನಿ–ಸುಜಲ.III/ಅ.ಸಂ./ 2011–12, ದಿನಾಂಕ 25–05–2011

ಪ್ರಸ್ತಾವನೆ :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಾದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಚಟುವಟಿಕೆಗಳನ್ನು ಕೂಡ ಕಾರ್ಯಗತಗೊಳಿಸಲಾಗುತ್ತಿದ್ದು, ಸದರಿ ಚಟುವಟಿಕೆಗಳ ಅನುಷ್ಠಾನವನ್ನು ಸಂಬಂಧಪಟ್ಟ ಇಲಾಖಾ ಅನುಷ್ಠಾನ ಅಧಿಕಾರಿಗಳೇ ನಿರ್ವಹಿಸಲು ಕ್ರಮಕೈಗೊಳ್ಳಲಾಗಿದೆ. ಇಲಾಖೆಯ ಚಟುವಟಿಕೆಗಳನ್ನು ಯೋಜನೆಯಡಿ ಇಲಾಖೆಯು ಸ್ವತಂತ್ರವಾಗಿ ನಿರ್ವಹಿಸಲು ಈಗಾಗಲೇ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ರಾಜ್ಯದ 13 ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಆಯುಕ್ತರು ಜಲಾನಯನ ಇಲಾಖೆಯವರು ಉಲ್ಲೇಖಿತ ಪತ್ರದಲ್ಲಿ ಇಲಾಖೆಯ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದ ಹಣದ ಪಾವತಿಯನ್ನು ಗ್ರಾಮ ಪಂಚಾಯಿತಿಗಳ ಮೂಲಕವೇ ಮಾಡಲಾಗುತ್ತಿದ್ದು, ಯೋಜನೆಯ ಅನುಷ್ಠಾನದಲ್ಲಿ ತೊಂದರೆಯಾಗುತ್ತಿದೆಯೆಂದು ಸರ್ಕಾರಕ್ಕೆ ವರದಿ ಮಾಡಿ ಜಲಾನಯನ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯೆಂದು ಪರಿಗಣಿಸಿ ಮಾರ್ಗಸೂಚಿಗಳನ್ವಯ ಸೂಕ್ತ ಅವಕಾಶವನ್ನು ಕಲ್ಪಿಸಿದಲ್ಲಿ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಇದರ ಸಂಬಂಧ ಸೂಕ್ತವಾದ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರವನ್ನು ವಿನಂತಿಸಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಜಲಾನಯನ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವತಂತ್ರವಾಗಿ ನಿರ್ವಹಿಸಿ ಅನುಷ್ಠಾನಗೊಳಿಸುವುದು ಅಗತ್ಯತೆ ಇರುವುದರಿಂದ ಸದರಿ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಪರಿಗಣಿಸಿ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 167 ಉಖಾಯೋ 2010, ಬೆಂಗಳೂರು, ದಿನಾಂಕ 14ನೇ ಸೆಪ್ಟೆಂಬರ್ 2011

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಹಾಗೂ ಇರುವ ಅಂಶಗಳನ್ನು ಪರಿಗಣಿಸಿ ಪಂಚಾಯತ್ ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ರಾಜ್ಯದ ಗುಲ್ಬರ್ಗಾ, ಯಾದಗಿರಿ, ಬೀದರ್, ದಾವಣಗೆರೆ, ಕೊಪ್ಪಳ, ಗದಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಲಾನಯನ ಇಲಾಖೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಯೆಂದು ಪರಿಗಣಿಸಿ ಸದರಿ ಇಲಾಖೆಗೆ ನಿಗದಿಪಡಿಸಿದ ಎಲ್ಲಾ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಮಾರ್ಗಸೂಚಿಗಳನ್ವಯ ಹಾಗೂ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

ಕ್ರ.ಸಂ.	ಜಿಲ್ಲೆಯ ಹೆಸರು	ಅನುಷ್ಠಾನ ಸಂಸ್ಥೆ	ಅನುಷ್ಠಾನ ಅಧಿಕಾರಿ
1	ಗುಲ್ಬರ್ಗಾ	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಗುಲ್ಬರ್ಗಾ
2	ಯಾದಗಿರಿ	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಯಾದಗಿರಿ
3	ಬೀದರ್	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೀದರ್

4	ದಾವಣಗೆರೆ	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ
5	ಕೊಪ್ಪಳ	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ
6	ಗದಗ	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಗದಗ
7	ಚಾಮರಾಜನಗರ	ಜಲಾನಯನ ಇಲಾಖೆ	ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಾಮರಾಜನಗರ

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಚದಲ್ಲಿ ಸೇರಿಸತಕ್ಕದ್ದು.
2. ಜಲಾನಯನ ಇಲಾಖೆಯ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.
4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ ಇವರು ಸದರಿ ಇಲಾಖೆಯ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ ಎನ್‌ಎಂಆರ್‌ಗಳನ್ನು ಎಂಐಎಸ್ ಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು ಎಂಐಎಸ್ ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ ಲಾಗಿನ್ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಲಾಗಿನ್ ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ ಇವರು ವಿತರಿಸಿರುವ ಎನ್‌ಎಂಆರ್‌ಗಳನ್ನು ಪಡೆಯಬಹುದಾಗಿದೆ.
6. ಎಂಐಎಸ್ ನಿಂದ ಪಡೆದ ಎನ್‌ಎಂಆರ್‌ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು ಎಂಐಎಸ್‌ನಲ್ಲಿ ಭರ್ತಿ ಮಾಡಲು ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಾಗಿರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ ಎಂಐಎಸ್‌ನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.
8. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು. ಹಾಗೂ ದೃಢೀಕರಿಸುವುದರ ಜೊತೆಗೆ ಎಂಐಎಸ್‌ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.
9. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ ಎನ್‌ಎಂಆರ್ ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಯ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ/ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು ಎಂಐಎಸ್‌ನಲ್ಲಿ ದಾಖಲಿಸತಕ್ಕದ್ದು.
10. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ ಲಾಗಿನ್ ಮೂಲಕವೇ ಎಂಐಎಸ್‌ನಲ್ಲಿ ಭರ್ತಿ ಮಾಡತಕ್ಕದ್ದು.
11. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ದೃಢೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು.
12. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.

13. ಸರ್ಕಾರವು ದಿನಾಂಕ 25-07-2011 ರಂದು ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿರುವ ಅನುಷ್ಠಾನಾಧಿಕಾರಿಗಳು ಯೋಜನೆಯ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪಾತ್ರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಹೊರಡಿಸಿರುವ ಸುತ್ತೋಲೆಯ ಸೂಚನೆಗಳಂತೆ ಪಾಲಿಸುವುದು.

14. ಕೇಂದ್ರ/ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ/ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಶಿವಶಂಕರ್,
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪಿ.ಆರ್.ನಂ. 2339

ಇಂಧನ ಸಚಿವಾಲಯ

ವಿಷಯ : 2011-12ನೇ ಸಾಲಿನ ಪರಿಶಿಷ್ಟ ಜಾತಿಗಳ ಉಪಯೋಜನೆಯಡಿ (SCP) ವಿದ್ಯುತ್ ಸರಬರಾಜು ಕಂಪನಿಗಳು ಕೈಗೊಂಡಿರುವ ಕಾಮಗಾರಿಗಳಿಗೆ ಹಣ ಬಿಡುಗಡೆ ಕುರಿತು.

ಓದಲಾಗಿದೆ : 1. ಕವಿಪ್ರನಿನಿ ಪತ್ರ ಸಂಖ್ಯೆ : ಕವಿಪ್ರನಿನಿ/ಎಂಐಎಸ್/ಬಿ69/10155/10-11, ದಿನಾಂಕ 31-3-2011.

2. ಸರ್ಕಾರಿ ಆದೇಶ ಸಂಖ್ಯೆ ಇಎನ್ 78 ಪಿಎಸ್ಆರ್ 2010/ಪಿ1, ದಿನಾಂಕ 15-07-2011.

ಪ್ರಸ್ತಾವನೆ :

1. 2011-12ನೇ ಸಾಲಿನ ಆಯವ್ಯಯದ ಅಂದಾಜುನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗೆ ಇಂಧನ ಇಲಾಖೆಯ ಲೆಕ್ಕಶೀರ್ಷಿಕೆ 4801-80-190-0-02-422 ಯಡಿ ರೂ. 3500.00 ಲಕ್ಷಗಳನ್ನು ಒದಗಿಸಿದೆ.

2. ಕ್ರಮಾಂಕ 1 ರಲ್ಲಿ ಓದಲಾದ ಕವಿಪ್ರನಿನಿ ಪತ್ರದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು 2011-12ನೇ ಸಾಲಿನ ಪರಿಶಿಷ್ಟ ಜಾತಿಗಳ ಉಪಯೋಜನೆಯ ಕಾಮಗಾರಿಗಳ ವಿಸಕಂವಾರು ಕ್ರಿಯಾ ಯೋಜನೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತದೆ.

ಕ್ರಮ ಸಂಖ್ಯೆ	ಕಂಪನಿಯ ಹೆಸರು	ಭೌತಿಕ ಗುರಿ (ಸಂಖ್ಯೆ)			ಆರ್ಥಿಕ ಗುರಿ (ಲಕ್ಷ ರೂ.ಗಳಲ್ಲಿ)			
		ದಲಿತ ಬಸ್ತಿಗಳು/ ಜನತಾ ಕಾಲೋನಿಗಳು/ ತಾಂಡಾಗಳು	ನೀರಾವರಿ ಪಂಪು ಸೆಟ್ಟುಗಳು	ಕುಟೀರ ಜ್ಯೋತಿ	ವಾರ್ಷಿಕ ಗುರಿ	ಪ.ಜಾ. ಬಸ್ತಿಗಳು/ ಜನತಾ ಕಾಲೋನಿಗಳು/ ತಾಂಡಾಗಳು	ನೀರಾವರಿ ಪಂಪು ಸೆಟ್ಟುಗಳು	ಕುಟೀರ ಜ್ಯೋತಿ
		ಗುರಿ	ಗುರಿ	ಗುರಿ		ಗುರಿ	ಗುರಿ	ಗುರಿ
1	ಬೆವಿಕಂ	0	730	0	1095.00	0.00	1095.00	0.00
2	ಮವಿಕಂ	35	100	800	275.00	105.00	150.00	20.00
3	ಚಾವಿಸನಿನಿ	30	720	1400	1205.00	90.00	1080.00	35.00
4	ಹುವಿಕಂ	0	500	1700	792.50	0.00	750.00	42.50
5	ಗುವಿಕಂ	15	50	500	132.50	45.00	75.00	12.50
ಒಟ್ಟು		**80**	**2100**	**4400**	**3500.00**	**240.00**	**3150.00**	**110.00**

3. ಮೇಲೆ ಕ್ರಮಾಂಕ 2 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಲೆಕ್ಕಶೀರ್ಷಿಕೆ 4801-80-190-0-02-422 ಪರಿಶಿಷ್ಟ ಜಾತಿಗಳ ಉಪಯೋಜನೆಯಡಿ (SCP) ರೂ. 1750 ಲಕ್ಷಗಳನ್ನು ಈ ಕೆಳಕಂಡಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿದೆ.

(ಲಕ್ಷ ರೂ.ಗಳಲ್ಲಿ)

ವಿದ್ಯುತ್ ಸರಬರಾಜು ಕಂಪನಿಗಳು	ಪ.ಜಾ. ಬಸ್ತಿಗಳು/ ಜನತಾ ಕಲೋನಿಗಳು/ ತಾಂಡಾಗಳು	ನೀರಾವರಿ ಪಂಪು ಸೆಟ್ಟುಗಳು	ಕುಟೀರ ಜ್ಯೋತಿ	ಮೊಬಲಗು
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	-	547.50	-	547.50
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	52.50	75.00	10.00	137.50
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	45.00	540.00	17.50	602.50

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	–	375.00	21.25	396.25
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	22.50	37.50	6.25	66.25
ಒಟ್ಟು	**120.00**	**1575.00**	**55.00**	**1750.00**

2011–12ನೇ ಸಾಲಿನಲ್ಲಿ ರೂ.3500 ಲಕ್ಷಗಳಲ್ಲಿ ಈಗಾಗಲೇ ರೂ.1750 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಬಾಕಿ ರೂ.1750 ಲಕ್ಷಗಳನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 20 ಪಿಎಸ್‌ಆರ್ 2011/ಪಿ3–ಭಾಗ–III, ಬೆಂಗಳೂರು, ದಿನಾಂಕ 21ನೇ ಸೆಪ್ಟೆಂಬರ್ 2011

1. ಸರ್ಕಾರವು 2011–12ನೇ ವರ್ಷದ ಎರಡನೇ ಮತ್ತು ಅಂತಿಮ ಕಂತಿನ ಹಣವನ್ನು ಪರಿಶಿಷ್ಟ ಜಾತಿಗಳ ಉಪಯೋಜನೆಯಡಿ (SCP) ರೂ. 1750 (ಒಂದು ಸಾವಿರದ ಏಳು ನೂರು ಐವತ್ತು ಲಕ್ಷ ರೂ.ಗಳು ಮಾತ್ರ) ಲಕ್ಷಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಈ ಕೆಳಕಂಡಂತೆ ಬಿಡುಗಡೆ ಮಾಡಿದೆ.

(ಲಕ್ಷ ರೂ.ಗಳಲ್ಲಿ)

ವಿದ್ಯುತ್ ಸರಬರಾಜು ಕಂಪನಿಗಳು	ಪ.ಜಾ. ಬಸ್ತಿಗಳು/ ಜನತಾ ಕಾಲೋನಿಗಳು/ ತಾಂಡಾಗಳು	ನೀರಾವರಿ ಪಂಪು ಸೆಟ್ಟುಗಳು	ಕುಟೀರ ಜ್ಯೋತಿ	ಮೊಬಲಗು
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	–	547.50	–	547.50
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	52.50	75.00	10.00	137.50
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	45.00	540.00	17.50	602.50
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	–	375.00	21.25	396.25
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	22.50	37.50	6.25	66.25
ಒಟ್ಟು	**120.00**	**1575.00**	**55.00**	**1750.00**

2. ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ 4801–80–190–0–02–422 (ಯೋಜನೆ) ಯಡಿ ಭರಿಸತಕ್ಕದ್ದು.
3. ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯ ರವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.
4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 1190/ವೆಚ್ಚ–1/11, ದಿನಾಂಕ 9–9–2011ರ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್.ನಂ. 2340

ಇಂಧನ ಸಚಿವಾಲಯ

ವಿಷಯ : 2011–12ನೇ ಸಾಲಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿರಂತರಜ್ಯೋತಿ ಕಾಮಗಾರಿಗಳ ಸಲುವಾಗಿ ವಿಸಕಂಗಳಿಗೆ Equity ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1. ಯೋಜನಾ ಇಲಾಖೆಯ ಜಂಟಿ ಕಾರ್ಯದರ್ಶಿಗಳ ಅಟಿ ಸಂಖ್ಯೆ ಪಿಡಿ 11 ಎಸ್‌ಡಿಪಿ 2011 (ಇಂಧನ) ದಿನಾಂಕ 14–07–2011.

ಪ್ರಸ್ತಾವನೆ :

1. 2011–12ನೇ ಸಾಲಿನ ಆಯವ್ಯಯದಲ್ಲಿ ಗಡಿಭಾಗದ ತಾಲ್ಲೂಕುಗಳ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿರಂತರ ಜ್ಯೋತಿ ಕಾಮಗಾರಿಗಳಿಗೆ ರೂ.150 ಕೋಟಿಗಳನ್ನು ಒದಗಿಸಿರುತ್ತದೆ.
2. ವಿಕಸಂಗಳು ವಿಶೇಷ ಅಭಿವೃದ್ಧಿ ಯೋಜನೆಯಡಿ ನಿರಂತರ ಜ್ಯೋತಿ ಕಾಮಗಾರಿಗಳನ್ನು ಗಡಿಭಾಗದ ತಾಲೂಕುಗಳಲ್ಲಿ ತೆಗೆದುಕೊಳ್ಳಲು ಸಲ್ಲಿಸಿದ್ದ ರೂ.100 ಕೋಟಿಗಳ ಕ್ರಿಯಾಯೋಜನೆಗೆ ಸಂಬಂಧಿಸಿದಂತೆ ಯೋಜನಾ ಇಲಾಖೆಯ ರೂ.90 ಕೋಟಿಗಳ ಕ್ರಿಯಾಯೋಜನೆಗೆ ಮೊದಲ ಹಂತದಲ್ಲಿ ಒಪ್ಪಿಗೆ ನೀಡಿದೆ.
3. ನಿರಂತರ ಜ್ಯೋತಿ ಯೋಜನಾ ಕಾಮಗಾರಿಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ Equity ಹಣ ಬಿಡುಗಡೆ ಮಾಡಲು, ವಿದ್ಯುತ್ ಸರಬರಾಜು ಕಂಪನಿಗಳ ಕೋರಿಕೆಯ ಪ್ರಸ್ತಾವನೆಯನ್ನು ಸರ್ಕಾರ ಮಟ್ಟದಲ್ಲಿ ಪರಿಶೀಲಿಸಿದ್ದು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 20 ಪಿಎಸ್‌ಆರ್ 2011/ಪಿ3–ಭಾಗ–I, ಬೆಂಗಳೂರು,
ದಿನಾಂಕ 21ನೇ ಸೆಪ್ಟೆಂಬರ್ 2011

1. ಸರ್ಕಾರವು 2011–12ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿರಂತರ ಜ್ಯೋತಿ ಕಾಮಗಾರಿಗಳ ಸಲುವಾಗಿ ರೂ.90 ಕೋಟಿಗಳನ್ನು (ತೊಂಬತ್ತು ಕೋಟಿ ರೂಪಾಯಿಗಳು ಮಾತ್ರ) ಈ ಕೆಳಗಿನ ಟೇಬಲ್‌ನಲ್ಲಿ ನಮೂದಿಸಿರುವಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿದೆ.

ಕ್ರಮ ಸಂಖ್ಯೆ	ಕಂಪನಿಗಳ ಹೆಸರು	Equity ರೂಪದಲ್ಲಿ ಬಿಡುಗಡೆ ಮಾಡಿದ ಹಣ (ಕೋಟಿ ರೂ.ಗಳಲ್ಲಿ)
1	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	22.50
2	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	18.00
3	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	36.00
4	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	13.50
	ಮೊತ್ತ	**90.00**

2. ಸದರಿ ಮೊತ್ತವನ್ನು 4801–80–190–0–02–133 Investment in ESCOM's for Niranthara Jyothi works Special Development Plan-Plan ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.
3. ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ರವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.
4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 1190/Exp-I/2011, ದಿನಾಂಕ 09–09–2011ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್.ನಂ. 2341

ಇಂಧನ ಸಚಿವಾಲಯ

ವಿಷಯ : 2011–12ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಉಪಯೋಜನೆಯಡಿ (TSP) ವಿದ್ಯುತ್ ಸರಬರಾಜು ಕಂಪನಿಗಳು ಕೈಗೊಂಡಿರುವ ಕಾಮಗಾರಿಗಳಿಗೆ ಹಣ ಬಿಡುಗಡೆ ಕುರಿತು.

ಓದಲಾಗಿದೆ : 1. ಕವಿಪ್ರನಿನಿ ಪತ್ರ ಸಂಖ್ಯೆ : ಕವಿಪ್ರನಿನಿ/ಎಂಐಎಸ್/ಬಿ69/10155/10–11, ದಿನಾಂಕ : 31–3–2011.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 78 ಪಿಎಸ್ಆರ್ 2010/ಪಿ1 ದಿನಾಂಕ : 15–7–2011.

ಪ್ರಸ್ತಾವನೆ :

1. 2011–12ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ ಪರಿಶಿಷ್ಟ ವರ್ಗಗಳ ಉಪ–ಯೋಜನೆಯಡಿ ಲೆಕ್ಕಶೀರ್ಷಿಕೆ 4801–80–190–0–02–423 ಗಿರಿಜನ ಉಪಯೋಜನೆ ರೂ. 1500 ಲಕ್ಷ ಅವಕಾಶವನ್ನು ಕಲ್ಪಿಸಲಾಗಿದೆ.

2. ಮೇಲೆ ಕ್ರಮಾಂಕ–1 ರಲ್ಲಿ ಓದಲಾದ ಕವಿಪ್ರನಿನಿ ಪತ್ರದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು 2011–12ನೇ ಸಾಲಿನ ಪರಿಶಿಷ್ಟ ಪಂಗಡಗಳ ಉಪಯೋಜನೆಯ ಕಾಮಗಾರಿಗಳ ವಿಸಕಂವಾರು ಕ್ರಿಯಾ ಯೋಜನೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತದೆ.

ಕ್ರಮ ಸಂಖ್ಯೆ	ಕಂಪನಿಯ ಹೆಸರು	ಭೌತಿಕ ಗುರಿ (ಸಂಖ್ಯೆ)			ಆರ್ಥಿಕ ಗುರಿ (ಲಕ್ಷ ರೂ.ಗಳಲ್ಲಿ)			
		ಗಿರಿಜನ ಕಾಲೋನಿಗಳು	ನೀರಾವರಿ ಪಂಪು ಸೆಟ್ಟುಗಳು	ಕುಟೀರ ಜ್ಯೋತಿ	ವಾರ್ಷಿಕ ಗುರಿ	ಗಿರಿಜನ ಕಾಲೋನಿಗಳು	ನೀರಾವರಿ ಪಂಪು ಸೆಟ್ಟುಗಳು	ಕುಟೀರ ಜ್ಯೋತಿ
		ಗುರಿ	ಗುರಿ	ಗುರಿ	ಗುರಿ	ಗುರಿ	ಗುರಿ	ಗುರಿ
1	ಬೆವಿಕಂ	0	300	0	450.00	0.00	450.00	0.00
2	ಮವಿಕಂ	10	70	311	179.48	66.70	105.00	7.78
3	ಚಾವಿಸನಿನಿ	5	195	210	331.05	33.30	292.50	5.25
4	ಹುವಿಕಂ	5	315	145	509.47	33.35	472.50	3.62
5	ಗುವಿಕಂ	0	20	0	30.00	0.00	30.00	0.00
ಒಟ್ಟು		20	900	666	1500.00	133.35	1350.00	16.65

3. ಮೇಲೆ ಕ್ರಮಾಂಕ 2 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಲೆಕ್ಕಶೀರ್ಷಿಕೆ 4801–80–190–0–02–423 ಪರಿಶಿಷ್ಟ ವರ್ಗಗಳ ಉಪಯೋಜನೆಯಡಿ (TSP) ರೂ. 750 ಲಕ್ಷಗಳನ್ನು ಈ ಕೆಳಕಂಡಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿದೆ.

(ರೂ. ಲಕ್ಷಗಳಲ್ಲಿ)

ವಿದ್ಯುತ್ ಸರಬರಾಜು ಕಂಪನಿಗಳು	ಗಿರಿಜನ ಕಾಲೋನಿಗಳು	ನೀರಾವರಿ ಪಂಪುಸೆಟ್ಟುಗಳು	ಕುಟೀರ ಜ್ಯೋತಿ	ಮೊಬಲಗು
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	–	225.00	–	225.00
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	33.34	52.50	3.90	89.74
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	16.66	146.26	2.61	165.53
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	16.67	236.26	1.80	254.73

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	–	15.00	–	15.00
ಒಟ್ಟು	66.67	675.02	8.31	750.00

2011–12ನೇ ವರ್ಷದ ಆಯವ್ಯಯದಲ್ಲೊದಗಿಸಿರುವ ರೂ. 1500 ಲಕ್ಷಗಳಲ್ಲಿ ಈಗಾಗಲೇ ರೂ. 750 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಬಾಕಿ ರೂ. 750 ಲಕ್ಷಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಸರ್ಕಾರ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 20 ಪಿಎಸ್‌ಆರ್ 2011/ಪಿ3–ಭಾಗ–IV, ಬೆಂಗಳೂರು, ದಿನಾಂಕ : 21–9–2011

1. ಸರ್ಕಾರವು, 2011–12ನೇ ವರ್ಷದ ಎರಡನೇ ಅವಧಿಗೆ ಪರಿಶಿಷ್ಟ ವರ್ಗಗಳ ಉಪಯೋಜನೆಯಡಿ (TSP) ರೂ. 750/ (ಏಳು ನೂರ ಐವತ್ತು ಲಕ್ಷ ರೂ.ಗಳು ಮಾತ್ರ) ಲಕ್ಷಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಈ ಕೆಳಕಂಡಂತೆ ಬಿಡುಗಡೆ ಮಾಡಿದೆ.

(ರೂ. ಲಕ್ಷಗಳಲ್ಲಿ)

ವಿದ್ಯುತ್ ಸರಬರಾಜು ಕಂಪನಿಗಳು	ಗಿರಿಜನ ಕಾಲೋನಿಗಳು	ನೀರಾವರಿ ಪಂಪುಸೆಟ್ಟುಗಳು	ಕುಟೀರ ಜ್ಯೋತಿ	ಮೊಬಲಗು
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	–	225.00	–	225.00
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	33.36	52.50	3.88	89.74
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	16.64	146.24	2.64	165.52
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	16.68	236.24	1.82	254.74
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	–	15.00	–	15.00
ಒಟ್ಟು	66.68	674.98	8.34	750.00

2. ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ 4801–80–190–0–02–423 (ಯೋಜನೆ) ಯಡಿ ಭರಿಸತಕ್ಕದ್ದು.

3. ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯ ರವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 1190/ವೆಚ್ಚ–1/11 ದಿನಾಂಕ : 9–9–2011ರ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಪಿ.ಆರ್. 2342

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.

ಇಂಧನ ಸಚಿವಾಲಯ

ವಿಷಯ : 2011–12ನೇ ಸಾಲಿಗೆ ನಿರಂತರಜ್ಯೋತಿ ಕಾಮಗಾರಿಗಳಿಗಾಗಿ ವಿಸಕಂಗಳಿಗೆ **(Equity)** ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : 166(ಪಿ) ಇಎಂಸಿ 2010, ದಿನಾಂಕ : 29–3–2011.

2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 13 ಪಿಎಸ್‌ಆರ್ 2010, ದಿನಾಂಕ : 30–3–2011.

3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 20 ಪಿಎಸ್‌ಆರ್ 2011, ದಿನಾಂಕ : 5–4–2011.

ಪ್ರಸ್ತಾವನೆ :

1. ರಾಜ್ಯ ಸರ್ಕಾರವು ರಾಜ್ಯದ 126 ತಾಲ್ಲೂಕ್‌ಗಳಲ್ಲಿ ನಿರಂತರಜ್ಯೋತಿ ಯೋಜನೆಯನ್ನು ಎರಡು ವರ್ಷಗಳ ಅವಧಿಯಲ್ಲಿ ಜಾರಿ ಮಾಡಲು ತೀರ್ಮಾನಿಸಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ವಿದ್ಯುತ್ ಸರಬರಾಜು ಕಂಪನಿಗಳಿಗೆ ಅಗತ್ಯವಿರುವ ರೂ. 2123 ಕೋಟಿಗಳ ಬಂಡವಾಳದ ಶೇಕಡ 40 ರಷ್ಟರ ನೆರವು ನೀಡುವುದಾಗಿ ತೀರ್ಮಾನಿಸಿದೆ.

2. ಬೆವಿಕಂ/ಹುವಿಕಂ/ಗುವಿಕಂ/ಚಾವಿಕಂಗಳ ವ್ಯಾಪ್ತಿಯಲ್ಲಿ ಮೊದಲ ಹಂತದಲ್ಲಿ ನಿರಂತರಜ್ಯೋತಿ ಕಾಮಗಾರಿಗಳನ್ನು 70 ತಾಲ್ಲೂಕುಗಳಲ್ಲಿ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ರೂ. 1200 ಕೋಟಿಗಳ ಬಂಡವಾಳದಲ್ಲಿ ಶೇಕಡ 40 ರಷ್ಟನ್ನು ಮಂಜೂರು ಮಾಡಲಿದೆ.

3. ಯೋಜನ ಇಲಾಖೆ ಟಿಪ್ಪಣಿ ಸಂಖ್ಯೆ : ಪಿಡಿ 4 ಎಸ್‌ಸಿಎ 2010 ದಿನಾಂಕ : 1–12–2010ರಲ್ಲಿ ಶೇಕಡ 40 ರಷ್ಟನ್ನು ಈಕ್ವಿಟಿಯಾಗಿ ಬಿಡುಗಡೆ ಮಾಡಲು ಒಪ್ಪಿದೆ.

4. ನಿರಂತರಜ್ಯೋತಿ ಕಾಮಗಾರಿಗಳ ಬಂಡವಾಳವಾಗಿ 2011–12ನೇ ಸಾಲಿಗೆ ಎಲ್ಲಾ ಎಸ್ಕಾಂಗಳಿಗೆ ಒಟ್ಟು ರೂ. 300 ಕೋಟಿಗಳನ್ನು ಲೆಕ್ಕಶೀರ್ಷಿಕೆ 4801–80–190–0–02–211ರಲ್ಲಿ ಈಕ್ವಿಟಿಯಾಗಿ ಬಿಡುಗಡೆ ಮಾಡಲು ಒದಗಿಸಲಾಗಿದೆ. ಅದರಿಂದ, ನಿರಂತರಜ್ಯೋತಿ ಯೋಜನಾ ಕಾಮಗಾರಿಗಳಿಗೆ 2011–12ನೇ ಸಾಲಿಗೆ Equity ಹಣ ಬಿಡುಗಡೆ ಮಾಡಲು ಪ್ರಸ್ತುತ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಇಎನ್ 20 ಪಿಎಸ್‌ಆರ್ 2011/ಪಿ3–ಭಾಗ–II, ಬೆಂಗಳೂರು, ದಿನಾಂಕ : 21–8–2011

1. ಸರ್ಕಾರವು, 2011–12ನೇ ಸಾಲಿನಲ್ಲಿ ನಿರಂತರಜ್ಯೋತಿ ಕಾಮಗಾರಿಗಳ ಸಲುವಾಗಿ ರೂ. 85 ಕೋಟಿಗಳನ್ನು (ಎಂಬತ್ತೈದು ಕೋಟಿ ರೂಪಾಯಿಗಳು ಮಾತ್ರ) ಈ ಕೆಳಗಿನ ಟೇಬಲ್‌ನಲ್ಲಿ ನಮೂದಿಸಿರುವಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿದೆ.

ಕ್ರಮ ಸಂಖ್ಯೆ	ಕಂಪನಿಗಳ ಹೆಸರು	Equity ರೂಪದಲ್ಲಿ ಬಿಡುಗಡೆ ಮಾಡಿದ ಹಣ (ಕೋಟಿ ರೂ.ಗಳಲ್ಲಿ)
1	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು	20.00

2	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ	20.00
3	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ, ಗುಲ್ಬರ್ಗಾ	18.00
4	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಮೈಸೂರು	20.00
4	ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ, ಹುಕ್ಕೇರಿ, ಬೆಳಗಾವಿ ಜಿಲ್ಲೆ	7.00
	ಮೊತ್ತ	85.00

2. ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ 4801–80–190–0–02–211 Investment in ESCOMs for Niranthara Jyothi works) ಯಡಿ ಭರಿಸತಕ್ಕದ್ದು.

3. ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯ ರವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 1190/ವೆಚ್ಚ–1/2011 ದಿನಾಂಕ : 9–9–2011 ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.

ಪಿ.ಆರ್. 2343

COMMERCE & INDUSTRIES SECRETARIAT

Sub : Repayment of loan advanced by NCDC for various schemes of co-operative development in Karnataka for the year 2010-11.

Read :
1. Letter No. NCDC/A&C/X(1) Rep/2001-02/183 dated : 6-7-2011 from Assistant Director (Loan) NCDC (Finance Division) New Delhi.
2. Letter No. DHT/JRCS/JT/Co-Textiles/NCDC/Repayment/2010-11, dated 8-8-2011 from the Commissioner for Textiles & Development & Director of Handlooms & Textiles, Bangalore

Preamble:

The Assistant Director (Loan), National Co-operative Development Corporation, New Delhi, in his letter dated 6-7-2011, read at (1) above, has intimated that a sum of ₹. 121,93,001/- towards regular installment of loan with normal rate of interest after allowing rebate for timely payment is due for payment to the NCDC on or before 5-10-2011, against the loan advanced under various schemes to co-operative textiles (spinning mills) in Karnataka for the year 2010-11, It is also mentioned that rebate will be admissible for timely repayment of loan installment, i.e. before 5-10-2011 and the State Govt will have to pay interest penal rate for the period of delay.

The Commissioner for Textiles & Director of Handlooms & Textiles, Bangalore, in his letter dated 8-8-2011, read at (2) above, has reported that the above amount is due to be paid to NCDC, New Delhi, before 5-10-2011 for the year 2010-11.

The proposal has been examined and the following orders are issued.

GOVERNMENT ORDER NO. CI 11 CIM 2011, BANGALORE, DATED 21-9-2011.

In the circumstances explained above, Government is pleased to accord sanction for the release of ₹. 1,18,16,334/- (Rupees one crore, eighteen lakhs, sixteen thousand three hundred and thirty four only) (principal of ₹. 84,43,100-00 and interest of ₹. 33,73,244/-) to be payable to the NCDC, New Delhi, in respect of various loans to co-operative textiles (spinning mills) for the year 2010-11.

The above expenditure shall be debitable to the Head of Account "6003-00-108-0-01-" (NP) towards the principal amount of ₹. 84,43,100-00 and "2049-01-200-2-03-" towards interst of ₹. 33,73,244/-.

"The Account Officer, office of the Commissioner for Textiles & Director of Handlooms & Textiles, Bangalore, is authorized to draw the said amount on payee's receipt duly countersigned by the Commissioner for Textiles & Director of Handlooms & Textiles and remit the same to the National Co-operative Development Corporation, New Delhi, before 5-10-2011".

The State Huzur Treasury, Bangalore and the District Treasury, Bangalore (Urban) Shall honour the bills immediately.

This order issues with the concurrence of Finance Department vide U.O. Note No. FD 51 GIE 2011 Dated 19-9-2011.

By Order and in the name of the Governor of Karnataka,

(B. RAMASWAMY)

Under Secretary to Government

Commerce and Industries Department.

(Co-operative Sugar).

P.R. No. 2344

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಆಕುಕ 157 ಎಫ್‌ಪಿಇ 2011, ಬೆಂಗಳೂರು, ದಿನಾಂಕ : 9-9-2011

ವಿಷಯ : ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನ ಪಡೆಯಲು ವೈದ್ಯಕೀಯ ಪ್ರಮಾಣ ಪತ್ರ ನೀಡುವ ಬಗ್ಗೆ.

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಸರ್ಕಾರವು ಸಮಾಜದಲ್ಲಿನ ಅಂಗವಿಕಲರು, ವಿಧವೆಯರು, ಹಾಗೂ ವಯೋವೃದ್ಧರು ಮುಂತಾದ ವರ್ಗಗಳಿಗೆ ಸೇರಿದವರಿಗೆ ಇತರರಂತೆ ಜೀವನ ನಡೆಸಲು ಸ್ವಲ್ಪ ಮಟ್ಟಿಗೆ ಮಾಸಾಶನಗಳ ರೂಪದಲ್ಲಿ ಆರ್ಥಿಕ ನೆರವು ನೀಡುವ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸುವ ಹಲವು ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

ಈ ಯೋಜನೆಗಳಡಿ ಫಲಾನುಭವಿಗಳ ವಯಸ್ಸಿನ ಪ್ರಮಾಣ ಪತ್ರ ನೀಡುವ ಬಗ್ಗೆ ಹಾಲಿ ಇರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಬೇಕೆಂದು ನಿರ್ಧರಿಸಲಾಗಿದೆ.

ವೃದ್ಧಾಪ್ಯ ಮತ್ತು ವಿಧವಾ ವೇತನ ನೀಡುವ ಕುರಿತಂತೆ ಸಕ್ಷಮ ಪ್ರಾಧಿಕಾರವು ಅನುಮಾನಸ್ಪದ ಪ್ರಕರಣಗಳಲ್ಲಿ ವ್ಯಕ್ತಿಯ ವಯಸ್ಸಿನ ಪ್ರಮಾಣ ಪತ್ರ ನೀಡಬೇಕೆಂದು ಕೋರಿದ ಸಂದರ್ಭದಲ್ಲಿ ಮೊದಲು ವ್ಯಕ್ತಿಯನ್ನು ಕ್ಷ-ಕಿರಣ ಪರೀಕ್ಷೆಗೆ ಒಳಪಡಿಸಿ ನಂತರವೇ ವೈದ್ಯಕೀಯ ಪ್ರಮಾಣ ಪತ್ರ ನೀಡುವುದು ಕಡ್ಡಾಯವಾಗಿದೆ ಈ ಸಂಬಂಧ ಈ ಸುತ್ತೋಲೆಯೊಡನೆ ಲಗತ್ತಿಸಿರುವ ನಮೂನೆ ಯಂತೆ ವಯಸ್ಸಿನ ದೃಢೀಕರಣ ಪ್ರಮಾಣ ಪತ್ರವನ್ನು ನೀಡತಕ್ಕದೆಂದು ಈ ಮೂಲಕ ಸೂಚಿಸಲಾಗಿದೆ.

ಈ ಸುತ್ತೋಲೆಯ ಅನುಬಂಧದಲ್ಲಿ ನಿಗದಿಪಡಿಸಿದ ನಮೂನೆಯನ್ನು ಉಲ್ಲಂಘಿಸಿ ಬೇರೆ ನಮೂನೆಯ ವೈದ್ಯಕೀಯ ಪ್ರಮಾಣ ಪತ್ರಗಳನ್ನು ನೀಡಿದಲ್ಲಿ, ಸಂಬಂಧಪಟ್ಟ ಸಕ್ಷಮ ವೈದ್ಯಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಅಂತಹವರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಈ ಸೂಚನೆಗಳು ತಕ್ಷಣದಿಂದ ಜಾರಿಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಹೇಮನಾಥ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

(ಸುತ್ತೋಲೆ ಸಂಖ್ಯೆ ಆಕುಕ 157 ಎಫ್‌ಪಿಇ 2011, ದಿನಾಂಕ : 9-9-2011 ಕ್ಕೆ ಅನುಬಂಧ)

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಇಲಾಖೆ

ವಯಸ್ಸಿನ ದೃಢೀಕರಣ ಪತ್ರ

ಸಂಖ್ಯೆ : ಆಕುಕ/ವಯಸ್ಸು/ಸಂಖ್ಯೆ /20 ದಿನಾಂಕ :

ಶ್ರೀ/ಶ್ರೀಮತಿ/ಕುಮಾರಿ . . . . ತಂದೆ/ಗಂಡ . . . . ಇವರ ವಯಸ್ಸನ್ನು ಪರೀಕ್ಷಿಸಲು . . . . ರವರಿಂದ ಕೋರಿಕೆ ಪತ್ರವನ್ನು ಸ್ವೀಕರಿಸಲಾಗಿದೆ.

ಅಭ್ಯರ್ಥಿ ಹೆಸರು : ಅಭ್ಯರ್ಥಿಯ ಹೇಳಿಕೆಯಂತೆ ವಯಸ್ಸು . . . . ವರ್ಷ ವಿಳಾಸ.

ಪರೀಕ್ಷೆಗೆ ಒಪ್ಪಿಗೆ.

ಗುರುತಿನ ಚಿಹ್ನೆಗಳು 1.

2.

ಪರೀಕ್ಷೆಯ ಸಮಯ, ದಿನಾಂಕ ಹಾಗೂ ಸ್ಥಳ

ಚರಿತ್ರೆ
1. ಹಿಂದೆ ಯಾವುದಾದರು ಮುಖದ ಸ್ವರೂಪಿಕ ಚಿಕಿತ್ಸೆಗೆ ಒಳಗಾಗಿರುವರೆ
2. ಕೃತಕ ದಂತ ಶ್ರೇಣಿ ಅಳವಡಿಕೆ/ಹಲ್ಲು ದುರಸ್ಥಿಗೆ ಒಳಗಾಗಿರುವರೆ ?
3. ಮಧುಮೇಹ/ರಕ್ತದೊತ್ತಡ/ಅಂಗವಿಕಲತೆ
4. ಔಷೊಧೋಪಚಾರ

5. ದೃಷ್ಟಿ–ಸಹಜ/ಕಣ್ಣಿನ ಪೊರೆ/ಶಸ್ತ್ರಚಿಕಿತ್ಸೆಯಿಂದ ಸರಿಪಡಿಸಿದ ದೃಷ್ಟಿ
6. ಕಿವಿ ಕೇಳುವಿಕೆ (ಶ್ರವಣ)–ಸಹಜ/ಮಂದ ಕೇಳುವಿಕೆ–ವೃದ್ಯಾಪ್ಯದಿಂದ ಅಥವಾ ಔಷಧೋಪಚಾರ

ದೈಹಿಕ ಪರೀಕ್ಷೆ

1. ದೇಹದಾರ್ಢ್ಯತೆ ಹಾಗೂ ಪೋಷಣೆ
2. ಎತ್ತರ ಮತ್ತು ತೂಕ
3. ಮೂಳೆ ಸವೆತದ ಲಕ್ಷಣಗಳು : ಇದೆ/ಇಲ್ಲ
4. ಬೆನ್ನುಮೂಳೆ : ಸಹಜ/ಬಾಗಿದ
5. ನಡಿಗೆ : ಸ್ವತಂತ್ರವಾಗಿ/ಸಹಾಯದಿಂದ
6. ವೃದ್ಯಾಪ್ಯ ಕೈ ನಡುಕ : ಇದೆ/ಇಲ್ಲ
7. ಚರ್ಮ ಸುಕ್ಕುವಿಕೆ : ಇದೆ/ಇಲ್ಲ
8. ಆರ್ಕಸ್ ಸೆನಾಲಿಸ್ : ಇದೆ/ಇಲ್ಲ
9. ತಲೆಯ ಕೂದಲು : ಕಪ್ಪು/ಬೆಳ್ಳಗೆ/ಮಿಶ್ರಿತ
10. ದಂತ : ಸಂಖ್ಯೆ /ಸವಕಳಿ/ಕೃತಕ ಜೋಡಣೆ/ಹಲ್ಲು ಬಿದ್ದಿರುವಿಕೆ

ಒಟ್ಟು ಹಲ್ಲುಗಳ ಸಂಖ್ಯೆ :

ಮೇಲು	8 7 6 5 4 3 2 1	1 2 3 4 5 6 7 8	ಪಿ–ಇರುವಿಕೆ
	ಬಲ	ಎಡ	
ಕೆಳಗೆ	8 7 6 5 4 3 2 1	1 2 3 4 5 6 7 8	ಎಂ–ಕಾಣೆಯಾಗಿರುತ್ತದೆ
			ಸವೆತ–

ಕ್ಷ–ಕಿರಣ ಪರೀಕ್ಷೆ

ಕ್ಷ–ಕಿರಣಸಂಖ್ಯೆ ಕ್ಷ–ಕಿರಣ ದಿನಾಂಕ ಹೊರರೋಗಿ ಸಂಖ್ಯೆ

ಕ್ಷ–ಕಿರಣ ಒಳಪಡಿಸುವ ಮೊದಲು ಗುರುತಿನ ಚಿಹ್ನೆಗಳನ್ನು ನೋಡಬೇಕು

ಕ್ಷ–ಕಿರಣಕ್ಕೆ ಒಳಪಡಿಸಬೇಕಾದ ಭಾಗ

1. ತಲೆ ಹಿಂದೆ/ಮುಂದೆ/ಪಾರ್ಶ್ವನೋಟ
2. ಕತ್ತು ಹಿಂದೆ/ಮುಂದೆ/ಪಾರ್ಶ್ವನೋಟ
3. ಎದೆ ಮೂಳೆ ಹಿಂದೆ/ಮುಂದೆ/ಪಾರ್ಶ್ವನೋಟ

ಕ್ಷ–ಕಿರಣ ತಜ್ಞರ ಅಭಿಪ್ರಾಯ : ವ್ಯಕ್ತಿಯ ವಯಸ್ಸು . . . . ದಿಂದ . . . . ವರ್ಷಗಳ (ಸಂಖ್ಯೆಯಲ್ಲಿ) . . . . ದಿಂದ . . . . ವರ್ಷಗಳು (ಅಕ್ಷರಗಳಲ್ಲಿ)

ಅಂತಿಮ ಅಭಿಪ್ರಾಯ : ಶ್ರೀ/ಶ್ರೀಮತಿ/ಕುಮಾರಿ . . . . ರವರ ದೈಹಿಕ, ದಂತ ಹಾಗೂ ಕ್ಷ–ಕಿರಣ ಪರೀಕ್ಷೆಯಿಂದ ವ್ಯಕ್ತಿಯ ವಯಸ್ಸು . . . . ದಿಂದ . . . . ವರ್ಷಗಳು (ಸಂಖ್ಯೆಯಲ್ಲಿ) . . . . ದಿಂದ . . . . ವರ್ಷಗಳು (ಅಕ್ಷರಗಳಲ್ಲಿ) ಆಗಿರುತ್ತದೆ ಎಂದು ಅಭಿಪ್ರಾಯ ನೀಡಿರುತ್ತೇನೆ.

ದಿನಾಂಕ : **ಮೊಹರು ಮತ್ತು ಸಹಿ**

ಸ್ಥಳ : **ಕೆಎಂಸಿ ನೋಂದಣಿ ಸಂಖ್ಯೆ**

ಐ. ಹೇಮನಾಥ

ಪಿ.ಆರ್. 2345

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ : ಪಸಂಮೀ 242 ಪಸಸೇ 2011, ಬೆಂಗಳೂರು ದಿನಾಂಕ : 16–09–2011

ತಿದ್ದುಪಡಿ

ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 547 ಪಸಸೇ 2009, ದಿನಾಂಕ : 04–03–2011ರಲ್ಲಿನ ಕ್ರಮ ಸಂಖ್ಯೆ : 14 (ಜೇಷ್ಠತಾ ಸಂಖ್ಯೆ : 548)ರ ಮುಂದೆ ಅಂಕಣ–3ರಲ್ಲಿ 'ಡಾ: ಎಸ್.ಎಸ್. ಪಾಟೀಲ್, ಪಶು ಆಸ್ಪತ್ರೆ, ಕಿತ್ತೂರು, ಬಾಗಲಕೋಟೆ ಜಿಲ್ಲೆ' ಎಂದು ನಮೂದಾಗಿರುವುದನ್ನು "ಡಾ: ಎಸ್.ಎಸ್. ಪಾಟೀಲ್, ಪಶು ಆಸ್ಪತ್ರೆ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ" ಎಂದು ತಿದ್ದುಪಡಿ ಮಾಡಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

ಉಳಿದಂತೆ ದಿನಾಂಕ : 04–03–2011ರ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಪಿ. ನಾಗರಾಜ
ಪೀಠಾಧಿಕಾರಿ–2
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ–ಎ)

ಪಿ.ಆರ್. 2346

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆಯ ಬನಹಟ್ಟಿ ಕಂದಾಯ ತಾಲ್ಲೂಕಿನಲ್ಲಿನ 2 ಹೆಚ್ಚುವರಿ ನೋಟರಿ ಹುದ್ದೆ ಭರ್ತಿ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಲಾ 87 ಎಲ್‌ಸಿಎಲ್ 2010 ದಿನಾಂಕ : 02–11–2010.
2. ಸರ್ಕಾರದ ಪತ್ರ ಸಂಖ್ಯೆ : ಲಾ 87 ಎಲ್‌ಸಿಎಲ್ 2010, ದಿನಾಂಕ : 20–11–2010 ಹಾಗೂ 05–01–2011.
3. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ಪತ್ರ ಸಂಖ್ಯೆ : ಎಡಿಎಂಎನ್ 2451/2011 ದಿನಾಂಕ : 19–04–2011.
4. ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ : ಜಿಎಸ್‌ಆರ್ 114(ಇ) ದಿನಾಂಕ : 24–02–2009.
5. ಅಧಿಸೂಚನೆ ಸಂಖ್ಯೆ : ಲಾ 61 ಎಲ್‌ಸಿಎಲ್ 2009, ದಿನಾಂಕ : 24–07–2010.
6. ಸಂದರ್ಶನ ಸೂಚನಾ ಪತ್ರ ಸಂಖ್ಯೆ : ಲಾ 87 ಎಲ್‌ಸಿಎಲ್ 2010, ದಿನಾಂಕ : 22–06–2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ : 02–11–2010ರ ಸರ್ಕಾರದ ಆದೇಶದಲ್ಲಿ ಬನಹಟ್ಟಿ ಕಂದಾಯ ತಾಲ್ಲೂಕಿಗೆ 2 ಹೆಚ್ಚುವರಿಯಾಗಿ ನೋಟರಿ ಹುದ್ದೆಯನ್ನು ಸೃಜಿಸಲಾಗಿತ್ತು. ಅವುಗಳನ್ನು ಭರ್ತಿ ಮಾಡಲು ನೋಟರಿಗಳ ಅಧಿನಿಯಮ/ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳಡಿಯಲ್ಲಿ ಪರಿಶೀಲಿಸಿ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ : 20–11–2010 ಮತ್ತು 05–01–2011ರ ಪತ್ರಗಳಲ್ಲಿ ಕೋರಲಾಗಿತ್ತು.

ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ : 19–04–2011ರ ಪತ್ರದೊಂದಿಗೆ 19 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆಯನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆರವರು ಸಲ್ಲಿಸಿದ್ದರು. ಆ ಪ್ರಸ್ತಾವನೆಯನ್ನು ಮೇಲೆ (4)ರಲ್ಲಿ ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಮುಂದೆ ಹಾಜರಾಗುವಂತೆ ಮೇಲೆ (6)ರಲ್ಲಿ ಓದಲಾದ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ಆಯ್ಕೆ ಪಟ್ಟಿಯನ್ನು ಸಲ್ಲಿಸಿದೆ.

ಸಂದರ್ಶನ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 87 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ: 21–09–2011

ನೋಟರಿಗಳ ಅಧಿನಿಯಮ 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದಂತೆ ಈ ಕೆಳಕಂಡ ಇಬ್ಬರು ವಕೀಲರುಗಳನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಬನಹಟ್ಟಿ ಕಂದಾಯ ತಾಲ್ಲೂಕಿನ ನೋಟರಿಯನ್ನಾಗಿ ನೇಮಿಸಿದೆ.

1. ಶ್ರೀ ಸಿದ್ದಪ್ಪ ಬಿ. ಗೌಡಪ್ಪನವರ್, ವಕೀಲರು, S/o ಭೀಮಪ್ಪ ಗೌಡಪ್ಪನವರ್, ಫಾರಂಹೌಸ್, ಜಗದಾಲ್ ರೋಡ್, ಬನಹಟ್ಟಿ, ಜಮಖಂಡಿ ತಾಲ್ಲೂಕು.
2. ಶ್ರೀ ಕಲ್ಲಪ್ಪ ಎಸ್. ಅಕ್ಕಯ್ಯನವರ್, ವಕೀಲರು, S/o ಶೆಟ್ಟಪ್ಪ ಅಕ್ಕಯ್ಯನವರ್, ವಾರ್ಡ್ ನಂ. 15, ದಾಸರಹಟ್ಟಿ, ತೇರದಾಳ, ಜಮಖಂಡಿ ತಾಲ್ಲೂಕು.

ಸದರಿ ವಕೀಲರುಗಳು ಲೆಕ್ಕ ಶೀರ್ಷಿಕೆ "0070–ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಪಾಲನೆ–501–0–ಇತರೆ ಸ್ವೀಕೃತಿಗಳು–06 ಇತರೆ ಬಾಬ್ತುಗಳಿಗೆ (0070–01–501–0–06)" ನೋಟರಿ ನಿಯಮಗಳಲ್ಲಿ ನಿಗದಿಪಡಿಸಲಾದ ರೂ. 1000–00 (ಒಂದು ಸಾವಿರಗಳು ಮಾತ್ರ)

ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರ ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರುಗಳನ್ನು ನೋಟರಿ ಅಧಿನಿಯಮ, 1952ರ ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ಶಕುಂತಲ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿಆರ್.ನಂ. 2347

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ **"**ವೆಂಚರ್ ಕ್ಯಾಪಿಟಲ್ ಫಂಡ್**"** ಅಡಿ 2011–12ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಿಐ 234 ಎಸ್‌ಪಿಐ 2010, ದಿನಾಂಕ : 13–09–2010 ಮತ್ತು 15–03–2011.
2. ಅಪರ ನಿದೇಶಕರು (ಎಂಎಸ್‌ಎಂಇ) ರವರ ಪತ್ರ ಸಂಖ್ಯೆ : ಎಂಎಸ್‌ಎಂಇ : ಕೈವಿಅ : ವೆಕ್ಯಾಪ : 2011–12, ದಿನಾಂಕ : 28–05–2011 ಮತ್ತು 27–08–2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ 2011–12ನೇ ಸಾಲಿನ ಆಯವ್ಯಯದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗಾಗಿ **"**ಆಪತ್ತು ಬಂಡವಾಳ ನಿಧಿ**"** (Venture Capital Fund) ಗಾಗಿ ರೂ. 200.00 ಲಕ್ಷ ಒದಗಿಸಲಾಗಿದೆ. 2010–11 ಮತ್ತು 2011–12ನೇ ಸಾಲಿನಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗಾಗಿ ವೆಂಚರ್ ಕ್ಯಾಪಿಟಲ್ ಫಂಡ್ ಯೋಜನೆಯ ಅನುಷ್ಠಾನಗೊಳಿಸಲು ಒಟ್ಟು ರೂ. 200.00 ಲಕ್ಷ ಬಂಡವಾಳ ಹೂಡಿಕೆಮಾಡಬೇಕಾಗಿದೆ. ಇದರಲ್ಲಿ 2010–11ನೇ ಸಾಲಿನಲ್ಲಿ ಮೇಲೆ (1)ರಲ್ಲಿ ಓದಲಾದ ಆದೇಶಗಳಲ್ಲಿ ರೂ. 100.00 ಲಕ್ಷ ಬಿಡುಗಡೆ ಮಾಡಿದೆ.

ಪ್ರಸಕ್ತ 2011–12 ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ರೂ. 100.00 ಲಕ್ಷಗಳನ್ನು ಸರ್ಕಾರದ ವಂತಿಗೆಯನ್ನಾಗಿ ಕೆಎಸ್‌ಐಐಡಿಸಿ ರವರಿಗೆ ಬಿಡುಗಡೆ ಮಾಡಲು ಅಪರ ನಿರ್ದೇಶಕರು (ಎಂಎಸ್‌ಎಂಇ) ರವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಿಐ 234 ಎಸ್‌ಪಿಐ 2010, ಬೆಂಗಳೂರು, ದಿನಾಂಕ : 16–09–2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ಈ ಕೆಳಕಂಡಂತೆ ಅನುಮೋದನೆಯನ್ನು ನೀಡಿದೆ.

2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **"4852–02–800–0–04"** Venture Capital Fund for Small & Medium Enterprises - 211-investment (Plan)" ರಡಿ ರೂ. 100.00 ಲಕ್ಷ (ರೂ. ನೂರು ಲಕ್ಷಗಳು ಮಾತ್ರ) ಗಳನ್ನು ಸರ್ಕಾರದ ವಂತಿಕೆಯಾಗಿ ಕೆಎಸ್‌ಐಐಡಿಸಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಐಐಡಿಸಿ ರವರು ಸ್ವೀಕೃತಿ ಪತ್ರಕ್ಕೆ ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಮೇಲು ರುಜು ಪಡೆದು ಹಣವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ವಿ. ಶ್ರೀನಿವಾಸ ದೀಕ್ಷಿತ್
ಪೀಠಾಧಿಕಾರಿ (ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 2348

COMMERCE AND INDUSTRIES SECRETARIAT

Sub: Approval of change of location to the Project Proposal of M/s Cargill India Pvt. Ltd., to establish an unit to manufacture Starches, Glucose etc., with 8.5 MVA coal based captive power plant.

Read: Govt. Order No : CI 177 SPI 2011, dated : 18-08-2011.

PREAMBLE :

M/s Cargill India Pvt. Ltd., has proposed to establish an unit for manufacture of Starches, Glucose etc., with 8.5 MVA coal based captive power plant at Sy. No. 13, 196, 197 & 198 Mogadu village, Ranebennur taluk, Haveri district, with an investment of Rs. 630.00 crores, generating employment to about 510 persons.

The subject was placed in the 25th State High Level Clearance Committee meeting held on 14-07-2011 and was approved for Shimoga District (different location). Accordingly, G.O. read above was issued.

Now the Company has requested for change of location to Sy.No. 13, 196, 197 & 198 of Mogadu village, Ranebennur taluk, Haveri district mentioned in their original proposal.

The request has been examined in detail by the Government.

Hence the following order.

Government Order No. CI 177 SPI 2011, Bangalore, Dated : 17-09-2011.

Government is pleased to accord approval for change of location to the Project Proposal of M/s Cargill India Pvt. Ltd., from KIADB Industrial Area, Shikaripura, Shimoga District to Sy. No. 13, 196, 197 & 198 (100 acres) of Mogadu village, Ranebennur taluk, Haveri district.

The other terms and conditions remain the same as in the G.O., read above.

This approval is valid for a period of two years from the date of issue.

By Order and in the name of the Governor of Karnataka

A.V. SRINIVASA DIKSHIT

Desk Officer (Technical Cell)

P.R. NO. 2349 Commerce and Industries Department.

COMMERCE AND INDUSTRIES SECRETARIAT

Sub: Transfer of the project approval given to M/s Manipal Academy of Higher Education (MAHE) Trust in favour of M/s Manipal Education Foundation., reg.

Read: 1. Govt. Order No : CI 334 SPI 2010, dated : 15-07-2010.

2. Proceedings of the 25th State High Level Clearance Committee (SHLCC) Meeting held on 14-07-2011.

PREAMBLE :

The project proposal of M/s Manipal Academy of Higher Education (MAHE Trust), to establish a "World Class Multi Disciplinary Global Education Campus" with an investment of Rs. 495 crores in 60 acres of land - KIADB to acquire and allot as SUC in suitable location at Doddaballapur Taluk Bangalore Rural District, was approved in 23rd SHLCC meeting held on 19-06-2010. The subject land is now proposed for acquisition for formation of Doddaballapur Industrial Area, 3rd Phase.

The said MAHE Trust is running a deemed University at Manipal and they have decided to assign the responsibility of establishing "World Class Multi Disciplinary Global Education Campus" to Manipal Education Foundation (MEF).

MEF is a Trust registered under Indian Trust Act and affiliated to Manipal group promoted by MAHE. The MAHE Trust requested to transfer the approval from MAHE Trust to M/s Manipal Education Foundation.

In the 25th State High Level Clearance Committee (SHLCC) Meeting held on 14-07-2011, the proposal of the Company was discussed and approved.

Government has examined the recommendations made by the State High Level Clearance Committee in the 25th Meeting held on 14-07-2011, in all aspects.

Hence the following order.

Government Order No. CI 211 SPI 2011, Bangalore, Dated : 19-09-2011.

In the circumstances explained in the preamble, Government is pleased to accord approval for the transfer of project approval given to M/s MAHE Trust for establish "World Class Multi Disciplinary Global Education Campus" in favour of M/s Manipal Education Foundation in 60 acres of land in 3rd Phase, KIADB Industrial Area, Doddaballapur Taluk, Bangalore Rural District".

Other terms and conditions remain the same as in the G.O., read at (1) above.

By Order and in the name of the Governor of Karnataka

A.V. SRINIVASA DIKSHIT

Desk Officer (Technical Cell)

P.R. NO. 2350 Commerce and Industries Department.

COMMERCE & INDUSTRIES SECRETARIAT

Sub : M/s Surana Industries Ltd., Bangalore – transfer of approval of Power plant project to M/s Surana power Ltd., reg.

Read : 1. Govt. Order No. CI 521 SPI 2005, dated 16-01-2006

2. Govt. Order No. CI 283 SPI 2009, dated 16-11-2009

3. Proceedings of the 25th State High Level Clearance Committee (SHLCC) Meeting held on 14-07-2011.

Preamble:

The project proposal of M/s Surana Industries Ltd., to establish "Spange Iron Steel Plant with 40 MW Captive Power plant" with an investment of Rs. 562.09 crores in 300 acres of land at Raichur Growth Centre was approved in 4th SHLCC meeting held on 6-6-2005 & G.O. read at (1) above was issued accordingly.

The proposal of M/s Surana Power Ltd., a subsidiary of M/s Surana Industries Ltd., to establish '435 MW Thermal Power Plant" with an investment of Rs. 2398 crores in 284 acres of land in Raichur Growth Centre in Yagnur and Wadlur villages of Raichur district was approved vide G.O. No.: CI 283 SPI 2009, dated: 16-11-2009.

The company in its letter dated 25-3-2011 has informed that, M/s Surana Power Ltd., a wholly owned subsidiary of M/s Surana Industries Ltd., is incorporated to implement power projects. To have business synergy, the 35 MW power plant project (earlier 40 MW, reduced to 35 MW only) approved in the name of M/s Surana Industries Ltd., is transferred to M/s Surana Power Ltd., vide an asset transfer agreement between the companies.

Company has requested to transfer the approval of 35 MW power plant obtained in the name of M/s Surana Industries Ltd., to M/s Surana Power Ltd.,

In the 25th State High Level Clearance Committee (SHLCC) meeting held on 14-07-2011, the proposal of the Company was discussed and approved.

Government has examined the recommendations made by the State high level clearance committee in the 25th meeting held on 14-07-2011, in all aspects.

Hence the following Order

Government Order No. CI 283 SPI 2009, Bangalore, dated 19-09-2011

In the circumstances explained in the preamble, Government is pleased accord approval for the transfer of project approval of 35 MW power plant (originally 40 MW power plant) given to M/s Surana Industries Ltd" vide G.O. No. CI 521 SPI 2005, dated 16-01-2006 in favour of "M/s Surana Power Ltd".

Other terms and conditions, remain the same as in the G.O. read at (1) above.

By Order and in the name of the Governor of Karnataka

A.V. Srinivasa Dikshit

Desk Officer (Technical Cell)

P.R. 2351 Commerce & Industries Department

COMMERCE & INDUSTRIES SECRETARIAT

Sub : Project Proposal of M/s Bhoruka Power Corporation Ltd., to establish "300 MW Coal Based Thermal Power Plant" at (Kabbur) Mirapurahatti, Mavinahonda and Girinayakvadi villages of Chikkodi/Raibagh taluk, Belgaum district reg.,

Read :
1. Proceedings of the 15th State High Level Clearance Committee (SHLCC) meeting held on 21-08-2008.
2. Proceedings of the 24th State High Level Clearance Committee (SHLCC) meeting held on 24-01-2011.
3. Govt. Order No.: CI 295 SPI 2010, dated 04-03-2011
4. Proceedings of the 25th State High Level Clearance Committee (SHLCC) meeting held on 14-07-2011.

Preamble:

M/s Bhoruka Power Corporation Ltd., a public limited company, had proposed to establish a "300 MW Coal Based Thermal Power Plant" at Katakabavi and Bendawad village, Raibag taluk, Belgaum district with an investment of Rs. 1618.13 crores. Upon development, this project is expected to provide employment to 165 persons & this project was approved in 15th SHLCC dated 21-08-2008 vide proceedings read at (1) above.

But, the company further found that the location of the above villages were not suitable & it was proposed to relocate the place nearby Chikkodi railway station to facilitate Railway siding and transportation & G.O. sanctioning infrastructure facilities is not issued.

Then, the company proposed to implement the project in the name of M/s Bhoruka Energy Ltd., a Bhoruka group company with an investment of Rs. 1730.00 crores and the subject was discussed and approved in 24th SHLCC dated 24-01-2011.

But G.O. was issued in file No. CI 295 SPI 2010, dated 04-03-2011, read at (3) above. This file pertains to a different activity of the same company and but in different name.

The company pointed out this error & applied to 25th SHLCC dated 14-07-2011, requested for modified G.O. and also requested for change of location at (Kabbur) Mirapurahatti, Mavinahonda and Girinayakvadi villages.

This was discussed in the 25th SHLCC dated 14-07-2011 and approved the same

The recommendation of the 25th SHLCC examined in detail & since the earlier G.O. sanctioning the project in principle was not issued. Govt. has decided to issue incorporating the recommendations approved in the 24th and 25th SHLCC in the meetings dated 24-01-2011 and 14-07-2011, respectively.

Hence the following Order.

Government Order No. CI 316 SPI 2008, Bangalore, dated 19-09-2011

In the circumstances explained in the preamble, Government is pleased to accord approval in principle to M/s Bhoruka Energy Ltd., to establish "300 MW Coal Based Thermal Power Plant" at (Kabbur) Mirapurahatti, Mavinahonda and Girinayakwadi villages of Chikkodi/Raibag taluks, Belgaum district with an investment of Rs. 1730 crores with the following infrastructural facilities:

INFRASTRUCTURE FACILITIES:

1. **Land:** 250 acres of land to be purchased U/s. 109 of KLR Act at (Kabbur) Mirapurahatti, Mavinahonda and Girinayakvadi villages, Chikkodi/Raibagh taluk, Belgaum district & conversion of the same for industrial use.

2. **Water:** Water Resources department to permit the company to draw 0.40 TMC LPD of water from IPP Ghataprabha project. Howerver, Energy department has opined in its note No. EN 33 PPC 2008. Dated 18-11-2008 that PCKL has already requested for 2.06 TMC of water from Hidkal Dam to the proposed 1320 MW coal based power plant at Ghataprabha. Duly considering this allocation for the proposal has to be looked into. The company shall adopt rain water harvesting and water recycling.
3. **Power:** Energy department has opined in its note No.: EN 33 PPC 2008, dated 18-11-2008 that, 10 MVA to be serviced by HESCOM mentioned in the proposal is not correct. The power has to be availed by the intending party with the jurisdictional distributional licensee as per the regulations of KERC on supply and distribution code.
4. **Incentives & Concessions** As per Energy department applicable notification

GENERAL TERMS AND CONDITIONS:

1. **Environment:** The promoters to obtain CFE and CFO from KSPCB
2. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development:** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others:**
   a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue

By Order and in the name of the Governor of Karnataka

A.V. Srinivasa Dikshit

Desk Officer (Technical Cell)

P.R. 2352 Commerce & Industries Department

ಕಂದಾಯ ಸಚಿವಾಲಯ

ವಿಷಯ : ಶ್ರೀ ಶಿವಣ್ಣ, ಹಿಂದಿನ ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳ ವಿರುದ್ಧದ ಇಲಾಖಾ ವಿಚಾರಣೆ–ದಂಡನೆ ವಿಧಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಕಂಇ 64 ಬಿಡಿಪಿ 2007, ದಿನಾಂಕ: 16–01–2008
2) ಉಪಲೋಕಾಯುಕ್ತರು, ಕರ್ನಾಟಕ, ಬೆಂಗಳೂರು ರವರ ಪತ್ರ ಸಂಖ್ಯೆ: LOK/ARE-3/Enq-37/2007-08, ದಿನಾಂಕ 20–11–2009ರ ಪತ್ರ ಹಾಗೂ ವಿಚಾರಣಾ ವರದಿ ದಿನಾಂಕ 30–10–2009.
3) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಕಂಇ 64 ಬಿಡಿಪಿ 2007, ದಿನಾಂಕ 15–12–2009.
4) ಶ್ರೀ ಶಿವಣ್ಣ, ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ 4–1–2010.
5) ಶ್ರೀ ಶರತ್‌ಚಂದ್ರಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು. ದಕ್ಷಿಣ ತಾಲ್ಲೂಕು ಇವರು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 13–01–2010.
6) ಸರ್ಕಾರದ ಪತ್ರ ಸಂಖ್ಯೆ: ಕಂಇ 64 ಬಿಡಿಪಿ 2007, ದಿನಾಂಕ 15–02–2010
7) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರುರವರ ಆದೇಶ ಸಂಖ್ಯೆ: ಸಿಸಿಎ(2)ಸಿಆರ್/72/2009–10, ದಿನಾಂಕ 17–3–2010.
8) ಕೆ.ಎ.ಟಿ. ಅರ್ಜಿ ಸಂಖ್ಯೆ: 2197/2010, ದಿನಾಂಕ 23–06–2010ರ ಆದೇಶ

ಪ್ರಸ್ತಾವನೆ :

ಚುಂಚನಕುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಸರ್ವೆ ನಂ. 4/13ರಲ್ಲಿ 1 ಎಕರೆ 3 ಗುಂಟೆ ಜಮೀನು ಶ್ರೀಮತಿ ಯಶೋಧಮ್ಮ ಕೋಂ ಶ್ರೀ ಸಿ. ಎಸ್. ಶಿವಕುಮಾರಯ್ಯ ಮತ್ತು ಬಿ. ಪಂಚಾಕ್ಷರಯ್ಯ ಬಿನ್ ಬಸವಯ್ಯ ಇವರಿಗೆ ಸಂಬಂಧಿಸಿದ್ದು, ಈ ಜಮೀನಿನಲ್ಲಿ ಶ್ರೀ ಪೌಲ್ ಬಿ. ಜಾನ್ ಎಂಬುವವರಿಗೆ 38 ಗುಂಟೆ ಮಾರಾಟವಾಗಿದ್ದು, ಅದೇ ಸರ್ವೆ ನಂಬರ್‌ನಲ್ಲಿ 5 ಗುಂಟೆ ಜಮೀನನ್ನು

ಶ್ರೀ ಸಿ. ಎಸ್. ಉಮೇಶ್ ಎಂಬುವವರು ಖರೀದಿಸಿದ್ದು ಸದರಿ ಸರ್ವೆ ನಂಬರ್‌ನ ಖಾತಾಗಳನ್ನು ಮಾಡುವಲ್ಲಿ ಶ್ರೀ ಉಮೇಶ್ ರವರಿಂದ ರೂ. 10,000/–ಗಳನ್ನು ಶ್ರೀ ಶಿವಣ್ಣ, ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರ ಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಕೇಳಿದ್ದಾರೆಂದು ಶ್ರೀ ಉಮೇಶ್‌ರವರು ದೂರು ನೀಡಿದ್ದರ ಮೇರೆಗೆ ಲೋಕಾಯುಕ್ತ ಕಛೇರಿಯವರು ತನಿಖೆ ಮಾಡಿದಾಗ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ಕಂಡು ಬಂದಿದ್ದರಿಂದ ಸದರಿ ನೌಕರರುಗಳಿಗೆ ಕಠಿಣ ದಂಡನೆ ವಿಧಿಸುವ ಸಲುವಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ ದಿನಾಂಕ 16–1–2008ರ ಆದೇಶದಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14ಎ ರನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಗೌರವಾನ್ವಿತ ಉಪ ಲೋಕಾಯುಕ್ತರು, ಕರ್ನಾಟಕ ಬೆಂಗಳೂರು ಇವರಿಗೆ ವಹಿಸಿಕೊಟ್ಟು ಸರ್ಕಾರವು ಆದೇಶಿಸಿರುತ್ತದೆ.

ಸರ್ಕಾರದ ಆದೇಶದಂತೆ, ಉಪಲೋಕಾಯುಕ್ತರು, ಕರ್ನಾಟಕ, ಬೆಂಗಳೂರು ರವರು ವಿಚಾರಣೆ ನಡೆಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ30–10–2009 ರಂದು ವಿಚಾರಣಾ ವರದಿಯನ್ನು ಸಲ್ಲಿಸುತ್ತಾ ಶ್ರೀ ಶಿವಣ್ಣ, ಹಿಂದಿನ ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳ ಇಲಾಖಾ ವಿಚಾರಣೆಗೆ ಕುರಿತಂತೆ ಆರೋಪವು ಸಾಬೀತಾಗಿರುವುದರಿಂದ ಇವರಿಬ್ಬರಿಗೂ ಸಹ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಉಪಲೋಕಾಯುಕ್ತರು, ಕರ್ನಾಟಕ, ಬೆಂಗಳೂರು ರವರು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿಕೊಂಡು, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳ 1957ರ ನಿಯಮ 8(iii)ರ ಪ್ರಕಾರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ದಂಡನೆಯನ್ನು ಏಕೆ ವಿಧಿಸಬಾರದು ಎಂಬ ಬಗ್ಗೆ ನಿಮ್ಮ ಹೇಳಿಕೆ ಏನಾದರೂ ಇದ್ದಲ್ಲಿ, ನೋಟೀಸು ತಲುಪಿದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಇಲ್ಲದಿದ್ದರೆ ಹೇಳುವುದು ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಆಪಾದಿತ ನೌಕರರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಂತೆ ದಿನಾಂಕ 17–12–2009 ರಂದು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಸರ್ಕಾರದ ದಿನಾಂಕ 17–12–2009ರ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (4) ಮತ್ತು (5) ರಂತೆ ಶ್ರೀ ಶಿವಣ್ಣ, ಹಿಂದಿನ ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ರವರುಗಳು ಸರ್ಕಾರಕ್ಕೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಗಳಲ್ಲಿ ವಿಚಾರಣಾ ವರದಿಯಲ್ಲಿನ ನಿರ್ಣಯವನ್ನು ತಿರಸ್ಕರಿಸುತ್ತಾ ತಮ್ಮ ವಿರುದ್ಧದ ಆರೋಪವನ್ನು ಅಲ್ಲಗಳೆದು, ತಮ್ಮನ್ನು ಆರೋಪದಿಂದ ದೋಷ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಆಪಾದಿತ ನೌಕರರು ತಮ್ಮ ವಿರುದ್ಧದ ಆಪಾದನೆಗಳನ್ನು ನಿರಾಕರಿಸಿದ್ದರಿಂದ, ಈ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಗಿದ್ದರಿಂದ, ಆಪಾದಿತರಿಗೆ ಲೋಕಾಯುಕ್ತ ಶಿಫಾರಸ್ಸಿನಂತೆ ನಿಗದಿತ ಅವಧಿಯಲ್ಲಿ ಸೂಕ್ತ ಕ್ರಮ ಕೈಗೊಂಡು, ಉಪ ಲೋಕಾಯುಕ್ತರಿಗೆ ಹಾಗೂ ಸರ್ಕಾರಕ್ಕೆ ತಿಳಿಸುವಂತೆ ಕೋರುತ್ತಾ, ಪ್ರಕರಣಕ್ಕೆ ಸಂಬಂಧಿಸಿದ ಮೂಲ ವಿಚಾರಣಾ ವರದಿ ಹಾಗೂ ಮೂಲ ದಾಖಲೆಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ: (6)ರ ಸರ್ಕಾರದ ಪತ್ರದಲ್ಲಿ ಕಳುಹಿಸಲಾಗಿತ್ತು.

ಅದರಂತೆ ಜಿಲ್ಲಾಧಿಕಾರಿಗಳು ಮೇಲೆ ಓದಲಾದ (7)ರ ದಿನಾಂಕ 17–3–2010ರ ಆದೇಶದಲ್ಲಿ ಶ್ರೀ ಶಿವಣ್ಣ, ಹಿಂದಿನ ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರ ಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆರೋಪವು ಸಾಬೀತಾಗಿದ್ದರಿಂದ ಇವರುಗಳಿಗೆ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ (with cumulative effect) ಪರಿಣಾಮವಾಗುವಂತೆ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ದಿನಾಂಕ 17–3–2010ರ ಆದೇಶದ ವಿರುದ್ಧ ಶ್ರೀ ಎಸ್. ಶಿವಣ್ಣ ರವರು ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ: 2197/2010ನ್ನು ದಾಖಲಿಸಿದ್ದು, ಕೆ.ಎ.ಟಿ.ಯು ಮೇಲೆ ಓದಲಾದ ಕ್ರಮ ಸಂಖ್ಯೆ: (8)ರಂತೆ ದಿನಾಂಕ 23–6–2010 ರಂದು ತೀರ್ಪು ನೀಡಿ, ಸಿಸಿಎ ನಿಯಮ 14ಎ ರಡಿಯಲ್ಲಿ ಸರ್ಕಾರವೇ ಶಿಸ್ತು ಪ್ರಾಧಿಕಾರವಾಗಿ ದಂಡನೆ ವಿಧಿಸಬೇಕಾಗುತ್ತದೆಂದು ತಿಳಿಸಿ, ಜಿಲ್ಲಾಧಿಕಾರಿಗಳ ಆದೇಶವನ್ನು ರದ್ದುಗೊಳಿಸಿ ಸರ್ಕಾರವು ಸದರಿ ನಿಯಮದನ್ವಯ ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ.

ಆರೋಪಿತ ನೌಕರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿ, ತಹಶೀಲ್ದಾರ್ ಕಛೇರಿಯಿಂದ ಜೆ–ಸ್ಲಿಪ್ ನಲ್ಲಿ 1 ಎಕರೆ 3 ಗುಂಟೆ ಎಂದು ಬಂದಿದ್ದರಿಂದ, ಅದರಂತೆ ಶ್ರೀ ಪಾಲ್, ಪಿ. ಜಾನ್ ಎಂಬುವವರಿಗೆ ಖಾತೆ ವರ್ಗಾವಣೆ ಮಾಡಿಕೊಡಲಾಗಿದೆ ಎಂದು ಹಾಗೂ ಅರ್ಜಿದಾರರು ಮೇಲ್ಮನವಿ ಸಲ್ಲಿಸಿ, ಅವರ ಕುಂದುಕೊರತೆಗಳನ್ನು ಸರಿಪಡಿಸಲು ಅವಕಾಶ ಇದ್ದಾಗ ಲೋಕಾಯುಕ್ತರು, ಲೋಕಾಯುಕ್ತ ಅಧಿನಿಯಮ 1984ರ ಕಲಂ 8/1 (ಬಿ) ಪ್ರಕಾರ ವಿಚಾರಣೆ ನಡೆಸುವುದರಿಂದ ವಿನಾಯಿತಿ ನೀಡಲಾಗಿದೆ ಎಂದು ಹಾಗೂ ತಮ್ಮಿಂದ ಅರ್ಜಿದಾರರಿಗೆ ಯಾವುದೇ ನಷ್ಟವಾಗಿರುವುದಿಲ್ಲವೆಂದು ಮೇಲ್ಮನವಿ ಪ್ರಾಧಿಕಾರವಾದ ಸಹಾಯಕ ಆಯುಕ್ತರು ತಪ್ಪನ್ನು ಮೇಲ್ಮನವಿ ಮೂಲಕ ಸರಿಪಡಿಸಿದ್ದಾರೆಂದು ತಿಳಿಸಿರುತ್ತಾರೆ.

ಉಪ ಲೋಕಾಯುಕ್ತರ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ಶ್ರೀ ಪಾಲ್, ಪಿ. ಜಾನ್ ಎಂಬುವವರು ಅವರು ಖರೀದಿಸಿರುವ 38 ಗುಂಟೆ ಜಮೀನನ್ನು ಮಾತ್ರ ಖಾತೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ಅವರಿಗೆ 1 ಎಕರೆ 3 ಗುಂಟೆ ಜಮೀನಿಗೆ ಖಾತೆ ಮಾಡಿಕೊಟ್ಟಿರುವುದು ಆಪಾದಿತರ ನಿರ್ಲಕ್ಷ್ಯತನ ಹಾಗೂ ಅರ್ಜಿದಾರರಿಗೆ ತೊಂದರೆ ಕೊಟ್ಟಿರುವುದು ವಿಚಾರಣೆಯಲ್ಲಿ ದಾಖಲೆ ಹಾಗೂ ಸಾಕ್ಷಿಗಳ ಸಮೇತ ಸಾಬೀತಾಗಿರುವುದರಿಂದ ಉಪ ಲೋಕಾಯುಕ್ತರ ಶಿಫಾರಸಿನಂತೆ ಆಪಾದಿತ ನೌಕರರಾದ ಶ್ರೀ ಶಿವಣ್ಣ, ಹಿಂದಿನ ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರ ಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ (with cumulative effect) ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸಲು ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 64 ಬಿಡಿಪಿ 2007 (ಭಾ), ಬೆಂಗಳೂರು, ದಿನಾಂಕ 16–09–2011.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಆಪಾದಿತ ನೌಕರರಾದ ಶ್ರೀ ಶಿವಣ್ಣ, ಹಿಂದಿನ ರಾಜಸ್ವ ನಿರೀಕ್ಷಕರು, ರಾಮೋಹಳ್ಳಿ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಶ್ರೀ ಶರತ್‌ಚಂದ್ರ ಬಾಬು, ಗ್ರಾಮಲೆಕ್ಕಿಗರು, ಚುಂಚನಕುಪ್ಪೆ ವೃತ್ತ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ (with cumulative effect) ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಎಸ್. ಮದ್ಭಾವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 2353 ಕಂದಾಯ ಇಲಾಖೆ (ವಿ.ನಿ. ಮತ್ತು ಸೇ–2)

ENERGY SECRETARIAT

Sub : Transfer of 15 MW wind power capacity in favour of M/s KSK Wind Power Aminabhavi Chikkodi Private Limited-reg.

Read : 1. Government Order No: EN 400 NCE 2004 dated: 05.1.2005.

2. Letter No: KRED/08/KSKACPL (15)-Fiza/2011/2289 dated: 29.7.2011/01.08.2011 received from the Managing Director, Karnataka Renewable Energy Development Limited, Bangalore.

Preamble :

In the Government Order read at (1) above, sanction has been accorded for implementation of 25.00 MW capacity wind power project at Belgaum and Chitradurga Districts in favour of M/s Fiza Developers and Inter-Trade Private Limited.

In the the letter read at (2) above, the Managing Director, Karnataka Renewable Energy Development Limited, Bangalore has recommended to the Government for transfer of 15 MW wind power capacity in favour of M/s. KSK Wind Power Aminabhavi Chikkodi Private Limited at Chikkodi Region, Belgaum District from out of 25 MW capacity allotted to M/s Fiza Developers & Inter-Trade Private Limited.

The proposal has been examined in detail and hence the following Order.

Government Order No. : EN 328 NCE 2011, Bangalore, Dated : 15.09.2011

Government accords approval for transfer of 15.00 MW wind power capacity in favour of M/s. KSK Wind Power Aminabhavi Chikkodi Private Limited Chikkodi Region, Belgaum District from out of 25.00 MW wind power capacity allotted to M/s. Fiza Developers & Inter-Trade Private Limited as detailed below and subject to the following conditions.

Schedule:

Sl. No.	Capacity in MW	Location and District	Description of area
1.	Area A-5 MW	Chikkodi region , Belgaum	Area-A: Is located on the North East of Karoshi village at about 3 km distance and has 772m peak. The general topography of the area is described has open scrub and is bounded by the geographical co-ordinates details as below. Latitude: 16º22'53'-16º 23"26"N Longitude: 74º 35'25"-74º37'6"E Ridge peaks: 772 m Amsl.
2.	Area B-5 MW	Chikkodi region ,	Area-B: Is located on the South East of Mugali village and has 789 and 780m peaks. The general topography of the area is described has open scrub and is bounded by the geographical co-ordinates details as below. Latitude: 16º18'09"-16º20'16"N Longitude: 74º 32'32"-74º35'25"E Ridge peaks: 780, 789 and 781m Amsl.
3.	Area C-5 MW	Chikkodi region ,	Area-C: Is located on the South East of Yadagudda village at about 1½ km distance and has 752, 769 & 766 m peaks. The general topography of the area is described has open scrub and is bounded by the geographical co-ordinates details as below. Latitude: 16º17'58"-16º19'30"N Longitude: 74º 36'53"-74º 40'E Ridge peaks:776,769, 752&704m Amsl.

Land Details:

Name of the village	District	Land Survey Nos.	MW	No. of WTG's	Extent of land in acres
Chikkodi-A, Karoshi	Belgaum	143, 165, 173, 177, 185, 201, 241	5	10	28
Chikkodi-B Borgal		79 & 81	1	02	7.18
Aminabhavi		88 & 238	1	02	5.20
Mugali		7,165,120	1.5	03	9.22
Handigud		164, 171, 241	1.5	03	10.38
Chikkodi-C Yadgud		146 & 152	1	02	9.10
Solapur		719, 844	1	02	8.20
Shirahatti		319, 320, 359, 366, 67	2.5	05	18.10
Hanchinal		374	0.50	01	5.40
			15.00	**30 Nos.**	**103.18**

1. M/s. KSK Wind Power Aminabhavi Chikkodi Private Limited shall execute an agreement with Government within 45 (forty five) days from the date of issue of this Order.
2. M/s KSK Wind Power Aminabhavi Chikkodi Private Limited is permitted to enter into wheeling and banking with concerned ESCOMs/KPTCL.
3. The Company should commission the project during the financial year 2013-14 and give an undertaking to that effect.
4. The Company should obtain the consent of the private land owners.
5. The Government reserves the right to Cancel/modify this Order.

The other terms and conditions of the Government Order read at (1) above shall IPSO FACTO be applicable.

By Order and in the name of the Governor of Karnataka
Suresh B. Krishnappanavar
Under Secretary to Government
Energy Department

P.R. 2354

ENERGY SECRETARIAT

Sub : Transfer of 2.00 MW wind power capacity in favour of M/s KSK Wind Energy Mothalli Haveri Private Limited-reg.

Read :
1. Government Order No: EN 456 NCE 2006 dated: 22.5.2007.
2. Government Order No: EN 444 NCE 2010 dated: 20.12.2010.
3. Corrigendum No: EN 444 NCE 2010 dated: 02.7.2011.
4. Letter No: KRED/08/KSK WESHPL-(2.00)-Four EF-/2011/2611 dated: 27/03.9.2011 received from the Managing Director, Karnataka Renewable Energy Development Limited, Bangalore.

Preamble :

In the Government Order read at (1) above, sanction has been accorded for implementation of 62.5 MW capacity wind power project at Uttara Kannada, Dakshina Kannada and Shimoga Districts in favour of M/s Four EF Wind Power Private Limited.

In the Government Order read at (2) above, sanction has been accorded for change of location of wind power project capacity of 58.5 MW which was allotted in Uttara Kannada, Dakshina Kannada and Shimoga Districts (part capacity of 62.5 MW) to Bijapur, Bellary, Belgaum, Dharwad & Raichur Districts and extension of time limit to implement the project in favour of M/s. Four EF Wind Power Private Limited upto 31.03.2012.

In the Corrigendum read at (3) above, wherever 58.5 MW capacity appeared in the Government Order reffered at (2) above has been corrected as 72.50 MW.

In the letter read at (4) above, the Managing Director, Karnataka Renewable Energy Development Limited, Bangalore has recommended to the Government for transfer of 2.00 MW wind power capacity from out of 72.5 MW in favour of M/s KSK Wind

Energy Mothalli Haveri Private Limited at Kandgal village in Bijapur District from M/s Four EF Wind Power Private Limited. Further it is intimated that the developer should commission the project by 2011-12 and the land is private land and the power generated is for Third Party through Wheeling & Banking.

The proposal has been examined in detail and hence the following Order.

Government Order No. : EN 360 NCE 2011, Bangalore, Dated : 15.09.2011

Government accords approval for transfer of 2.00 MW wind power capacity from out of 72.5 MW in favour of M/s. KSK Wind Energy Mothalli Haveri Private Limited at Kandgal village in Bijapur District from M/s Four EF Wind Power Private Limited as detailed below and subject to the following conditions.

Schedule:

Capacity in MW	Location and District	Description of area
2.00	Kandgal, Bijapur District	The proposed area is categorized as Area-B: It is also completely ground level plain, no significant peaks and appears to have agricultural activities. The average elevation varies from 611, 620. The area is held in the following Geographical co-ordinates: Latitude: 15º52'59"-15º 58'09".N Longitude: 75º 15'00"-76º20'26"E Ridge peaks: 611, 620 Amsl. Toposheet No. 57 A/5

Land details of the project:

Name of the village	Taluk/District	MW	Land Survey Nos.	No. of WTG's	Extent of land in acres
Megur	Bijapur	0.250	235	01	4.12
Kandgal		0.750	74, 106 & 285	03	12.17
Kamalapur		0.500	489, 647	02	8.33
Martageri		0.250	289	01	5.25
Belihal		0.250	958	01	3.28
Total		**2.00**		**08**	**34.35**

1. M/s. KSK Wind Energy Mothalli Haveri Private Limited shall execute an agreement with Government within 45 (forty five) days from the date of issue of this Order.
2. M/s KSK Wind Energy Mothalli Haveri Private Limited is permitted to enter into wheeling and banking with concerned ESCOMs/KPTCL.
3. The Company should commission the project by 31.3.2012 and give undertaking to that effect.
4. The Company should obtain the consent of the private land owner.
5. The Government reserves the right to Cancel/modify this Order.

The other terms and conditions of the Government Order read at (1) above shall IPSO FACTO be applicable.

By Order and in the name of the Governor of Karnataka
Suresh B. Krishnappanavar
Under Secretary to Government
Energy Department

P.R. 2355

ಇಂಧನ ಸಚಿವಾಲಯ

ವಿಷಯ : ಮೆ॥ ಎನ್.ಎಸ್.ಎಲ್. ಪವರ್ ಲಿಮಿಟೆಡ್ ಇವರ 120.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಪಡಿಸಿರುವುದನ್ನು ಹಿಂದಕ್ಕೆ ಪಡೆದು ಪೂರ್ವಸ್ಥಿತಿಗೆ ತರುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಇಂಇ 58 ಎನ್‌ಸಿಇ 2004 ದಿನಾಂಕ: 20.02.2004.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 429 ಎನ್‌ಸಿಇ 2007 ದಿನಾಂಕ: 05.12.2007.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 429 ಎನ್‌ಸಿಇ 2007, ದಿನಾಂಕ: 11–12–2007.
4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 214 ಎನ್‌ಸಿಇ 2010, ದಿನಾಂಕ: 14.12.2010.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/NSL-120MW/2011/1820, ದಿನಾಂಕ: 18/22.06.2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ. (1) ರ ಆದೇಶದಲ್ಲಿ ಮೆ॥ ನುಜಿವಿಡು ಸೀಡ್ಸ್ ಲಿಮಿಟೆಡ್ ಇವರಿಗೆ ದಾವಣಗೆರೆ, ಕೋಲಾರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಒಟ್ಟು 49.00 ಮೆಗಾ ವ್ಯಾಟ್ (15+12+22=49) ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ನುಜಿವಿಡು ಸೀಡ್ಸ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯಲ್ಲಿ ಹಂಚಿಕೆ ಮಾಡಲಾದ 227 ಮೆಗಾ ವ್ಯಾಟ್ (49 ಮೆಗಾ ವ್ಯಾಟ್‌ನ ಅಂಶಿಕ ಸಾಮರ್ಥ್ಯ) ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ॥ ಎನ್.ಎಸ್.ಎಲ್. ಪವರ್ ಲಿಮಿಟೆಡ್ ಇವರಿಗೆ ವರ್ಗಾವಣೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ॥ ಎನ್.ಎಸ್.ಎಲ್. ಪವರ್ ಲಿಮಿಟೆಡ್ ಇವರ 22.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 120 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೆ॥ ಎನ್.ಎಸ್.ಎಲ್. ಪವರ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಗ್ರಾಮದಲ್ಲಿ ಹಂಚಿಕೆ ಮಾಡಲಾದ 120.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿತ್ತು.

ತದನಂತರ ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎಂದು ದಾಖಲಾತಿಗಳೊಂದಿಗೆ ತಿಳಿಸಿ ಯೋಜನೆಯನ್ನು ಪೂರ್ವ ಸ್ಥಿತಿಗೆ ತರಲು ಕೋರಿದ್ದರ ಹಿನ್ನೆಲೆಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನು ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ವರದಿಯನ್ನು ನೀಡುವಂತೆ ಕೋರಲಾಗಿತ್ತು.

ಸದರಿ ಕಂಪನಿಯು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದು, ಕೆಲವು ನಿರ್ದಿಷ್ಟ ಅನುಮೋದನೆಗಳನ್ನು ಪಡೆದುಕೊಂಡಿದೆಯೆಂದು ಯೋಜನೆಗೆ ಬೇಕಾದ ಜಮೀನು ಅರಣ್ಯ ಇಲಾಖೆಗೆ ಸೇರಿರುವುದರಿಂದ ಅರಣ್ಯ ಇಲಾಖೆಯಿಂದ ಅವಶ್ಯಕ ಅನುಮೋದನೆಗಳನ್ನು ಪಡೆಯುವಲ್ಲಿ ವಿಳಂಬವಾಗಿರುವುದರಿಂದ, ಯೋಜನೆಯನ್ನು ಪೂರ್ವಸ್ಥಿತಿಗೆ ತರಲು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 03 ಎನ್‌ಸಿಇ 2011, ಬೆಂಗಳೂರು, ದಿನಾಂಕ : 16–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಇಎನ್ 214 ಎನ್‌ಸಿಇ 2010 ದಿನಾಂಕ: 14.12.2010ರಲ್ಲಿ ಮೆ॥ ಎನ್.ಎಸ್.ಎಲ್. ಪವರ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಗ್ರಾಮದಲ್ಲಿ ಹಂಚಿಕೆ ಮಾಡಲಾದ 120.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದು ಪಡಿಸಿರುವುದನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಕಾಲಾವಕಾಶ ವಿಸ್ತರಣೆಗೆ ನಿರ್ಧರಿಸುವ ದಂಡದ ಮೊತ್ತ ಪಾವತಿಸುವ ಷರತ್ತಿಗೆ ಒಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು ಯೋಜನೆಯನ್ನು ಪೂರ್ವಸ್ಥಿತಿಗೆ ತರಲಾಗಿದೆ ಹಾಗೂ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ಡಿಸೆಂಬರ್ 2012 ರವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಪಿ.ಆರ್. 2356 ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಜಲಸಂಪನ್ಮೂಲ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ, ಶಿಗ್ಗಾಂವ ತಾಲ್ಲೂಕು ತಡಸ ಗ್ರಾಮದ ಬೈಲಗಂಗೇರಿ ಕೆರೆಯ ಪೂರಕ ಕಾಲುವೆಯಿಂದ ಜಗಳ ಕೆರೆಯ ಮುಖಾಂತರ ತಬಕದಹೊನ್ನಿಹಳ್ಳಿ ಕೆರೆಯವರೆಗೆ ಪೂರಕ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಕಲಘಟಗಿ ತಾಲ್ಲೂಕಿನ ತಡಸ ಗ್ರಾಮದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ, ದಿನಾಂಕ: 13.07.2011ರ ಪತ್ರ ಸಂಖ್ಯೆ:ಮುಇಂ/ಸನೀ(ಉ)/ಭೂಸ್ವಾ.ಪ್ರ/2011–12/3767.

ಪ್ರಸ್ತಾವನೆ:

ಧಾರವಾಡ ಜಿಲ್ಲೆ, ಶಿಗ್ಗಾಂವ ತಾಲ್ಲೂಕು ತಡಸ ಗ್ರಾಮದ ಬೈಲಗಂಗೇರಿ ಕೆರೆಯ ಪೂರಕ ಕಾಲುವೆಯಿಂದ ಜಗಳ ಕೆರೆಯ ಮುಖಾಂತರ ತಬಕದಹೊನ್ನಿಹಳ್ಳಿ ಕೆರೆಯವರೆಗೆ ಪೂರಕ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಕಲಘಟಗಿ ತಾಲ್ಲೂಕಿನ ತಡಸ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 13.07.2011ರ ಪತ್ರದಲ್ಲಿ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 20.12.2001
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 28.02.2004.

ಭೂಸ್ವಾಧೀನಾಧಿಕಾರಿಗಳು ತಮ್ಮ ಐತೀರ್ಪಿನಲ್ಲಿ ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಪ್ರತಿ ಗುಂಟೆಗೆ ರೂ. 775/–ಗಳನ್ನು ನಿಗದಿಪಡಿಸಿದ್ದಾರೆ. ಅದರಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಹಾವೇರಿ ಸಿವಿಲ್ (ಹಿರಿಯ ವಿಭಾಗ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಸಂಖ್ಯೆ: 1/05 ರಿಂದ 4/05 ರವರೆಗೆ ದಾಖಲಿಸಿದ್ದು, ಸಿವಿಲ್ ನ್ಯಾಯಾಲಯವು ದಿನಾಂಕ 01/03/2010ರಂದು ನೀಡಿದ ಆದೇಶದಲ್ಲಿ ಎಲ್.ಎ.ಸಿ. ಸಂಖ್ಯೆ: 1/05 ಮತ್ತು 4/05ಕ್ಕೆ ಪ್ರತಿ ಗುಂಟೆಗೆ ರೂ. 9,630/–ಗಳನ್ನು ನಿಗದಿಪಡಿಸಿ ಈ ಮೊತ್ತದ ಮೇಲೆ ಶೇ. 30ರಷ್ಟು ಸೋಲೇಷಿಯಂ, ಶೇ. 9 ರಷ್ಟು ಬಡ್ಡಿಯನ್ನು 4(1)ರ ಅಧಿಸೂಚನೆ ದಿನಾಂಕದಿಂದ ಒಂದು ವರ್ಷಕ್ಕೆ ತದನಂತರದ ಅವಧಿಗೆ ಶೇ. 15ರಷ್ಟು ಬಡ್ಡಿಯನ್ನು ಪಾವತಿ ದಿನಾಂಕದವರೆಗೆ ಪಾವತಿಸುವಂತೆ ಆದೇಶ ನೀಡಿದೆ.

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ (ಎಲ್‌ಎಸಿ) ಕಾನೂನು ಅಧಿಕಾರಿ–III ಇವರು ದಿನಾಂಕ 05–02–2011ರ ಪತ್ರ ಸಂಖ್ಯೆ: ಆರ್‌ಡಿ 1063 ಎಲ್‌ಸಿಬಿ 2010ರಲ್ಲಿ ಅಭಿಪ್ರಾಯ ನೀಡಿದೆ.

ಪಾವತಿಸಬೇಕಾದ ಪರಿಹಾರದ ವಿವರ ಕೆಳಕಂಡಂತಿದೆ.

ಕ್ರ.ಸಂ	ಎಲ್‌ಎಸಿ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
1	1/05	244	0–07	184993
2	2/05	242	0–19	502124
3	3/05	241	0–10	264275
4	4/05	122	0–07	184993
	ಒಟ್ಟು			1136385

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 94 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ 22ನೇ ಸೆಪ್ಟೆಂಬರ್ 2011

ಧಾರವಾಡ ಜಿಲ್ಲೆ, ಶಿಗ್ಗಾಂವ ತಾಲ್ಲೂಕು ತಡಸ ಗ್ರಾಮದ ಬೈಲಗಂಗೇರಿ ಕೆರೆಯ ಪೂರಕ ಕಾಲುವೆಯಿಂದ ಜಗಳ ಕೆರೆಯ ಮುಖಾಂತರ ತಬಕದಹೊನ್ನಿಹಳ್ಳಿ ಕೆರೆಯವರೆಗೆ ಪೂರಕ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಕಲಘಟಗಿ ತಾಲ್ಲೂಕಿನ ತಡಸ ಗ್ರಾಮಕ್ಕೆ ಸೇರಿದ ವಿವಿಧ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಲೆಕ್ಕಹಾಕಿದ ಪರಿಹಾರ ಧನ ಮೊತ್ತ ರೂ. 11,36,385–00ಗಳನ್ನು (ಹನ್ನೊಂದು ಲಕ್ಷದ ಮುವತ್ತಾರು ಸಾವಿರದ ಮುನ್ನೂರ ಎಂಭತ್ತೈದು ರೂ.ಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 11,36,385/–ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2357

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕಿನ ಖಾಜಿಕೋಟನೂರ ಗ್ರಾಮದ ಸಣ್ಣ ನೀರಾವರಿ ಕೆರೆ ಕಾಲುವೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಭೂಸ್ವಾ/2008–09/1260, ದಿನಾಂಕ 19/03/2009.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕಿನ ಖಾಜಿಕೋಟನೂರ ಗ್ರಾಮದ ಸಣ್ಣ ನೀರಾವರಿ ಕೆರೆ ಕಾಲುವೆ ನಿರ್ಮಾಣಕ್ಕಾಗಿ ಅಗತ್ಯವಿರುವ ಬೋಳೆವಾಡ ಗ್ರಾಮದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಅವಾರ್ಡ್ ಪೂರ್ವ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ರೂ. 17,40,000/–ಗಳ ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 19/03/09ರ ಪತ್ರದಲ್ಲಿ ಕೋರಿದ್ದಾರೆ.

ಖಾಜಿಕೋಟನೂರ ಗ್ರಾಮದ ಸಣ್ಣ ನೀರಾವರಿ ಕೆರೆಯ ನಿರ್ಮಾಣ ಕಾಮಗಾರಿಯನ್ನು 1999ನೇ ಸಾಲಿನಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿ ಪೂರ್ಣಗೊಂಡಿದೆ. ಆದರೆ ಕೆರೆಗೆ ಸಂಬಂಧಿಸಿದ ಕಾಲುವೆಗಳ ಕೆಲಸ ನಿರ್ಮಾಣ ಹಂತದಲ್ಲಿದ್ದು, ಕಾಲುವೆ ನಿರ್ಮಾಣಕ್ಕಾಗಿ ಬೋಳೆವಾಡ ಗ್ರಾಮಕ್ಕೆ ಸೇರಿದ 21–29 ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಕಂಇ 42 ಭೂಸ್ವಾಹಾ 2000, ದಿನಾಂಕ 08/10/2001ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ವೆಚ್ಚದ ಶೇ.50ರಷ್ಟು ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ.

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 76 ಭೂಸ್ವಾಪ್ರ 2009 ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್ 2011.

ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕಿನ ಖಾಜಿಕೋಟನೂರ ಗ್ರಾಮದ ಸಣ್ಣ ನೀರಾವರಿ ಕೆರೆ ಕಾಲುವೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ಮೊತ್ತದ ಶೇ.50 ರಷ್ಟು ಮೊತ್ತ ರೂ. 17,40,000–00 ಗಳ(ಹದಿನೇಳು ಲಕ್ಷದ ನಲವತ್ತು ಸಾವಿರ ರೂ.ಗಳು ಮಾತ್ರ) ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 17,40,000–00 ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ:20/10/2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್.ನಂ. 2358

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ENERGY SECRETARIAT

Sub :- Transfer of 2.1 MW wind power capacity in favour of M/s Bombay Rayon Fashions Limited from M/s Sarjan Realities Ltd-reg.

Read:-
1. Government Order No. EN 60 NCE 2005 dated:22.03.2005.
2. Government Order No. EN 132 NCE 2007 dated:16.4.2007.
3. Letter No. KRED/08/BRFL-2.1MW(SRL- 42MW)/2011/2469/ dated 19-08-2011 received from the Managing Director, Karnataka Renewable Energy Development Limited, Bangalore.

PREAMBLE:

In the Government Order read at (1) sanction has been accorded for allottment of 34.8 MW capacity wind power project in favour of M/s Sarjan Realities Limited at different places of Karnataka.

In the Government Order read at (2) above, sanction has been accorded for enhancement of wind power capacity from 4.2 MW (part capacity of 34.8 MW capacity) to 42.00 MW in favour of M/s Sarjan Realities Limited at Herada village region in Davanagere District.

The Managing Director, Karnataka Renewable Energy Development Limited, Bangalore in his letter read at (3) above, has recommended to the Government for transfer of 2.1 MW wind power capacity in favour of M/s Bombay Rayon Fashions Limited from out of the 42.00 MW capacity sanctioned in favour of M/s Sarjan Realities Limited at Herada site near Haravibasapura village, Huvinhadagali Taluk.

The proposal has been examined in detail and hence the following Order:-

GOVERNMENT ORDER NO: EN 339 NCE 2011 BANGALORE, DATED: 14,09,2011.

Government accords approval for transfer of 2.1 MW Wind power capacity in favour of M/s Bombay Rayon Fashions Limited from out of the 42.00 MW capacity sanctioned in favour of M/s Sarjan Realities Limited at Herada site of Haravibasapura village in land Sy. No 254, Huvinhadagali Taluk, Bellary District as detailed below and subject to the following conditions.

Village Name	**Taluk & District**	**MW**	**Land Survey Number**	**No. of WTG**	**Extent Land in (Acres)**	**WTG Number**
Haravibasapura	Huvinhadagali/ Bellary	**2.1**	**254**	1 No	2.00 Acres per WTG	**HR 10**

1. **M/s Bombay Rayon Fashions Limited** shall execute an agreement with Government within 45 (forty five) days from the date of issue of this Order.
2. **M/s Bombay Rayon Fashions Limited** is permitted to enter into wheeling and banking with concerned ESCOMs / KPTCL.
3. The Company should commission the project by 31.3.2012 and give an undertaking to that effect.
4. The Government reserves the right to Cancel/modify this Order.

The other terms and conditions of the Government Order read at (1) above shall **IPSO FACTO** be applicable.

By Order and in the name of the Governor of Karnataka

P.R. 2359

Suresh. B. Krishnappanavar

Under Secretary to Government

Energy Department

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಕರ್ನಾಟಕ ಪಲ್ಪವುಡ್ ಕಂಪನಿ ನೌಕರರಿಗೆ ಸ್ವಯಂ ನಿವೃತ್ತಿ ಪರಿಹಾರವನ್ನು ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಡಿಪಿಇ 34 ಎಆರ್‌ಯು 2005 ದಿನಾಂಕ: 19–01–2006.

2. ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಲ್ಪವುಡ್ ನಿಯಮಿತ ರವರ ಪತ್ರ ಸಂಖ್ಯೆ: ಕಪಲಿ/ಲೆಪ/07–08/2008–09/1390, ದಿನಾಂಕ: 26–08–2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 19–01–2006ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಪಲ್ಪವುಡ್ ಕಂಪನಿಯ ನೌಕರರಿಗೆ ಸ್ವಯಂ ನಿವೃತ್ತಿ ಪರಿಹಾರ ವಿತರಣೆಗಾಗಿ ಸರ್ಕಾರವು ರೂ, 2,89,35,520/– ಗಳನ್ನು ಸಾಲದ ರೂಪದಲ್ಲಿ ನೀಡಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ: 26–08–2008ರ ಪತ್ರದಲ್ಲಿ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಪಲ್ಪವುಡ್ ಕಂಪನಿ, ಇವರು ಪ್ರಸ್ತುತ ಕರ್ನಾಟಕ ಪಲ್ಪವುಡ್ ಕಂಪನಿಯು ಮುಚ್ಚುವ ಪ್ರಕ್ರಿಯೆಯಲ್ಲಿದ್ದು, ಕಂಪನಿಯಲ್ಲಿ ಯಾವುದೇ ಹಣಕಾಸು ಲಭ್ಯತೆಯಾಗಲೀ ಅಥವಾ ಆದಾಯವಾಗಲೀ ಇರುವುದಿಲ್ಲ ಹಾಗೂ ಸರ್ಕಾರವು ಮೇಲ್ಕಂಡ ಆದೇಶದಲ್ಲಿ ಸಾಲದ ಮೊತ್ತದ ಮೇಲೆ ಬಡ್ಡಿ ವಿಧಿಸುವ ಯಾವುದೇ ಷರತ್ತು ವಿಧಿಸಿರುವುದಿಲ್ಲವೆಂದು ತಿಳಿಸಿ ಸದರಿ ಸಾಲದ ಮೇಲೆ ಬಡ್ಡಿ ವಿಧಿಸಿದಲ್ಲಿ ಅದನ್ನು ಪಾವತಿಸುವ ಸ್ಥಿತಿಯಲ್ಲಿ ಕಂಪನಿಯು ಇರುವುದಿಲ್ಲವೆಂದು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ. ಅಲ್ಲದೆ ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು ಇವರು ಕಂಪನಿಯ 2008–09ನೇ ಸಾಲಿನ ಲೆಕ್ಕ ಪರಿಶೋಧನೆಯ ನಂತರ ನೀಡಿದ ಆಕ್ಷೇಪಣೆಯಲ್ಲಿ (Audit observations) ಕಂಪನಿಯ ಲೆಕ್ಕಪತ್ರಗಳಲ್ಲಿ ಮೇಲ್ಕಂಡ ಸಾಲದ ಮೇಲೆ ಬಡ್ಡಿ ಹಣದ ಬಗ್ಗೆ ಸೂಕ್ತ ಏರ್ಪಾಡು (necessary provision) ಮಾಡಬೇಕೆಂದು ತಿಳಿಸಿದ ಮೇರೆಗೆ ಈ ಕುರಿತು ಕಂಪನಿಯ ನೈಜ ಸ್ಥಿತಿಯನ್ನು ವಿವರಿಸಿ ಆಡಿಟ್ ಆಕ್ಷೇಪಣೆಗಳಿಗೆ ಸೂಕ್ತ ಉತ್ತರ ನೀಡಿರುವುದಾಗಿ ತಿಳಿಸುತ್ತಾ ಕಂಪನಿಯು ತೆಗೆದುಕೊಂಡಿರುವ ಈ ನಿಲುವನ್ನು ಸರ್ಕಾರವು ಸ್ಥಿರೀಕರಿಸಬೇಕೆಂದು ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 104 ಎಫ್‌ಪಿಸಿ 2008 ಬೆಂಗಳೂರು, ದಿನಾಂಕ: 10/08/2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕರ್ನಾಟಕ ಪಲ್ಪವುಡ್ ಕಂಪನಿಯ ನೌಕರರ ಸ್ವಯಂ ನಿವೃತ್ತಿ ಪರಿಹಾರ ವಿತರಣೆಗಾಗಿ ಸಾಲದ ರೂಪದಲ್ಲಿ ನೀಡಲಾದ ರೂ, 2,89,35,520/–ಗಳನ್ನು, ಕಂಪನಿಯು ಸಮಾಪನೆಗೊಳ್ಳುವ ಸಂದರ್ಭದಲ್ಲಿ ಮರುಪಾವತಿಸುವ ಷರತ್ತಿನೊಂದಿಗೆ ಬಡ್ಡಿ ರಹಿತ (Interest free) ಸಾಲವೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: FD 1207 ವೆಚ್ಚ-5/2010, ದಿನಾಂಕ:13–12–2010ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಪಿ. ರಾಮಕೃಷ್ಣ

ಪಿ.ಆರ್.ನಂ. 2360

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಪಶ್ಚಿಮಘಟ್ಟ ಕಾರ್ಯಪಡೆಯ ಸಂಚಾಲಕರ, ಸದಸ್ಯತ್ವವನ್ನು ಮಾರ್ಪಾಡು ಮಾಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಅಪಜೀ 125 ಎಫ್‌ಎಪಿ 2008, ದಿನಾಂಕ : 04–09–2008.

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರ ಸಂಖ್ಯೆ : ಪಿಸಿಸಿಎಫ್/ಸಿ/ಸಿಆರ್–40/2008–09, ದಿನಾಂಕ : 24–03–2011.

ಪ್ರಸ್ತಾವನೆ :

ಪಶ್ಚಿಮಘಟ್ಟದಲ್ಲಿರುವ ಮಹತ್ವದ ಸಸ್ಯ ಸಂಪತ್ತು ಮತ್ತು ವನ್ಯ ಸಂಪತ್ತನ್ನು ಸಂರಕ್ಷಿಸಲು ಮತ್ತು ಅರಣ್ಯ ಚಟುವಟಿಕೆಗಳನ್ನು ತೀವ್ರಗೊಳಿಸಲು ಪಶ್ಚಿಮಘಟ್ಟಗಳ ಸಂರಕ್ಷಣೆ ಕಾರ್ಯಪಡೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ರಚಿಸಿದೆ. ಸದರಿ ಆದೇಶದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರನ್ನು ಪಶ್ಚಿಮಘಟ್ಟ ಕಾರ್ಯಪಡೆಯ ಸಂಚಾಲಕರನ್ನಾಗಿ ಹೆಸರಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸಭೆಗಳಿಗೆ ಹಾಜರಾಗುವ ಹಾಗೂ ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಯ ಒತ್ತಡವಿರುವುದರಿಂದ ಪಶ್ಚಿಮಘಟ್ಟ ಕಾರ್ಯಪಡೆಯ ಚಟುವಟಿಕೆಗಳಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ ಸ್ಥಾನ) ಬೆಂಗಳೂರು ಇವರನ್ನು ಕಾರ್ಯಪಡೆಯ ಸಂಚಾಲಕರನ್ನಾಗಿ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರನ್ನು ಸದರಿ ಕಾರ್ಯಪಡೆ ಸದಸ್ಯರನ್ನಾಗಿ ಮಾರ್ಪಾಡು ಮಾಡಿ ಆದೇಶ ನೀಡಬೇಕಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 24–03–2011ರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಅಪಜೀ 151 ಎಫ್‌ಎಪಿ 2011, ಬೆಂಗಳೂರು, ದಿನಾಂಕ : 11–08–2011

ಪಶ್ಚಿಮಘಟ್ಟದಲ್ಲಿರುವ ಮಹತ್ವದ ಸಸ್ಯ ಸಂಪತ್ತು ಮತ್ತು ವನ್ಯ ಸಂಪತ್ತನ್ನು ಸಂರಕ್ಷಿಸಲು ಮತ್ತು ಅರಣ್ಯ ಚಟುವಟಿಕೆಗಳನ್ನು ತೀವ್ರಗೊಳಿಸಲು ರಚಿಸಲಾದ **ಪಶ್ಚಿಮಘಟ್ಟಗಳ ಸಂರಕ್ಷಣೆ ಕಾರ್ಯಪಡೆಯ** ಆದೇಶ ಸಂಖ್ಯೆ : ಅಪಜೀ 125 ಎಫ್‌ಎಪಿ 2008, ದಿನಾಂಕ : 04–09–2008 ರಲ್ಲಿನ ಕ್ರ.ಸಂ.

19ನ್ನು ಭಾಗಶಃ ಮಾರ್ಪಡಿಸಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ಇವರ ಬದಲಾಗಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರಸ್ಥಾನ), ಬೆಂಗಳೂರು ಇವರನ್ನು ಸಂಚಾಲಕರನ್ನಾಗಿ ನೇಮಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ರವರನ್ನು ಸದಸ್ಯರನ್ನಾಗಿ ನೇಮಿಸಿ ಆದೇಶಿಸಿದೆ.

ಉಳಿದಂತೆ, ದಿನಾಂಕ : 04–09–2008ರ ಸರ್ಕಾರಿ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಪಿ. ರಾಮಕೃಷ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2361 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಸಂಖ್ಯೆ : ಅಪಜೀ 3 ಎಫ್‌ಪಿಸಿ 2011, ಬೆಂಗಳೂರು ದಿನಾಂಕ : 11–08–2011

ತಿದ್ದುಪಡಿ

ಸರ್ಕಾರಿ ಆದೇಶ ಸಂಖ್ಯೆ : ಅಪಜೀ 183 ಎಫ್‌ಪಿಸಿ 99, ದಿನಾಂಕ : 14–08–2001ರ ಆದೇಶ ಭಾಗದಲ್ಲಿನ,

"ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಸರ್ಕಾರದಿಂದ ಪಡೆದ ರೂ. 151.05 ಲಕ್ಷಗಳ ಸಾಲವನ್ನು ನಿಗಮಕ್ಕೆ ಈಕ್ವಿಟಿ ಬಂಡವಾಳವಾಗಿ ಸರ್ಕಾರವು ಪರಿವರ್ತಿಸಿ ಮಂಜೂರು ಮಾಡಲಾಗಿದೆ".

ಎಂಬುದರ ಬದಲಾಗಿ

"ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಸರ್ಕಾರದಿಂದ ಪಡೆದ ರೂ. 151.05 ಲಕ್ಷಗಳ ಸಾಲವನ್ನು 2011–12ನೇ ಸಾಲಿನ ಮೊದಲ ಕಂತಿನ ಪೂರಕ ಅನುದಾನದಿಂದ ಲೆಕ್ಕಶೀರ್ಷಿಕೆ 4406–01–190–0–03–211 ಅಡಿಯಲ್ಲಿ ನಿಗಮಕ್ಕೆ ಈಕ್ವಿಟಿ ಬಂಡವಾಳವಾಗಿ ಸರ್ಕಾರವು ಪರಿವರ್ತಿಸಿ ಮಂಜೂರು ಮಾಡಲಾಗಿದೆ ಹಾಗೂ ಯಾವುದೇ ನಗದು ಹೊರ ಹರಿವು ಇರುವುದಿಲ್ಲ" ಎಂಬುದಾಗಿ ಓದಿಕೊಳ್ಳತಕ್ಕದ್ದು.

ಈ ತಿದ್ದುಪಡಿಯನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 106 ವೆಚ್ಚ–5/2011 ದಿನಾಂಕ : 23–05–2011 ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಪಿ. ರಾಮಕೃಷ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2362 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಉತ್ತರ ಕನ್ನಡ ಜಿಲ್ಲೆ, ಯಲ್ಲಾಪುರ ತಾಲ್ಲೂಕು, ಯಲ್ಲಾಪುರ ಗ್ರಾಮದ ಸರ್ವೆ ನಂ. 80ರಲ್ಲಿ 5 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾದ ಜಮೀನನ್ನು ವಿಶ್ವ ದರ್ಶನ ಎಜುಕೇಷನ್ ಸೊಸೈಟಿ (ರಿ), ಯಲ್ಲಾಪುರ ರವರಿಗೆ ಖಾಯಂ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ : ಆರ್.ಬಿ/ಎಲ್.ಎನ್.ಡಿ–1/ಡಿಎಸ್‌ಆರ್/ವಿವ–103/2009–10 ದಿನಾಂಕ : 09–03–2010.

ಪ್ರಸ್ತಾವನೆ :

ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರ ದಿನಾಂಕ : 09–03–2010ರ ತಮ್ಮ ಪತ್ರದಲ್ಲಿ ಉತ್ತರ ಕನ್ನಡ ಜಿಲ್ಲೆ, ಕಾರವಾರ, ಯಲ್ಲಾಪುರ ತಾಲ್ಲೂಕು, ಯಲ್ಲಾಪುರ ಗ್ರಾಮದ ಸ.ನಂ. 80ರಲ್ಲಿ 5–00 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳು, ಕಾರವಾರ ಇವರ ಆದೇಶ ದಿನಾಂಕ : 29–11–2003 ರಂತೆ 10 ವರ್ಷದ ಅವಧಿಗೆ ವಿಶ್ವದರ್ಶನ ಎಜುಕೇಷನ್ ಸೊಸೈಟಿ, ಯಲ್ಲಾಪುರ ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿದ್ದು, ಲೀಸ್ ಅವಧಿಯು ದಿನಾಂಕ : 29–11–2013ರಂದು ಕೊನೆಗೊಳ್ಳುತ್ತದೆ ಮತ್ತು ಈ ಜಮೀನಿನ ಗುತ್ತಿಗೆ ಅವಧಿಯನ್ನು ಮುಂದಿನ 25 ವರ್ಷಗಳ ಅವಧಿಗೆ ವಿಸ್ತರಿಸಲು ಸದರಿ ಸಂಸ್ಥೆಯವರು ವಿನಂತಿಸಿದ್ದು, ಮೊದಲಿಗೆ ನೀಡಿರುವ ಲೀಸ್ ಅವಧಿ ಮುಕ್ತಾಯಗೊಂಡ ನಂತರದಲ್ಲಿ ಲೀಸ್ ಅವಧಿ ವಿಸ್ತರಿಸಬೇಕಾಗುತ್ತದೆ. ಈ ಮಧ್ಯೆ ಸದರಿ ಸಂಸ್ಥೆಯವರು ಖಾಯಂ ಮಂಜೂರಾತಿಗೆ ವಿನಂತಿಸಿದ್ದು, ಸದರಿ ಜಮೀನು ಯಲ್ಲಾಪುರ ನಗರ ಪ್ರದೇಶದಲ್ಲಿ ಬರುತ್ತಿದ್ದು, ಇಂತಹ ಜಮೀನುಗಳನ್ನು ಖಾಸಗಿ ವ್ಯಕ್ತಿ/ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ನಿಷೇಧವಿರುತ್ತದೆ ಮತ್ತು ಸರ್ಕಾರದ ಆದೇಶಾನುಸಾರ ಇಂತಹ ನಗರ ಪ್ರದೇಶದ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಬೇಕೆಂದು ನಿರ್ದೇಶನದ ಹಿನ್ನೆಲೆಯಲ್ಲಿ ಈ ಸಂಸ್ಥೆಯ ಕೋರಿಕೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ವರದಿ ಮಾಡಿರುತ್ತಾರೆ.

ಅಧ್ಯಕ್ಷರು, ವಿಶ್ವದರ್ಶನ ಎಜುಕೇಷನ್ ಸೊಸೈಟಿ (ರಿ) ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಸದರಿ ಜಮೀನನ್ನು ಸದ್ಬಳಕೆ ಮಾಡಿಕೊಳ್ಳಲು ಸಂಸ್ಥೆ ಉದ್ದೇಶಿಸಿದ್ದು, ಸದರಿ ಜಮೀನನ್ನು ಅಭಿವೃದ್ಧಿ ಪಡಿಸಲು ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ ಪುಷ್ಪಾಭಿವೃದ್ಧಿ ಘಟಕಕ್ಕೆ ರೂ. 172 ಲಕ್ಷ ಮಂಜೂರಾಗಿದ್ದು, ಈ ಹಣವನ್ನು ಬಳಸಲು ಖಾಯಂ ಸ್ಥಳ ಹೊಂದಿರಬೇಕಾಗಿರುವುದರಿಂದ ಈ ಯೋಜನೆಯನ್ನು ಸಾಕಾರಗೊಳಿಸಲು ಭೂ ಹಕ್ಕನ್ನು ಖಾಯಂಗೊಳಿಸಲು ಕೋರಿದ್ದಾರೆ. ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ಬೆಲೆ ಪ್ರತಿ ಎಕರೆಗೆ ರೂ. 1,12,000/–ಗಳು ಇರುವುದಾಗಿ ಜಿಲ್ಲಾಧಿಕಾರಿಗಳು,

ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರು ದಿನಾಂಕ : 26–04–2010ರ ಪತ್ರದಲ್ಲಿ ತಿಳಿಸಿರುತ್ತಾರೆ. ಇದರಿಂದಾಗಿ ಸಂಸ್ಥೆಯವರು ಕೋರಿರುವ 5–00 ಎಕರೆ ಜಮೀನಿನ ಒಟ್ಟು ಮೌಲ್ಯ ರೂ. 5,60,000/– ಗಳಾಗುತ್ತವೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 09 ಎಲ್‌ಜಿಎನ್ 2010, ಬೆಂಗಳೂರು, ದಿನಾಂಕ : 16–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ವಿವರಗಳ ಹಿನ್ನೆಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕು, ಯಲ್ಲಾಪುರ ಗ್ರಾಮದ ಸ.ನಂ. 80 ರಲ್ಲಿನ 5–00 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ದಿನಾಂಕ : 29–11–2003 ರಂದು 10 ವರ್ಷಗಳ ಅವಧಿಗೆ ವಿಶ್ವದರ್ಶನ ಎಜುಕೇಷನ್ ಸೊಸೈಟಿ (ರಿ) ಯಲ್ಲಾಪುರ ರವರಿಗೆ, ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿರುವ ಜಮೀನನ್ನು ಸದ್ಬಳಕೆ ಮಾಡಿಕೊಳ್ಳಲು ಸಂಸ್ಥೆ ಉದ್ದೇಶಿಸಿದ್ದು, ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ ಪುಷ್ಪಾಭಿವೃದ್ಧಿ ಘಟಕಕ್ಕೆ ರೂ. 172 ಲಕ್ಷ ಮಂಜೂರಾಗಿದ್ದು, ಈ ಯೋಜನೆಯನ್ನು ಸಾಕಾರಗೊಳಿಸಲು ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 21ರಡಿ ಪ್ರಚಲಿತ ಮಾರುಕಟ್ಟೆ ದರ ಮತ್ತು ಇತರೆ ವೆಚ್ಚಗಳನ್ನು ಹಾಗೂ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ವಿಶ್ವ ದರ್ಶನ ಎಜುಕೇಷನ್ ಸೊಸೈಟಿ (ರಿ) ಯಲ್ಲಾಪುರ ರವರಿಗೆ ಖಾಯಂ ಆಗಿ ಮಂಜೂರು ಮಾಡಿ ಆದೇಶಿಸಿದೆ :–

- ಖಾಯಂ ಮಂಜೂರಾತಿಗೆ ಪೂರ್ವದ ಅವಧಿಗೆ ನಿಯಮಾನುಸಾರ ಗುತ್ತಿಗೆ ಹಾಗೂ ಇತರೆ ಶುಲ್ಕಗಳನ್ನು ಪಾವತಿಸತಕ್ಕದ್ದು.
- ಯಾವ ಉದ್ದೇಶಕ್ಕೆ ಮಂಜೂರಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳತಕ್ಕದ್ದು, ಈ ಷರತ್ತು ಉಲ್ಲಂಘನೆ ಆದಲ್ಲಿ ಸರ್ಕಾರವು ಈ ಜಮೀನನ್ನು ಹಿಂತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಗೀತಾ ರಮೇಶ್
ಸರ್ಕಾರದ ಜಂಟಿ ಕಾರ್ಯದರ್ಶಿ
(ಭೂಮಂ, ಭೂಕಂ ಮತ್ತು ಸೇವೆಗಳು)
ಕಂದಾಯ ಇಲಾಖೆ

ಪಿ.ಆರ್. 2363

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶಿಡ್ಲಘಟ್ಟ ಕಂದಾಯ ತಾಲ್ಲೂಕಿನಲ್ಲಿ ಖಾಲಿ ಇರುವ ನೋಟರಿ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ (ಶ್ರೀ ಬಿ.ಕೆ. ಪ್ರಭಾಕರ್, ನೋಟರಿ, ಶಿಡ್ಲಘಟ್ಟ ಇವರ ನಿಧನದಿಂದ ತೆರವು).

ಓದಲಾಗಿದೆ : 1. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ : ಎಂಟಿ ನಂ. 6129/2010 ದಿನಾಂಕ : 15–07–2010.

2. ಸರ್ಕಾರದ ಆದೇಶ ಸಂಖ್ಯೆ : ಲಾ 165 ಎಲ್‌ಸಿಎಲ್ 2010 ದಿನಾಂಕ : 08–09–2010 ಮತ್ತು 04–01–2011.
3. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ : ಎಂಟಿ ನಂ. 148/2011 ದಿನಾಂಕ : 10–01–2011.
4. ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ : ಜಿಎಸ್‌ಆರ್ 114(ಇ) ದಿನಾಂಕ : 24–02–2009.
5. ಅಧಿಸೂಚನೆ ಸಂಖ್ಯೆ : ಲಾ 61 ಎಲ್‌ಸಿಎಲ್ 2009, ದಿನಾಂಕ : 24–07–2010.
6. ಸಂದರ್ಶನ ಸೂಚನಾ ಪತ್ರ ಸಂಖ್ಯೆ : ಲಾ 165 ಎಲ್‌ಸಿಎಲ್ 2010, ದಿನಾಂಕ : 01–03–2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ : 15–07–2010ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಚಿಕ್ಕಬಳ್ಳಾಪುರ ಇವರು ಶ್ರೀ ಬಿ.ಕೆ. ಪ್ರಭಾಕರ್, ನೋಟರಿ, ಶಿಡ್ಲಘಟ್ಟ ಇವರು ದಿನಾಂಕ : 30–08–2009ರಂದು ನಿಧನರಾಗಿರುವುದಾಗಿ ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಕಳುಹಿಸಿದ್ದರು ಆ ಮೇರೆಗೆ ಶ್ರೀಯುತರ ನಿಧನದಿಂದ ತೆರವಾದ ನೋಟರಿ ಹುದ್ದೆಯನ್ನು ಭರ್ತಿ ಮಾಡಲು ನೋಟರಿಗಳ ಅಧಿನಿಯಮ/ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳಡಿಯಲ್ಲಿ ಪರಿಶೀಲಿಸಿ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಇವರನ್ನು ಮೇಲೆ (2)ರಲ್ಲಿ ಓದಲಾದ ಸರ್ಕಾರದ ದಿನಾಂಕ : 08–09–2010 ಮತ್ತು 04–01–2011ರ ಪತ್ರಗಳಲ್ಲಿ ಕೋರಲಾಗಿತ್ತು.

ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ : 10–01–2011ರ ಪತ್ರದೊಂದಿಗೆ 06 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಆ ಪ್ರಸ್ತಾವನೆಯನ್ನು ಮೇಲೆ (4)ರಲ್ಲಿ ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ಮೇಲೆ (5)ರಲ್ಲಿ ಓದಲಾದ ದಿನಾಂಕ : 24–07–2010ರ ಅಧಿಸೂಚನೆಯಲ್ಲಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಪರಿಶೀಲನೆಗೆ ಕಳಿಸಿ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುವಂತೆ ಮೇಲೆ (6)ರಲ್ಲಿ ಓದಲಾದ ದಿನಾಂಕ : 01–03–2011ರ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ಆಯ್ಕೆ ಪಟ್ಟಿಯನ್ನು ಸಲ್ಲಿಸಿದೆ.

ಸಂದರ್ಶನ ಮಂಡಳಿಯು ಶಿಫಾರಸ್ಸು ಮಾಡಿರುವವರ ವಿರುದ್ಧ ದೂರು ಸ್ವೀಕೃತವಾದ ಹಿನ್ನೆಲೆಯಲ್ಲಿ ಸರ್ಕಾರವು ನೋಟರಿ ನಿಯಮಗಳಲ್ಲಿನ ಅಧಿಕಾರದನ್ವಯ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 165 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ: 20–09–2011

ನೋಟರಿಗಳ ಅಧಿನಿಯಮ 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದಂತೆ ಶ್ರೀ ಎನ್.ಆರ್. ರವಿಕುಮಾರ್, ವಕೀಲರು, ಬಿನ್ ಎನ್. ರಾಚಪ್ಪ, ನಂ. 816, ನಗರ್ತಪೇಟೆ, ಚಿಂತಾಮಣಿ ಇವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಶಿಡ್ಲಘಟ್ಟ ಕಂದಾಯ ತಾಲ್ಲೂಕಿನ ನೋಟರಿಯನ್ನಾಗಿ ನೇಮಿಸಿದೆ.

ಸದರಿ ವಕೀಲರು ಲೆಕ್ಕ ಶೀರ್ಷಿಕೆ "0070–ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು–06 ಇತರೆ ಬಾಬ್ತುಗಳಿಗೆ (0070–01–501–0–06)" ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ. 1000–00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರ ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952ರ ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ಶಕುಂತಲ

ಪಿಆರ್.ನಂ. 2364

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

FOREST, ECOLOGY AND ENVIRONMENT SECRETARIAT

Sub: Constitution of Committee for submission of reclamation and rehabilitation plan of the Bellary District-SLP (Civil) Nos : 7366-7367/2010 - reg.

Read: Hon'ble Supreme Court of India's directions in record of proceedings dated : 05-08-2011.

PREAMBLE :

While hearing the matter on 05-08-2011 in Hon'ble Supreme Court of India in Special Leave to Appeal (Civil) Nos. 7366-7367/2010 Government of A.P. & ORS V/s M/s Obulapuram Mining Co. P.Ltd., & ORS Etc., the Hon'ble Supreme Court of India have directed that macro level EIA study to be undertaken by Indian Council of Forestry Research and Education (ICFRE) in collaboration with Wildlife Institute of India, FSI and such other domain experts, as may be decided by ICFRE in consultation with Ministry of Environment and Forest (MoEF). This would be in respect of the Bellary District. The MoEF will frame a detail terms of reference for the proposed study within one week. The macro level EIA study shall also indicate whether the district of Bellary constitutes one single environmental unit or it constitutes more than one unit with different degrees of environmental degradation. The Report shall be submitted within three months. It shall be open to the FIMI and the petitioner in Writ Petition (C) No. 562 of 2009 to provide necessary inputs to ICFRE, which will also be taken into account while submitting the macro level EIA study report.

The Hon'ble Supreme Court have further directed the State of Karnataka to submit the reclamation and rehabilitation plan of Bellary District within three months. The subject has been discussed in detail in the meeting held under the Chairmanship of the Principal Secretary to Government, Forest, Ecology & Environment Department, Bangalore and after discussing the issue, it has been decided that a macro level plan for reclamation and rehabilitation of Bellary district is to be prepared and submitted by the Director General, Environmental Management and Policy Research Institute (EMPRI) after undertaking a field visit within two weeks time and taking inputs from the Forest Department, Karnataka State Pollution Control Board and Mines & Geology Department. A comprehensive report is to be submitted about the actions to be taken by various agencies in restoring the degraded areas due to excessive mining in Bellary District. The report shall also cover an overview of the activities to be undertaken in reclamation and rehabilitation of the mining areas in Bellary district especially keeping in view the CEC report submitted to the Hon'ble Supreme Court of India and other Environmental studies conducted in past by National Environmental Engineering Research Institute (NEERI), Nagpur, Hence the order.

Government Order No. FEE 129 ENV 2011, Bangalore, Dated : 11-08-2011.

After careful consideration and under the circumstances explained above, the Government are pleased to constitute a Committee under the Chairmanship of the Director General, EMPRI comprising the following members to submit a comprehensive report/plan on reclamation and rehabilitation of mining areas of Bellary district as directed by the Hon'ble Supreme Court of India on 05-08-2011 in Special Leave Petition (Civil) Nos. 7366-7367/2009.

1. The Director General, Environmental Management and Policy Research Institute - Chairman
2. Chief Conservator of Forests (Forest Conservation) - Member
3. Member Secretary, Karnataka State Pollution Control Board - Member
4. Joint Director, Mines & Geology Department - Member

The terms and conditions of the Committee are as follows :

i. After field visit, the Committee shall submit an implementable and comprehensive plan for reclamation and rehabilitation of Bellary district within two weeks time. The Director General EMPRI shall take assistance of any of the officers of the Department as required and deemed fit in preparation of the said report.

ii. Assistance of subject matter Specialists/Institutions of repute pertaining to the issues concerned shall also be utilized if need be.

iii. The Committee shall take into account various recommendations made by the CEC and recommendations made in the Regional Environmental Impact Assessment for mining in Bellary and Hospet conducted by the National

Environmental Engineering Research Institute (NEERI), Nagpur, while preparing the said rehabilitation plan for the Bellary district.

iv. The report shall be prepared taking into consideration the ground realities in affected areas of Bellary District both in forest and non forest areas.

v. The Committee may also take into consideration the terms of reference proposed to be prepared by the Ministry of Environment & Forests as per the directions of the Hon'ble Supreme Court for preparation of EIA study by the Indian Council of Forestry Research & Education (ICFRE), in collaboration with FSI and such other domain experts.

vi. The report shall also interalia include the budget requirement for implementation of the rehabilitation plan and the Department/Agency responsible for ensuring implementation of the rehabilitation plan.

The officers are eligible for the admissible TA/DA as per rules and shall be drawn from the Department concerned following due procedure.

By Order and in the name of Governor of Karnataka

B. MANOHAR

Under Secretary to Government

(Ecology & Environment)

P.R. NO. 2365 Forest, Ecology & Environment Department.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಡಾ: ಎಸ್. ಮಂಜುನಾಥ್, ಪಶುವೈದ್ಯಾಧಿಕಾರಿ ಮತ್ತು ಡಾ: ವಿನೋದ್‌ಕುಮಾರ್ ಜಿ. ಪಶುವೈದ್ಯಾಧಿಕಾರಿ ಇವರುಗಳಿಗೆ ಪಿ.ಹೆಚ್.ಡಿ. ಉನ್ನತ ವ್ಯಾಸಂಗ ಮಾಡಲು ಅನುಮತಿ ನೀಡುವಿಕೆ.

ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 240 ಪಸಸೇ 2011, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2011

ಓದಲಾಗಿದೆ :

1. ಪತ್ರ ಸಂಖ್ಯೆ: ಆಪಸಂ/ಶಿಕ್ಷಣ/ವಿವ–12/2011–12, ದಿನಾಂಕ: 06–09–2011.
2. ಪತ್ರ ಸಂಖ್ಯೆ: ಆಪಸಂ/ಶಿಕ್ಷಣ/ವಿವ–13/2011–12, ದಿನಾಂಕ: 06–09–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ಮತ್ತು (2)ರ ಪತ್ರಗಳಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಧಾರವಾಡ ಜಿಲ್ಲಾ ಉಪ ನಿರ್ದೇಶಕರು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ: ಎಸ್. ಮಂಜುನಾಥ್, ಪಶುವೈದ್ಯಾಧಿಕಾರಿ ಇವರು ಐ.ವಿ.ಆರ್.ಐ. ಇಜ್ಜತ್ ನಗರ, ಬರೆಲಿ, ಉತ್ತರ ಪ್ರದೇಶ ಇಲ್ಲಿ ಮತ್ತು ಕೊಪ್ಪಳ ಜಿಲ್ಲಾ ಉಪ ನಿರ್ದೇಶಕರು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ: ವಿನೋದ್‌ಕುಮಾರ್ ಜಿ. ಪಶುವೈದ್ಯಾಧಿಕಾರಿ ಇವರು TANUVAS, ಚೆನ್ನೈ, ತಮಿಳುನಾಡು ಇಲ್ಲಿ ಪಿ.ಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ದೊರೆತಿದ್ದು, ವೇತನ ರಹಿತ ರಜೆ ಮೇಲೆ ಉನ್ನತ ವ್ಯಾಸಂಗ ಪೂರ್ಣಗೊಳಿಸಲು ಸದರಿ ಅಧಿಕಾರಿಗಳು ಇಚ್ಛಿಸಿರುವುದರಿಂದ ಅವರುಗಳಿಗೆ ಉನ್ನತ ವ್ಯಾಸಂಗಕ್ಕೆ ತೆರಳಲು ಅನುಮತಿ ನೀಡುವಂತೆ ಕೋರಿರುತ್ತಾರೆಂದು ತಿಳಿಸಿರುತ್ತಾರೆ. ಡಾ: ಎಸ್. ಮಂಜುನಾಥ್‌ರವರು ದಿನಾಂಕ: 02–12–2010 ರಂದು ಹಾಗೂ ಡಾ: ವಿನೋದ್‌ಕುಮಾರ್ ಜಿ. ರವರು ದಿನಾಂಕ: 15–07–2009 ರಂದು ಸೇವೆಗೆ ಸೇರಿದ್ದು, ಅವರುಗಳ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವುದಿಲ್ಲವೆಂದು, ಪ್ರಸ್ತಾಪಿತ ಉನ್ನತ ವ್ಯಾಸಂಗದಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವಾದ್ದರಿಂದ ಹಾಗೂ ಉನ್ನತ ವ್ಯಾಸಂಗ ಇಲಾಖೆ ಸೇವೆಗೆ ಪೂರಕವಾಗಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ, ಡಾ: ಎಸ್. ಮಂಜುನಾಥ್, ಪಶುವೈದ್ಯಾಧಿಕಾರಿ ಇವರಿಗೆ ದಿನಾಂಕ: 16–09–2011 ರಿಂದ 15–09–2014 ರವರೆಗೆ (ಒಟ್ಟು 3 ವರ್ಷ) ಹಾಗೂ ಡಾ: ವಿನೋದ್ ಕುಮಾರ್ ಜಿ. ಪಶುವೈದ್ಯಾಧಿಕಾರಿ ಇವರಿಗೆ ದಿನಾಂಕ: 14–09–2011 ರಿಂದ ದಿನಾಂಕ: 13–09–2014 ರವರೆಗೆ (ಒಟ್ಟು 3 ವರ್ಷ) ಕರ್ತವ್ಯ ರಹಿತ ದಿನಗಳು / ಲೆಕ್ಕಕ್ಕಿಲ್ಲದ ದಿನಗಳ ಮೇಲೆ ಉನ್ನತ ವ್ಯಾಸಂಗಕ್ಕೆ ತೆರಳಲು ಅನುಮತಿ ನೀಡುವಂತೆ ಆಯುಕ್ತರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಡಾ: ಎಸ್. ಮಂಜುನಾಥ್, ಪಶುವೈದ್ಯಾಧಿಕಾರಿ ಮತ್ತು ಡಾ: ವಿನೋದ್‌ಕುಮಾರ್ ಜಿ. ಪಶುವೈದ್ಯಾಧಿಕಾರಿ ಇವರುಗಳು ಕ್ರಮವಾಗಿ ಉತ್ತರಪ್ರದೇಶ ಮತ್ತು ತಮಿಳುನಾಡಿನ ಪಶುವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ 2011–12ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಹೆಚ್.ಡಿ. ಉನ್ನತ ವ್ಯಾಸಂಗಕ್ಕೆ ಆಯ್ಕೆಯಾಗಿದ್ದು, ಉನ್ನತ ವ್ಯಾಸಂಗವನ್ನು ಕರ್ತವ್ಯ ರಹಿತ ದಿನಗಳು/ಲೆಕ್ಕಕ್ಕಿಲ್ಲದ ದಿನಗಳು ಮೇಲೆ ಪೂರ್ಣಗೊಳಿಸಲು ಇಚ್ಛಿಸಿರುತ್ತಾರೆ. ಅಧಿಕಾರಿಗಳು ಸ್ವಂತ ವೆಚ್ಚದಲ್ಲಿ ಪಿ.ಹೆಚ್.ಡಿ./ಉನ್ನತ ವ್ಯಾಸಂಗ ಕೈಗೊಳ್ಳಲಿರುವುದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆ ಆಗುವುದಿಲ್ಲ. ಉನ್ನತ ವ್ಯಾಸಂಗ ಇಲಾಖೆಗೆ ಪೂರಕವಾಗಿರುತ್ತದೆಂದು ಆಯುಕ್ತರು ಸಮರ್ಥನೆ ನೀಡಿ ಉನ್ನತ ವ್ಯಾಸಂಗಕ್ಕೆ ತೆರಳಲು ಅನುಮತಿ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆ. ಪಿ.ಹೆಚ್.ಡಿ. ಉನ್ನತ ವ್ಯಾಸಂಗದ ಅವಧಿಯನ್ನು ಲೆಕ್ಕಕ್ಕಿಲ್ಲದ ದಿನಗಳು/ಕರ್ತವ್ಯ ರಹಿತ ದಿನಗಳೆಂದು ಪರಿಗಣಿಸಲು ಸರ್ಕಾರಿ ಅಧಿಕೃತ ಜ್ಞಾಪನಾ ಸಂಖ್ಯೆ: ಎಫ್‌ಡಿ 9 ಎಸ್‌ಆರ್‌ಎಸ್ 93, ದಿನಾಂಕ: 18–11–1993ರಲ್ಲಿ ತಿಳಿಸಿರುವನ್ವಯ ಇಬ್ಬರು ಅಧಿಕಾರಿಗಳು ಮುಚ್ಚಳಿಕೆಯನ್ನು ನೀಡಿರುತ್ತಾರೆ. ಇಲಾಖೆಯಲ್ಲಿ ಪಿಹೆಚ್‌ಡಿ ಪದವೀಧರರ ಪ್ರಮಾಣ ಕಡಿಮೆ ಇರುವುದರಿಂದ ಸದರಿ ಅಧಿಕಾರಿಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಿದಲ್ಲಿ ಉನ್ನತ ವ್ಯಾಸಂಗದ ನಂತರ ಅದರ ಲಾಭವನ್ನು ಇಲಾಖೆಯಲ್ಲಿ ಪಡೆಯಬಹುದಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಇಲಾಖಾ ಹಿತದೃಷ್ಟಿಯಿಂದ ಡಾ: ಎಸ್. ಮಂಜುನಾಥ್, ಪಶುವೈದ್ಯಾಧಿಕಾರಿ ಇವರಿಗೆ ದಿನಾಂಕ: 16–09–2011 ರಿಂದ 15–09–2014 ರವರೆಗೆ (ಒಟ್ಟು 3 ವರ್ಷ) ಹಾಗೂ ಡಾ: ವಿನೋದ್‌ಕುಮಾರ್ ಜಿ. ಪಶುವೈದ್ಯಾಧಿಕಾರಿ ಇವರಿಗೆ ದಿನಾಂಕ: 14–09–2011 ರಿಂದ ದಿನಾಂಕ: 13–09–2014 ರವರೆಗೆ (ಒಟ್ಟು 3 ವರ್ಷ) ಕರ್ತವ್ಯ ರಹಿತ ದಿನಗಳು/ಲೆಕ್ಕಕ್ಕಿಲ್ಲದ ದಿನಗಳ ಮೇಲೆ ಉನ್ನತ ವ್ಯಾಸಂಗಕ್ಕೆ ತೆರಳಲು ಅನುಮತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 9 ಎಸ್‌ಆರ್‌ಎಸ್ 93, ದಿನಾಂಕ: 18–11–1993 ರಲ್ಲಿ ತಿಳಿಸಿರುವನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಡಾ: ಎಸ್. ಮಂಜುನಾಥ್, ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಗುಡಗೇರಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರಿಗೆ Indian Veterinary Research Institute, Izatnagar, Uttarpradesh ಇಲ್ಲಿ ದಿನಾಂಕ: 16–09–2011 ರಿಂದ 15–09–2014 ರವರೆಗಿನ (ಒಟ್ಟು 3 ವರ್ಷ) ಅವಧಿಯಲ್ಲಿ ಪಿ.ಹೆಚ್.ಡಿ. (Animal Biotechnology) (BTY) ಉನ್ನತ ವ್ಯಾಸಂಗ ಮಾಡಲು ಹಾಗೂ ಡಾ: ವಿನೋದ್‌ಕುಮಾರ್ ಜಿ. ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಸವಣ್ಣಕ್ಯಾಂಪ್, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರಿಗೆ Tamil Nadu Veterinary and Animal Sciences University, Chennai ಇಲ್ಲಿ ದಿನಾಂಕ: 14–09–2011 ರಿಂದ ದಿನಾಂಕ: 13–09–2014 ರವರೆಗಿನ (ಒಟ್ಟು 3 ವರ್ಷ) ಅವಧಿಯಲ್ಲಿ ಪಿ.ಹೆಚ್.ಡಿ. (Livestock products and Management) ಉನ್ನತ ವ್ಯಾಸಂಗ ಮಾಡಲು ಅನುಮತಿ ನೀಡಿದೆ.

(1) ಉನ್ನತ ವ್ಯಾಸಂಗದ ಅವಧಿಯನ್ನು "ಲೆಕ್ಕಕ್ಕಿಲ್ಲದ ದಿನಗಳು/ಕರ್ತವ್ಯ ರಹಿತ ದಿನಗಳು" (Dies-non or Non-duty) ಎಂದು ಪರಿಗಣಿಸತಕ್ಕದ್ದು.

(2) ಉನ್ನತ ವ್ಯಾಸಂಗದ ಅವಧಿಯನ್ನು ವಾರ್ಷಿಕ ಬಡ್ತಿ, ನಿವೃತ್ತಿ ವೇತನ ಸೌಲಭ್ಯ, ರಜೆ ಸೌಲಭ್ಯ ಮತ್ತು ಇನ್ನಿತರ ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆ ಎಂದು ಪರಿಗಣಿಸಲಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 441 ವೆ.4/2011, ದಿನಾಂಕ: 19–09–2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಪಿ. ನಾಗರಾಜ
ಪೀಠಾಧಿಕಾರಿ–2
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ–ಎ).

ಪಿ.ಆರ್. ನಂ. 2367

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಸೇವೆಯಲ್ಲಿ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾ ನಾಯಕ್, ಡಾ: ವಿ. ರಘುರಾಮೇಗೌಡ ಹಾಗೂ ಡಾ: ಅಬ್ದುಲ್ ಮುನಾಫ್, ಸಹಾಯಕ ನಿರ್ದೇಶಕರುಗಳ ಇವರುಗಳ ವೇತನವನ್ನು ಕಿರಿಯ ಅಧಿಕಾರಿಯಾದ ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ, ಸಹಾಯಕ ನಿರ್ದೇಶಕರು ಇವರ ವೇತನಕ್ಕೆ ಸ್ಟೆಪ್‌ಅಪ್ ಮಾಡುವ ಬಗ್ಗೆ.

ಓದಲಾಗಿದೆ : **ಪತ್ರ ಸಂಖ್ಯೆ: ಆಪಸಂ/ಸಿಬ್ಬಂದಿ–1/ವಿವ–33/2010–11. ದಿನಾಂಕ: 27–11–2010.**

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಸೇವೆಯಲ್ಲಿ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾ ನಾಯಕ, ಡಾ: ವಿ.ರಘುರಾಮೇಗೌಡ ಹಾಗೂ ಡಾ: ಅಬ್ದುಲ್ ಮುನಾಫ್, ಸಹಾಯಕ ನಿರ್ದೇಶಕರುಗಳು ಸೇವೆಯಲ್ಲಿ ಅವರುಗಳಿಗಿಂತ ಕಿರಿಯ ಅಧಿಕಾರಿಯಾದ ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ, ಸಹಾಯಕ ನಿರ್ದೇಶಕರು, ಕುರಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುಧಾಪುರ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯವರು ಹೆಚ್ಚಿಗೆ ವೇತನ ಪಡೆಯುತ್ತಿರುವುದರಿಂದ ಹಿರಿಯ ಅಧಿಕಾರಿಗಳ ವೇತನವನ್ನು ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ ಇವರ ವೇತನಕ್ಕೆ ಸಮಾನಾಂತರಗೊಳಿಸಿ ಸ್ಟೆಪ್‌ಅಪ್ ಮಾಡಿಕೊಡಬೇಕೆಂದು ಬೆಂಗಳೂರು ನಗರ/ ಕೋಲಾರ ಜಿಲ್ಲಾ ಉಪ ನಿರ್ದೇಶಕರುಗಳು ಮತ್ತು ಕೋಳಿ ರೋಗ ನಿರ್ಣಯ ಪ್ರಯೋಗಾಲಯದ ಉಪ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಕಿರಿಯ ಅಧಿಕಾರಿಯಾದ ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ, ಸಹಾಯಕ ನಿರ್ದೇಶಕರು ಇವರು ಪಶುವೈದ್ಯಾಧಿಕಾರಿ ಹುದ್ದೆಯಲ್ಲಿ ಸತತ 20 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಕಾರಣ ಅವರು 10 ವರ್ಷಗಳ ಸೇವೆಗೆ ಸಮಯಾವಧಿ ವೇತನಶ್ರೇಣಿ, 15 ವರ್ಷಗಳ ಸೇವೆಗೆ ಸ್ವಯಂಚಾಲಿತ ವಿಶೇಷ ವೇತನ ಬಡ್ತಿ ಮತ್ತು 20 ವರ್ಷ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿ ಪಡೆದಿರುತ್ತಾರೆಂದು, ಅವರು ದಿನಾಂಕ: 01–08–2005 ರಂದು ಸಹಾಯಕ ನಿರ್ದೇಶಕರ ಹುದ್ದೆಗೆ ಸಕ್ರಮಗೊಂಡಿರುತ್ತಾರೆಂದು, ಜೇಷ್ಠತೆಯಲ್ಲಿ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾನಾಯಕ್, ಡಾ: ವಿ. ರಘುರಾಮೇಗೌಡ ಹಾಗೂ ಡಾ: ಅಬ್ದುಲ್ ಮುನಾಫ್, ಸಹಾಯಕ ನಿರ್ದೇಶಕರುಗಳು ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ, ಇವರಿಗಿಂತ ಮೊದಲೇ ಮುಂಬಡ್ತಿಯಾಗಿದ್ದರೂ ಸಹ ಕಿರಿಯ ಅಧಿಕಾರಿ ಸಮಯಾವಧಿ ವೇತನಶ್ರೇಣಿ/ಸ್ವಯಂಚಾಲಿತ ವಿಶೇಷ ವೇತನ ಬಡ್ತಿ/ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಪಡೆದಿರುವುದರಿಂದ ಹಿರಿಯ ಮತ್ತು ಕಿರಿಯ ಅಧಿಕಾರಿಯ ನಡುವಿನ ವೇತನದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. ದಿನಾಂಕ: 01–07–2005ಕ್ಕೂ ಪೂರ್ವದಲ್ಲಿ ಪಶುವೈದ್ಯಾಧಿಕಾರಿಗಳಿಗೆ ಸಮಯಾವಧಿ ವೇತನಶ್ರೇಣಿ ಸೌಲಭ್ಯವಿರದ ಕಾರಣ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾನಾಯಕ, ಡಾ: ವಿ ರಘರಾಮೇಗೌಡ ಹಾಗೂ ಡಾ: ಅಬ್ದುಲ್ ಮುನಾಫ್ ಇವರುಗಳಿಗೆ ಸಮಯಾವಧಿ ವೇತನಶ್ರೇಣಿ ಸೌಲಭ್ಯವು ದೊರೆತಿರುವುದಿಲ್ಲವೆಂದು, ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 7 ಎಸ್‌ಆರ್‌ಪಿ 93, ದಿನಾಂಕ: 19–09–1994ರಲ್ಲಿ ಸಮಯಾವಧಿ ವೇತನ ಶ್ರೇಣಿ/ಸ್ವಯಂಚಾಲಿತ ವಿಶೇಷ ವೇತನ ಬಡ್ತಿ/ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಕಿರಿಯ ಅಧಿಕಾರಿ ಪಡೆದಿದ್ದು, ಸೇವೆಯಲ್ಲಿ ಹಿರಿಯರಾದ ಅಧಿಕಾರಿಗಳು ಕಿರಿಯ ಅಧಿಕಾರಿಗಿಂತ ಕಡಿಮೆ ವೇತನವನ್ನು ಪಡೆಯುತ್ತಿದ್ದಲ್ಲಿ ಹಿರಿಯ ಅಧಿಕಾರಿಗಳ ವೇತನವನ್ನು ಕಿರಿಯ ಅಧಿಕಾರಿಯ ವೇತನಕ್ಕೆ ಸಮಾನಾಂತರಗೊಳಿಸಿ ಸ್ಟೆಪ್‌ಅಪ್ ಮಾಡಬಹುದೆಂದು ಆದೇಶಿಸಿರುವುದರಿಂದ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾ ನಾಯಕ್, ಡಾ: ವಿ. ರಘುರಾಮೇಗೌಡ ಹಾಗೂ ಡಾ: ಅಬ್ದುಲ್ ಮುನಾಫ್, ಇವರುಗಳ ವೇತನವನ್ನು ಕಿರಿಯ ಅಧಿಕಾರಿ ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ, ಸಹಾಯಕ ನಿರ್ದೇಶಕರು ಇವರ ವೇತನಕ್ಕೆ ಸಮಾನಾಂತರಗೊಳಿಸಿ ಸ್ಟೆಪ್‌ಅಪ್ ಮಾಡಿಕೊಡುವಂತೆ ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಡಾ: ಟಿ. ಹನುಮಾನಾಯಕ್ (ಜೇಷ್ಠತಾ ಸಂಖ್ಯೆ: 749) ಡಾ: ಕೆ. ರಘುರಾಮೇಗೌಡ (ಜೇಷ್ಠತಾ ಸಂಖ್ಯೆ: 728) ಡಾ: ಅಬ್ದುಲ್ ಮುನಾಫ್ (ಜೇಷ್ಠತಾ ಸಂಖ್ಯೆ: 931) ಸಹಾಯಕ ನಿರ್ದೇಶಕರುಗಳು ಸೇವೆಯಲ್ಲಿ/ಜೇಷ್ಠತೆಯಲ್ಲಿ ಸೇವೆಯಲ್ಲಿ ಡಾ: ಮಹಮದ್ ರಹಮತುಲ್ಲಾ, ಸಹಾಯಕ ನಿರ್ದೇಶಕರು (ಜೇಷ್ಠತಾ ಸಂಖ್ಯೆ: 1069) ಇವರಿಗಿಂತ ಹಿರಿಯ ಅಧಿಕಾರಿ ಆಗಿರುತ್ತಾರೆ. ಹಿರಿಯ ಅಧಿಕಾರಿಗಳು ದಿನಾಂಕ: 19–06–2002 ರಂದು ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ಪಡೆದಿದ್ದು, ಕಿರಿಯ ಅಧಿಕಾರಿಯು ದಿನಾಂಕ: 02–08–2005 ರಂದು ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ಹೊಂದಿರುತ್ತಾರೆ. ಪಶುವೈದ್ಯಾಧಿಕಾರಿ ವೃಂದದ ಅಧಿಕಾರಿಗಳಿಗೆ ದಿನಾಂಕ: 01–07–2005 ರ ಪೂರ್ವದಲ್ಲಿ ಆಯ್ಕೆಕಾಲಿಕ ವೇತನಶ್ರೇಣಿ, ಸ್ವಯಂಚಾಲಿತ ವಿಶೇಷ ವೇತನ ಬಡ್ತಿ ಹಾಗೂ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳು ಲಭ್ಯವಿರಲಿಲ್ಲ. ತದನಂತರ ಸರ್ಕಾರಿ ಆದೇಶ ಸಂಖ್ಯೆ: ಆಇ 24 ಎಸ್‌ಆರ್‌ಪಿ 2006, ದಿನಾಂಕ: 27–11–2006 ರಲ್ಲಿ 10 ವರ್ಷ ನಿರಂತರ ಸೇವೆಯನ್ನು ಪೂರ್ಣಗೊಳಿಸಿರುವ ಪಶುವೈದ್ಯಾಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ (ಕಾಲಮಿತಿ ಮುಂಬಡ್ತಿ) ನಿಯಮಗಳು, 1983 ರನ್ವಯ ಆಯ್ಕೆಕಾಲಿಕ ವೇತನಶ್ರೇಣಿ ರೂ. 13,000–23,850ನ್ನು ಹಾಗೂ 15 ವರ್ಷ ನಿರಂತರ ಸೇವೆ ಪೂರ್ಣಗೊಳಿಸಿರುವ ಪಶುವೈದ್ಯಾಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ (ಹಿರಿಯ ವೇತನಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ) ನಿಯಮಗಳು, 1991 ರನ್ವಯ ಹಿರಿಯ ವೇತನಶ್ರೇಣಿ ರೂ. 14,050–25,050ನ್ನು ಹಾಗೂ 20 ವರ್ಷ ಸತತ ಸೇವೆ ಸಲ್ಲಿಸಿರುವ ಪಶುವೈದ್ಯಾಧಿಕಾರಿಗಳಿಗೆ ಸರ್ಕಾರಿ ಆದೇಶದ ಸಂಖ್ಯೆ: ಆಇ 13 ಎಸ್‌ಆರ್‌ಪಿ 2002, ದಿನಾಂಕ: 09–05–2002ರನ್ವಯ ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳನ್ನು ದಿನಾಂಕ: 01–07–2005 ರಿಂದ ಜಾರಿಗೆ ಬರುವಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ. ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ ಇವರು ದಿನಾಂಕ: 01–08–2005 ರಂದು ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ಹೊಂದಿದ್ದು, ಅವರು ದಿನಾಂಕ: 01–07–2005 ರೊಳಗೆ ಪಶುವೈದ್ಯಾಧಿಕಾರಿ ಹುದ್ದೆಯಲ್ಲಿ 10, 15, 20 ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿದ್ದರಿಂದ ಅವರು ದಿನಾಂಕ: 01–07–2005 ರಿಂದ ಜಾರಿಗೆ ಬರುವಂತೆ ಆಯ್ಕೆಕಾಲಿಕ ವೇತನಶ್ರೇಣಿ ರೂ. 13,000–23,850, ಹಿರಿಯ ವೇತನಶ್ರೇಣಿ ರೂ. 14,050–25,050 ಮತ್ತು ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುತ್ತಾರೆ. ಆದರೆ ಜೇಷ್ಠತೆಯಲ್ಲಿ ಹಿರಿಯ ಅಧಿಕಾರಿಗಳಾದ ಡಾ: ಕೆ. ರಘುರಾಮೇಗೌಡ ಡಾ: ಅಬ್ದುಲ್ ಮುನಾಫ್ ಹಾಗೂ ಡಾ: ಟಿ. ಹನುಮಾ ನಾಯಕ್, ಇವರುಗಳು ಕಿರಿಯ ಅಧಿಕಾರಿಗಿಂತ (ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ) ಮೊದಲೇ ಅಂದರೆ ದಿನಾಂಕ: 19–06–2002 ರಂದೇ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ಹೊಂದಿದ್ದರೂ ಸಹ ಆ ಸಂದರ್ಭದಲ್ಲಿ ಪಶುವೈದ್ಯಾಧಿಕಾರಿಗಳಿಗೆ ಆಯ್ಕೆಕಾಲಿಕ ವೇತನಶ್ರೇಣಿ, ಸ್ವಯಂಚಾಲಿತ ವಿಶೇಷ ವೇತನ ಬಡ್ತಿ ಹಾಗೂ ಹೆಚ್ಚುವರಿ ವೇತನ ಬಡ್ತಿಗಳು ಲಭ್ಯವಿಲ್ಲದ ಕಾರಣ ಹಿರಿಯ ಅಧಿಕಾರಿಗಳು ಸದರಿ ಸೌಲಭ್ಯಗಳನ್ನು ಪಡೆದಿರುವುದಿಲ್ಲ. ಕಿರಿಯ ಅಧಿಕಾರಿಯಾದ ಡಾ: ಹೆಚ್. ರಹಮತುಲ್ಲಾ, ಸಹಾಯಕ ನಿರ್ದೇಶಕರು ಇವರು ಆಯ್ಕೆಕಾಲಿಕ ವೇತನ ಶ್ರೇಣಿ, ಸ್ವಯಂಚಾಲಿತ ವಿಶೇಷ ವೇತನ ಬಡ್ತಿ ಹಾಗೂ ಹೆಚ್ಚುವರಿ ವೇತನ ಬಡ್ತಿಗಳನ್ನು ಪಡೆದ ದಿನಾಂಕ: 01–07–2005 ರಂದು ಅವರ ವೇತನವು ರೂ. 25,050/– ಇದ್ದರೆ ಆ ದಿನಾಂಕದಂದು ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾನಾಯಕ, ಡಾ: ವಿ. ರಘರಾಮೇಗೌಡ, ಡಾ: ಅಬ್ದುಲ್ ಮುನಾಫ್ ಇವರುಗಳ ವೇತನವು ರೂ. 23,250/–ಕ್ಕೆ ನಿಗದಿಯಾದ ಕಾರಣ ಹಿರಿಯ ಮತ್ತು ಕಿರಿಯ ಅಧಿಕಾರಿಯ ನಡುವಿನ ವೇತನದಲ್ಲಿ ತಾರತಮ್ಯ ಉಂಟಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಸೇವೆಯಲ್ಲಿ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾನಾಯಕ್, ಡಾ: ವಿ. ರಘುರಾಮೇಗೌಡ ಮತ್ತು ಡಾ: ಅಬ್ದುಲ್ ಮುನಾಫ್ ಇವರುಗಳ ವೇತನವನ್ನು ಕಿರಿಯ ಅಧಿಕಾರಿಯಾದ ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ ಇವರ ವೇತನಕ್ಕೆ ಸರಿಸಮಾನವಾಗಿ ದಿನಾಂಕ: 01–07–2005 ರಿಂದ ಜಾರಿಗೆ ಬರುವಂತೆ ಮೂಲ ವೇತನ ರೂ. 23,250–00 ರಿಂದ ರೂ. 24,450–00ಕ್ಕೆ ತದನಂತರ ಮತ್ತೆ ದಿನಾಂಕ: 02–08–2005 ರಿಂದ ಜಾರಿಗೆ ಬರುವಂತೆ ಮೂಲ ವೇತನ ರೂ. 24,450–00 ರಿಂದ ರೂ. 25,050–00ಕ್ಕೆ ಎತ್ತರಿಸುವ ಮೂಲಕ ಹಿರಿಯ ಮತ್ತು ಕಿರಿಯ ಅಧಿಕಾರಿಗಳ ನಡುವಿನ ವೇತನ ವ್ಯತ್ಯಾಸವನ್ನು ಸರಿಪಡಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 41, ಪಅಸೇ 2011, ಬೆಂಗಳೂರು, ದಿನಾಂಕ : 09ನೇ ಸೆಪ್ಟೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ವಿಶೇಷ ಪ್ರಕರಣವೆಂದು ಪರಿಗಣಿಸಿ ಸೇವೆಯಲ್ಲಿ ಹಿರಿಯ ಅಧಿಕಾರಿಗಳಾದ ಡಾ: ಟಿ. ಹನುಮಾನಾಯಕ್, ಡಾ: ವಿ. ರಘುರಾಮೇಗೌಡ ಮತ್ತು ಡಾ: ಅಬ್ದುಲ್ ಮುನಾಫ್, ಸಹಾಯಕ ನಿರ್ದೇಶಕರುಗಳು, ಇವರುಗಳ ವೇತನವನ್ನು ಸೇವೆಯಲ್ಲಿ ಕಿರಿಯ ಅಧಿಕಾರಿಯಾದ ಡಾ: ಹೆಚ್. ಮಹಮ್ಮದ್ ರೆಹಮತುಲ್ಲಾ, ಸಹಾಯಕ ನಿರ್ದೇಶಕರು ಇವರ ವೇತನಕ್ಕೆ ಸರಿಸಮಾನವಾಗಿ ವೇತನಶ್ರೇಣಿ ರೂ. 14,050–25,050 ರಲ್ಲಿ ದಿನಾಂಕ: 01–07–2005 ರಿಂದ ಅನ್ವಯಿಸುವಂತೆ ರೂ. 23,250–00 ರಿಂದ ರೂ. 24,450–00 ಕ್ಕೆ ಎತ್ತರಿಸಿದೆ. ತದನಂತರವೂ ವಾರ್ಷಿಕ ವೇತನಬಡ್ತಿ ವ್ಯತ್ಯಾಸವಾಗುವುದರಿಂದ ಡಾ: ಟಿ. ಹನುಮಾನಾಯಕ್, ಡಾ: ವಿ. ರಘುರಾಮೇಗೌಡ ಮತ್ತು ಡಾ: ಅಬ್ದುಲ್ ಮುನಾಫ್, ಸಹಾಯಕ ನಿರ್ದೇಶಕರುಗಳು, ಇವರುಗಳ ವೇತನವನ್ನು ಮತ್ತೆ ದಿನಾಂಕ: 02–08–2005 ರಿಂದ ಜಾರಿಗೆ ಬರುವಂತೆ ರೂ. 24,450–00 ರಿಂದ ರೂ. 25,050–00ಕ್ಕೆ ಎತ್ತರಿಸಿ ಆದೇಶಿಸಿದೆ.

ಡಾ: ಟಿ. ಹನುಮಾನಾಯಕ್, ಡಾ: ವಿ. ರಘುರಾಮೇಗೌಡ ಮತ್ತು ಡಾ: ಅಬ್ದುಲ್ ಮುನಾಫ್ ಸಹಾಯಕ ನಿರ್ದೇಶಕರುಗಳು, ಇವರುಗಳ ಸ್ಥಗಿತ ವೇತನ ಬಡ್ತಿಗಳನ್ನು (Stagnation increments) ನಿಯಮಾನುಸಾರ ನಿಗದಿಪಡಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD: 66:Exp-4/2011, ದಿನಾಂಕ: 02–08–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕೆ. ಶ್ರೀನಿವಾಸಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ).

ಪಿ.ಆರ್. ನಂ. 2368

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಮತ್ತು ಇಂಧನ ವೆಚ್ಚ ಪಾವತಿಸುವ ಬಗ್ಗೆ.

ಓದಲಾಗಿದೆ :
1. ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ ಇವರ ಪತ್ರ ಸಂಖ್ಯೆ: ಪುನರ್ವಸತಿ:ವಹಿ–28/2011–12, ದಿನಾಂಕ: 01–07–2011.
2. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ: ಸಿಎಎಲ್/ಸಿಆರ್–06/2010–11, ದಿನಾಂಕ: 26–07–2011 ಮತ್ತು 06–07–2011.

ಪ್ರಸ್ತಾವನೆ:

ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಮತ್ತು ಇಂಧನ ವೆಚ್ಚ ಪಾವತಿಸಲು, ಮೇಲೆ ಓದಲಾದ (1)ರ ಪತ್ರದಲ್ಲಿ ಗದಗ ಜಿಲ್ಲಾಧಿಕಾರಿಗಳು ರೂ. 1,07,205–00 ಮತ್ತು ಮೇಲೆ (2)ರಲ್ಲಿ ಓದಲಾದ ಪತ್ರಗಳಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿಗಳು ರೂ. 5,25,456/– ಬಿಡುಗಡೆ ಮಾಡುವಂತೆ, ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ, ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ: 14–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ಇಂಧನ ವೆಚ್ಚ ಒಟ್ಟು ರೂ. 6,32,661/– (ರೂಪಾಯಿ ಆರು ಲಕ್ಷದ ಮೂವತ್ತೆರಡು ಸಾವಿರದ ಆರು ನೂರ ಅರವತ್ತೊಂದು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆ ಇವರಿಗೆ ಈ ಕೆಳಕಂಡಂತೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

1. ಗದಗ್ ಜಿಲ್ಲೆ	–	ರೂ. 1,07,205/–
2. ಬಾಗಲಕೋಟೆ ಜಿಲ್ಲೆ	–	ರೂ. 5,25,456/–
ಒಟ್ಟು		**ರೂ. 6,32,661/–**

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235–00–111–0–02 'Public Contribution to the Calamity Relief ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಬಿಡುಗಡೆ ಮಾಡಿರುವ ಹಣವನ್ನು ಹೇಗೆ ಉಪಯೋಗಿಸಲಾಗಿದೆ ಮತ್ತು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಎಸ್. ಮದ್ಭಾವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. ಮತ್ತು ಸೇವೆಗಳು–2)

ಪಿ.ಆರ್. ನಂ. 2369

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಂ.ವಿ. ವೇದಮೂರ್ತಿ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಹಿಂದಿನ ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ ವಿರುದ್ಧದ ಇಲಾಖಾ ವಿಚಾರಣೆ – ಅಂತಿಮ ಆದೇಶ.

ಓದಲಾಗಿದೆ :
1. ನೋಟೀಸ್ ಸಂಖ್ಯೆ: ಸಿಆಸುಇ 42 ಕೆಇವಿ 2008, ದಿನಾಂಕ: 23–05–2008.
2. ಶ್ರೀ ಎಂ.ವಿ. ವೇದಮೂರ್ತಿ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಇವರ ದಿನಾಂಕ: 20–12–2008ರ ಉತ್ತರ
3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 42 ಕೆಇವಿ 2008 ದಿನಾಂಕ: 13–08–2010.
4. ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಮತ್ತು ವಿಚಾರಣಾಧಿಕಾರಿಗಳು. ಇವರ ದಿನಾಂಕ: 14–09–2011ರ ವಿಚಾರಣಾ ವರದಿ.

ಪ್ರಸ್ತಾವನೆ:

ಶ್ರೀ ಎಂ.ವಿ. ವೇದಮೂರ್ತಿ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಇವರು ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಎಸಗಿದ್ದಾರೆನ್ನಲಾದ ಕರ್ತವ್ಯ ಲೋಪ ಹಾಗೂ ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ ಇವರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ದೋಷಾರೋಪಣಾ ಪಟ್ಟಿಯೊಂದಿಗೆ ನೋಟೀಸನ್ನು ಜಾರಿಗೊಳಿಸಲಾಗಿತ್ತು. ಸದರಿ ನೋಟೀಸಿಗೆ ಆರೋಪಿತ ಅಧಿಕಾರಿಯು ಉತ್ತರಿಸುತ್ತಾ, ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ತಮ್ಮ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸುವುದರಿಂದ, ಈ ಆರೋಪಗಳ ಸತ್ಯಾಸತ್ಯತೆಯನ್ನು ಇಲಾಖಾ ವಿಚಾರಣೆಯ ಮೂಲಕ ಕಂಡುಕೊಳ್ಳಲು ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿನ ಸರ್ಕಾರಿ ಆದೇಶದಲ್ಲಿ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಎನ್. ಸುಬ್ಬರಾವ್, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು.

2. ಮೇಲ್ಕಂಡ ಆರೋಪಗಳ ಬಗ್ಗೆ ವಿವರವಾಗಿ ವಿಚಾರಣೆಯನ್ನು ನಡೆಸಿ ವಿಚಾರಣಾಧಿಕಾರಿಗಳು ಮೇಲೆ ಓದಲಾದ ಕ್ರಮ ಸಂಖ್ಯೆ: (4)ರಲ್ಲಿನ ಪತ್ರದ ಮುಖೇನ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಈ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ ಇವರ ಮೇಲಿನ ಎಲ್ಲಾ 14 ಆರೋಪಗಳು ರುಜುವಾತಾಗಿಲ್ಲವೆಂದು ವರದಿ ನೀಡಿರುತ್ತಾರೆ. ವಿಚಾರಣಾಧಿಕಾರಿಯ ವರದಿಯ ಸಂಕ್ಷಿಪ್ತ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

ಆರೋಪ: 1,2,3:– ಟೆಂಡರ್ ದರ ಇತರ ಸಂಸ್ಥೆಗಳಿಗಿಂತ ಹೆಚ್ಚಿಗೆ ಇದ್ದರೂ ಅದನ್ನೇ ಶಿಫಾರಸ್ಸು ಮಾಡಿರುವುದು. ಟೆಂಡರ್ ಷರತ್ತನ್ನು ಸರ್ಕಾರದ ಅನುಮತಿಯಿಲ್ಲದೆ ಮಾರ್ಪಡಿಸಿರುವುದು ಮತ್ತು ವೈಕಿಂಗ್ ಸಂಸ್ಥೆಯು ತನ್ನ ಬಿಡ್ಡನ್ನು ತೆರೆಯದೆ ಸೀಲ್ಡ್ ಕವರ್ ಕಳುಹಿಸಿರುವುದು ಇತ್ಯಾದಿಗಳ ಬಗ್ಗೆ ಯಾವೊಬ್ಬ ಸಾಕ್ಷಿಯು ಏನು ಹೇಳದೆ ಇದ್ದು, ಸಾಕ್ಷಾಧಾರಗಳ ಕೊರತೆಯಿಂದ ಈ ಆರೋಪಗಳು ರುಜುವಾತಾಗಿಲ್ಲ ಎಂದು ನಿರ್ಣಯಿಸಿದ್ದೇನೆ.

ಆರೋಪ: 4:– ಲಂಚದ ಆಪಾದನೆ ಈ ಆರೋಪಗಳ ಬಗ್ಗೆ 08 ಜನ ಸಾಕ್ಷಿಗಳ ಪೈಕಿ ಒಬ್ಬ ಸಾಕ್ಷಿದಾರನಾದ ಶ್ರೀ ಎನ್.ಸಿ. ರಮೇಶ್‌ರವರು ಮಾತ್ರ ಸಾಕ್ಷಿ ನುಡಿದಿದ್ದು, ನಿರ್ದೇಶಕರು (ಆಪಾಧಿತರು) ರೂ. 20.00 ಲಕ್ಷ ಲಂಚ ಕೇಳಿದರು ಎಂಬುದನ್ನು ಯಾವ ಸಂಸ್ಥೆಯವರು ಹೇಳಿದ್ದರು ಎಂದು ನನಗೆ ಜ್ಞಾಪಕ ಬರುತ್ತಿಲ್ಲ. ಆಪಾಧಿತರು ನನ್ನನ್ನು ಲಂಚ ಕೇಳಿಲ್ಲ ಇವರು ಲಂಚ ಕೇಳಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದಿದ್ದಾರೆ. ಆಪಾದಿತರು ಹಾಗೂ ಇಲಾಖಾ ಕಾರ್ಯದರ್ಶಿಯವರಿಗೆ ವೈಮನಸ್ಸು ಇತ್ತು. ಆದ್ದರಿಂದ ಕಾರ್ಯದರ್ಶಿಯವರು ತಮ್ಮ ಬಳಿಗೆ ಬಂದ ಸ್ವಯಂ ಸೇವಾ ಸಂಸ್ಥೆಯವರಿಗೆ ನಿರ್ದೇಶಕರ ಬಗ್ಗೆ ದೂರು ಬರೆದು ಕೊಡಿ ಎಂದು ಕೇಳುತ್ತಿದ್ದರು. ಅವರು ತಮ್ಮಿಂದ ಒತ್ತಾಯದಿಂದ ಅರ್ಜಿಯನ್ನು ಬರೆಸಿಕೊಂಡರು ಎಂದು ಒಪ್ಪಿದ್ದಾರೆ. ಬೇರೆಯವರಿಂದ ಲಂಚ ಕೇಳಿದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದಿದ್ದಾರೆ. ಆದ್ದರಿಂದ 4ನೇ ಆರೋಪವು ರುಜುವಾತಾಗಿಲ್ಲ ಎಂದು ನಿರ್ಣಯಿಸಿದ್ದೇನೆ.

ಆರೋಪ: 5:– ಸೋಫಿಯಾ ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಿರುವ ಪ್ರಕ್ರಿಯೆಗೆ ಸಂಸ್ಥೆಗೆ ತೊಂದರೆ ಕೊಡುವ ಉದ್ದೇಶದಿಂದ ವಿಳಂಬ ಮಾಡಿ ಲೋಕಾಯುಕ್ತಕ್ಕೆ ದೂರು ನೀಡಿದ ನಂತರವೇ ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಯವುದೇ ಸಾಕ್ಷಿ ನುಡಿದಿರುವುದಿಲ್ಲ. ಆದ್ದರಿಂದ ಸಾಕ್ಷಿಗಳ ಕೊರತೆಯಿಂದ ರುಜುವಾತಾಗಿರುವುದಿಲ್ಲ ಎಂದು ನಿರ್ಣಯಿಸಿದ್ದೇನೆ.

ಆರೋಪ: 6:– ಅಂಗವಿಕಲ ಕಲ್ಯಾಣ ಅಧಿಕಾರಿಗಳನ್ನು ಮತ್ತು ಅಧೀನ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಅರ್ಹವಲ್ಲದ ಸ್ವಯಂ ಸೇವಾ ಸಂಸ್ಥೆಗಳನ್ನು ಆಯ್ಕೆ ಮಾಡಲು ರೂ. 50,000/– ದಿಂದ ರೂ. 1.00 ಲಕ್ಷ ವಸೂಲಿ ಮಾಡಿದ್ದಾರೆ ಎಂದು ಎಂ.ಬಿ. ಪಾಟೀಲ್‌ರವರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ಆದರೆ ಇವರ ವಿಳಾಸಕ್ಕೆ ಕಳುಹಿಸಿರುವ ಸಾಕ್ಷಿ ನೋಟೀಸ್ ಜಾರಿಯಾಗಿಲ್ಲ. ವಿಳಾಸದಲ್ಲಿ ಇಲ್ಲದಿರುವುದರಿಂದ ನೋಟೀಸು ವಾಪಸ್ ಬಂದಿದೆ. ಇನ್ನೊಬ್ಬ ಸಾಕ್ಷಿ ಶ್ರೀ ಎನ್. ಮೂರ್ತಿ, ಅಧ್ಯಕ್ಷರು, ಕರ್ನಾಟಕ ದಲಿತ ಸಂಘರ್ಷ ಸಮಿತಿ ಇವರು ರಾಜ್ಯಪಾಲರಿಗೆ ಸಲ್ಲಿಸಿರುವ ಮನವಿಯನ್ನು ಗುರುತಿಸಿದ್ದಾರೆ. ಆದರೆ ಯಾವುದೋ ಸಹಾಯ ಕೇಳಿ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ಭೇಟಿ ಮಾಡಿದಾಗ ಈ ತರಹ ಬರೆದು ಕೊಡಿ ಎಂದು ಹೇಳಿ ಕೇಳಿದರೆಂದು ಖಾಲಿ ಲೆಟರ್‌ಹೆಡ್ ನಾನೇ ಕೊಟ್ಟೆ, ಕಾರ್ಯದರ್ಶಿಯವರು ಅದರಲ್ಲಿ ಬೆರಳಚ್ಚು ಮಾಡಿಸಿರುವುದನ್ನು ನಾನು ಓದಿಲ್ಲ, ಸಹಿ ಮಾಡಿದ್ದೇನೆ. ನನಗೆ ತಿಳಿದಂತೆ ಸಮುದಾಯ ಯೋಜನೆ ಕಾರ್ಯಕ್ರಮದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಅನುದಾನ ದುರುಪಯೋಗವಾಗಿದೆ ಎಂದು ನಾನು ಅಪಾದಿತರ ವಿರುದ್ಧ ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಇವರ ಸಹಿ ಇರುವ ಪತ್ರಕ್ಕೆ ಅದರಲ್ಲಿ ಏನು ಬರೆದಿದೆ ಎಂದು ತಿಳಿಯದೆ ಸಹಿ ಮಾಡಿ ಕೊಟ್ಟಿದ್ದಾರೆ. ಇಂತಹ ವ್ಯಕ್ತಿಗಳ ದೂರು ಹೇಗೆ ನಂಬಲು ಸಾಧ್ಯ. ತಾನು ಇದರ ಬಗ್ಗೆ ಯಾವುದೇ ದೂರು ಕೊಟ್ಟಿಲ್ಲ ಎನ್ನುವಾಗ ಅವರ ಸಾಕ್ಷಿಯಿಂದ ಶಿಸ್ತು ಪ್ರಾಧಿಕಾರಕ್ಕೆ ಯಾವುದೇ ರೀತಿಯ ಬೆಂಬಲವಿಲ್ಲ. ಅದೇ ರೀತಿ ಇತರೆ ಇಲಾಖಾ ಅಧಿಕಾರಿಗಳ ಸಾಕ್ಷಿಗಳನ್ನು ವಿಶ್ಲೇಷಿಸಿ ವಿಚಾರಣಾಧಿಕಾರಯು ಇಲಾಖೆಯಿಂದ ಎನ್.ಜಿ.ಓ.ಗಳಿಗೆ ವಹಿಸಲಾದ ಯೋಜನೆಗಳ ಬಗ್ಗೆ ಪತ್ರ ಬಂದಾಗ ಕಾಟಾಚಾರಕ್ಕೆ ತನಿಖೆ ಮಾಡುವಂತೆ ವರದಿ ಕಳುಹಿಸಿರುತ್ತದೆ. ನಿಜವಾಗಿ ಯೋಜನೆಗಳು ಅನುಷ್ಠಾನ ಮಾಡಿದ್ದಾರೆಯೋ ಎಂದು ಪರಿಶೀಲಿಸಲು ಪ್ರಯತ್ನ ಮಾಡಿಲ್ಲ, ಹಾಗೂ ಇಷ್ಟು ಜನ ಸಾಕ್ಷಿಗಳು ಸಾಕ್ಷಿ ನುಡಿದಿದ್ದರಲ್ಲಿ ಆಪಾದಿತರು ಏನು ಮಾಡಿದ್ದಾರೆ. ಯಾವ ನಿಯಮ ಉಲ್ಲಂಘನೆಯಾಗಿದೆ ಎಂದು ಸಾಕ್ಷಿ ಹೇಳಿಲ್ಲ. ಸಾಕ್ಷಿಗಳ ಸಾಕ್ಷಿಯು ಆರೋಪಕ್ಕೆ ಸಂಬಂಧಿಸಿದ ವಿಷಯಗಳಿಗೂ ಒಂದಕ್ಕೊಂದು ಲಿಂಕ್ ಇಲ್ಲದೆ ಸ್ಪಷ್ಟವಾಗುವುದಿಲ್ಲ. ಆದ್ದರಿಂದ ಈ ಆರೋಪವು ರುಜುವಾತಾಗಿಲ್ಲ ಎಂದು ನಿರ್ಣಯಿಸಿದ್ದೇನೆ.

ಆರೋಪ 7 ರಿಂದ 14:– ಇಲಾಖೆಯಲ್ಲಿ ಖಾಲಿಯಿದ್ದ ಹುದ್ದೆಗಳನ್ನು ಸ್ವತಂತ್ರ ಪ್ರಭಾರದ ಮೇಲೆ ತುಂಬುವಲ್ಲಿ ವಿಳಂಬ ಮಾಡಿರುವುದು, ವರ್ಗಾವಣೆ ಮೂಲಕ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಅಡಚಣೆ ಉಂಟು ಮಾಡಿರುವುದು, ಶ್ರೀಮತಿ ಯೋಗಿನಿ ಜಿ. ಶಾನುಬಾಗ್ ಇವರ ಮೇಲೂ ಆಪಾದನೆಯನ್ನು ಸಕಾಲದಲ್ಲಿ ಪರಿಶೀಲಿಸದೇ ಇರುವುದು, ನಿರ್ಮಲದೇವಿ ಮತ್ತು ಇತರ ನೌಕರರ ವಿರುದ್ಧ ದೂರು ವಿಚಾರಣೆಯನ್ನು ಸಮರ್ಪಕವಾಗಿ ಮಾಡದೇ ಇರುವುದು, ಅನುದಾನಿತ ಶಾಲೆಗಳ ಸಿಬ್ಬಂದಿಗಳ ವೇತನ ಬಾಕಿ ಬಿಡುಗಡೆಗೊಳಿಸದೇ ಇರುವುದು ಇತ್ಯಾದಿ ಆರೋಪಗಳ ಕುರಿತು ಶಿಸ್ತು ಪ್ರಾಧಿಕಾರದ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪೈಕಿ ಒಬ್ಬರಾದರೂ ಯಾವುದೇ ಆರೋಪದ ಬಗ್ಗೆ ಏನನ್ನೂ ನುಡಿದಿರುವುದಿಲ್ಲ. ಶ್ರೀ ಯಳ್ಳೂರ ಎಂಬುವವರು ಮಾತ್ರ ಪತ್ರದ ಮೂಲಕ ಉತ್ತರ ಕಳುಹಿಸಿದ್ದು, ಅದರಲ್ಲಿ ತಾನು ಆಪಾದಿತರ ಮೇಲೆ ದೂರು ನೀಡಿದ್ದಲ್ಲಿ, ಅದು ಸರ್ಕಾರಕ್ಕೆ ಸಲ್ಲಿಸಿದ ಮನವಿ ಎಂದಿದ್ದಾರೆ. ಆದ್ದರಿಂದ ಯಾರಿಂದಲೂ ಆಪಾದಿತರ ಮೇಲೆ ಏನೂ ದೂರು ಇರುವುದಿಲ್ಲ. ಹೀಗೆ ಏನೊಂದು ಸಾಕ್ಷಾಧಾರಗಳು ಹಾಜರು ಪಡಿಸದ ಕಾರಣ, ಈ ಎಲ್ಲಾ ಆಪಾದನೆಗಳು ರುಜುವಾತಾಗಿಲ್ಲ ಎಂದು ನಿರ್ಣಯಿಸಿದ್ದೇನೆ.

3. ಮೇಲ್ಕಂಡ ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಿಲಾಯಿತು. ಸ್ವಯಂ ಸೇವಾ ಸಂಘಗಳು ಅವರೊಳಗೆ ದ್ವೇಷಾಸೂಯ ಭಾವನೆಗಳಿಂದ ಅಂದರೆ ಒಂದು ಸಂಸ್ಥೆಗೆ ಯೋಜನೆಯನ್ನು ನೀಡಿದಾಗ, ಇನ್ನೊಂದು ಸಂಸ್ಥೆಗಳು ಮಾಮೂಲಿಯಾಗಿ ದೂರನ್ನು ನೀಡುವ ರೀತಿಯಲ್ಲಿದೆ. ಕೆಲವೊಂದು ದೂರು ನೀಡಿದ ಸಂಸ್ಥೆಗಳಿಗೆ ಕಳುಹಿಸಿದ ಸಾಕ್ಷಿ ನೋಟೀಸ್‌ಗಳು ವಾಪಸ್ಸು ಸಹ ಬಂದಿರುವುದು ವಿಚಾರಣಾ ವರದಿಯಲ್ಲಿ ಉಲ್ಲೇಖವಾಗಿರುತ್ತದೆ. ಸಾಕ್ಷಿ ವಿಚಾರಣೆಗಾಗಿ ಪ್ರಕರಣ ಬಂದಾಗ ಯಾವೊಬ್ಬ ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಾರದೆ ಇರುವುದು ಇದನ್ನು ಪುಷ್ಠೀಕರಿಸುತ್ತದೆ. ಪ್ರಮುಖ ದೂರುದಾರರಾದ ಶ್ರೀ ಎನ್. ಮೂರ್ತಿ ಎಂಬುವರು ತಾನು ಖಾಲಿ ಲೆಟರ್‌ಹೆಡ್ ಅನ್ನು ಕಾರ್ಯದರ್ಶಿಯವರಿಗೆ ಕೊಟ್ಟು ಅದರಲ್ಲಿ ಅವರು ಬೆರಳಚ್ಚು ಮಾಡಿದ ನಂತರ ಒತ್ತಾಯವಾಗಿ ಸಹಿ ಮಾಡಿರುತ್ತೇನೆ ಎಂದು ಹೇಳಿಕೆ ನೀಡಿದಾಗ ವಿಚಾರಣಾಧಿಕಾರಿಯು ಸಹ ಅಸಹಾಯಕರು ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ. ಇಲಾಖಾ ಅಧಿಕಾರಿಗಳು ನುಡಿದ ಸಾಕ್ಷ್ಯಾಧಾರಗಳು ಸಹ ಅವರು ಕಾಟಾಚಾರದಿಂದ ತನಿಖೆ

ಮಾಡಿ ನೀಡಿದ್ದಾರೆಯೇ ವಿನಃ ಯೋಜನೆ ನಿಜವಾಗಿ ಅನುಷ್ಟಾನವಾಗಿದೆಯೇ ಎಂಬುದನ್ನು ಅವರುಗಳು ತನಿಖೆ ಮಾಡಲು ಪ್ರಯತ್ನ ಮಾಡಿಲ್ಲವೆಂದು ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ.

4. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಯಾವುದೆ ಆರ್ಥಿಕ ನಷ್ಟ ಉಂಟಾಗಿದೆಯೆ ಎಂಬ ಬಗ್ಗೆ ಯಾವುದೇ ಪ್ರಸ್ತಾಪ ಆರೋಪಗಳಲ್ಲಿ ಇಲ್ಲದೇ ಇರುವುದರಿಂದ, ಫಲಾನುಭವಿಗಳ ಆಯ್ಕೆಗೆ ಮತ್ತು ಯೋಜನೆಗಳ ಅನುಷ್ಠಾನದ ಬಗ್ಗೆ ಆರೋಪಿತರ ಮೇಲಿನ ಆಪಾದನೆಗಳನ್ನು ರುಜುವಾತು ಪಡಿಸಲು ಸಾಕ್ಷ್ಯಾಧಾರಗಳ ಕೊರತೆಯಿಂದ ಯಾವುದೇ ಆರೋಪಗಳು ರುಜುವಾತಾಗಿಲ್ಲವೆಂಬ ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪದೇ ಇರಲು ಯಾವುದೇ ಸಮರ್ಥನೀಯ ಕಾರಣಗಳು ಕಂಡುಬರದೇ ಇರುವುದರಿಂದ ಸರ್ಕಾರವು, ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 42 ಕೆಇವಿ 2008 ಬೆಂಗಳೂರು, ದಿನಾಂಕ: 22–09–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಎಂ.ವಿ. ವೇದಮೂರ್ತಿ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಹಿಂದಿನ ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ ವಿರುದ್ಧ ದಿನಾಂಕ: 23–05–2008ರ ನೋಟೀಸ್ ಸಂಖ್ಯೆ: ಸಿಆಸುಇ 42 ಕೆಇವಿ 2008 ರಲ್ಲಿ ಮಾಡಲಾದ ಆರೋಪಗಳು ಸಾಭೀತಾಗದ ಕಾರಣ ಇವರನ್ನು ದೋಷಮುಕ್ತಗೊಳಿಸಿ ಆದೇಶಿಸಿದೆ.

ಸದರಿ ಇಲಾಖಾ ವಿಚಾರಣೆಯು ನಡೆಯದಿದ್ದಲ್ಲಿ ಶ್ರೀ ಎಂ.ವಿ. ವೇದಮೂರ್ತಿ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಹಿಂದಿನ ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರಿಗೆ ನಿಯಮಾನುಸಾರ ಯಾವ ಸೌಲಭ್ಯಗಳು ಲಭ್ಯವಾಗುತ್ತಿದ್ದವೋ ಆ ಸೌಲಭ್ಯಗಳು ಲಭ್ಯವಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು–2).

ಪಿ.ಆರ್. ನಂ. 2370

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎ. ಮರೀಗೌಡ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಇವರ ವಿರುದ್ಧ ಲಂಚ ನಿರೋಧ ಕಾಯ್ದೆ, 1988 ರಡಿ ದಾಖಲಾದ ಪ್ರಕರಣದ ಅಭಿಯೋಜನಾ ಮಂಜೂರಾತಿ ಆದೇಶ.

ಓದಲಾಗಿದೆ :

1) ಆರಕ್ಷಕ ಉಪಾಧೀಕ್ಷಕರು ಹಾಗೂ ತನಿಖಾಧಿಕಾರಿಗಳು, ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲೆ, ರಾಮನಗರ ಇವರ ಅಂತಿಮ ವರದಿ ಸಂಖ್ಯೆ: ಕಲೋ/ರಾಜಿ/ಮೊಸಂ 03/2009 (ಅಂತಿಮ ವರದಿ) ದಿನಾಂಕ 10–12–2010.
2) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ 20–01–2011 ರ ಪತ್ರ ಸಂಖ್ಯೆ: Lok/INV(G) /BD-33/Crime-33/CR-03/2009/ ರಾಮನಗರ.

ಪ್ರಸ್ತಾವನೆ :

ಶ್ರೀ ಎ. ಮರೀಗೌಡ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಇವರ ವಿರುದ್ಧ ಮೊಕದ್ದಮೆ ಸಂಖ್ಯೆ: 03/2009 ರಲ್ಲಿ ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲಾ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ: 20–01–2011 (ಮೇಲೆ ಓದಲಾದ ಕ್ರಮಸಂಖ್ಯೆ–2) ರೊಂದಿಗೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988 ರ 19 ಕಲಂನಡಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

2. ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಪತ್ರ ಸಂಖ್ಯೆ: Lok/INV(G) /BD-33/Crime-33/CR-03/2009/ರಾಮನಗರ. ದಿನಾಂಕ 20–01–2011 ರೊಂದಿಗೆ ಕಳಿಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಜಿ. ಎಸ್. ವಿಶಾಲಾಕ್ಷ @ ರವಿ ಬಿನ್ ಜಿ. ಎಸ್. ಸಿದ್ದಯ್ಯ ನ್ಯಾಯಬೆಲೆ ಅಂಗಡಿ ವ್ಯಾಪಾರ, ವಾಸಃ ಗಬ್ಬಾಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ರವರ ಫಿರ್ಯಾದಿ ದಿನಾಂಕ: 03–06–2009.
2. ಪ್ರಥಮ ವರ್ತಮಾನ ವರದಿ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ರಾಮನಗರ ಪ್ರಕರಣ ಸಂಖ್ಯೆ: 03/2009, ದಿನಾಂಕ: 03–06–2009.
3. ಪ್ರಾಯೋಗಿಕ ಪಂಚನಾಮೆ ದಿನಾಂಕ: 03–06–2009.
4. ಟ್ರ್ಯಾಪ್ ಮಹಜರ್ ದಿನಾಂಕ 03–06–2009.
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: PHI/CME/LOK/76/09-10, date/ 19-08-2009.
6. ಕೃತ್ಯ ನಡೆದ ಸ್ಥಳದ ನಕಾಶೆ.

7. ಸಾಕ್ಷಿಗಳ ಹೇಳಿಕೆಗಳು : (1) ಶ್ರೀ ವಿಶಾಲಾಕ್ಷ @ ರವಿ, ಫಿರ್ಯಾದುದಾರರು (2) ಶ್ರೀ ಪಿ. ಸುನೀಲ್ ಕುಮಾರ್, ನೆರಳು ಸಾಕ್ಷಿದಾರರು (3) ಶ್ರೀ ಟಿ. ಹೆಚ್. ನಿರಂಜನಗೌಡ, ಪಂಚ ಸಾಕ್ಷಿದಾರರು (4) ಶ್ರೀ ಆರ್. ರಂಗಯ್ಯ, (5) ಶ್ರೀ ಸಿ. ಪರಶಿವಮೂರ್ತಿ (6) ಶ್ರೀ ಜೆ. ಎಸ್. ಸಿದ್ದಯ್ಯ (7) ಶ್ರೀ ಪಿ. ಕುಮಾರ್ (8) ಶ್ರೀ ಶ್ಯಾಮು (9) ಶ್ರೀ ರವಿ ತಿರ್ಲಾಪುರ (10) ಶ್ರೀ ರಾಮಣ್ಣ (11) ಶ್ರೀ ಅಪ್ಸರ್ ಪಾಷ (12) ಶ್ರೀ ಬಿ. ಜೆ. ಶೇಷಗಿರಿ, ಸಹಾಯಕ ರಾಸಾಯನಿಕ ತಜ್ಞರು (13) ಶ್ರೀ ಪುರ್ಲಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (14) ಶ್ರೀ ಕಾಶಿರಾಂ ಪವಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (15) ಶ್ರೀ ಡಿ. ಪಿ. ಪ್ರಸನ್ನ (16) ಶ್ರೀ ಬಿ. ಶಿವಕುಮಾರಸ್ವಾಮಿ, ಸಿಹೆಚ್‌ಸಿ (17) ಶ್ರೀ ಎಸ್. ಟಿ. ಬೋರೇಗೌಡ, ಸಿಪಿಸಿ (18) ಶ್ರೀ ಹೆಚ್. ಕೆ. ಸುರೇಶ್, ಸಿಪಿಸಿ (19) ಶ್ರೀಮತಿ ಶಶಿಕಲ, ಮಹಿಳಾ ಪಿಸಿ (20) ಶ್ರೀ ಡಿ. ಕೃಷ್ಣಮೂರ್ತಿ, ಸಿಪಿಸಿ ಮತ್ತು (21) ಶ್ರೀ ಕೆ. ಬೀರಯ್ಯ ಸಿಪಿಸಿ.

8. ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳ ಸಂಖ್ಯೆ: 14 (ತನಿಖಾ ವರದಿಯ D-10) ವಿಷಯ: ಫಿರ್ಯಾದುದಾರರ ತಂದೆಯ ಹೆಸರಿನಲ್ಲಿರುವ ನ್ಯಾಯಬೆಲೆ ಅಂಗಡಿಯ ಲೈಸೆನ್ಸನ್ನು ಅಮಾನತ್ತುಪಡಿಸುವ ಬಗ್ಗೆ.

9. ಆಪಾದಿತರ ಸಮಜಾಯಿಷಿ ಹೇಳಿಕೆಗಳು: ಶ್ರೀ ಎ. ಮರೀಗೌಡ (ತನಿಖಾ ವರದಿಯ D-8)

3. ತನಿಖಾಧಿಕಾರಿಗಳಾದ ಶ್ರೀ ಹೆಚ್. ಮಂಜಪ್ಪ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲೆ, ರಾಮನಗರ ಇವರು ಶ್ರೀ ಎ. ಮರೀಗೌಡ, ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ರವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲಾ ಪೊಲೀಸು ಠಾಣೆಯಲ್ಲಿ ಗುನ್ನೆ ಸಂಖ್ಯೆ: 03/2009 ರಲ್ಲಿ ಲಂಚ ನಿರೋಧಕ ಕಾಯ್ದೆ, 1988ರ ಕಲಂ 7, 13(1)(d) ರ ಜೊತೆಯಲ್ಲಿ ಓದಲಾದ ಕಲಂ 13(2) ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

4. ಆಪಾದಿತರಾದ ಶ್ರೀ ಎ. ಮರೀಗೌಡ, ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಇವರು ಫಿರ್ಯಾದಿಯಾದ ಶ್ರೀ ಜಿ. ಎಸ್. ವಿಶಾಲಾಕ್ಷ @ ರವಿ ಬಿನ್ ಜಿ. ಎಸ್. ಸಿದ್ದಯ್ಯ, ನ್ಯಾಯಬೆಲೆ ಅಂಗಡಿ ವ್ಯಾಪಾರ, ವಾಸ: ಗಬ್ಬಾಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ನ್ಯಾಯ ಬೆಲೆ ಅಂಗಡಿಯ ಲೈಸೆನ್ಸನ್ನು ಅಮಾನತ್ತುಪಡಿಸದಿರುವ ಸರ್ಕಾರಿ ಕೆಲಸವನ್ನು ಮಾಡಲು ರೂ. 10000–00 (ಹತ್ತು ಸಾವಿರ ರೂಪಾಯಿಗಳು) ಗಳ ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಸಾರ್ವಜನಿಕ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ವ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ: 03–06–2009 ರಂದು ಬೆಂಗಳೂರು–ಮೈಸೂರು ರಸ್ತೆ, ಲೋಕರುಚಿ (ಕಾಮತ್) ಹೋಟಲ್ ಕಾಂಪೌಂಡ್ ಬಳಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ಎ. ಮರೀಗೌಡ, ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಇವರು ಅಕ್ರಮ ಸಂಭಾವನೆಯಾದ ರೂ. 10000–00 ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಸಾರ್ವಜನಿಕ ಅಧಿಕಾರಿಯ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ ಫಿನಾಪ್ತಲೀನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸಾರ್ವಜನಿಕ ಅಧಿಕಾರಿ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 10000–00 ಗಳನ್ನು ಪಡೆದ ಶ್ರೀ ಎ. ಮರೀಗೌಡರನ್ನು ತನಿಖಾ ತಂಡವು ಹಿಡಿದುಕೊಂಡ ಕೂಡಲೇ ಆರೋಪಿತರು ಲಂಚದ ಹಣವನ್ನು ತಮ್ಮ ಜೀಪಿನ ಸೀಟಿನ ಕೆಳಗೆ ಎಸಿದಿದ್ದುದನ್ನು ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

5. ಮೇಲ್ಕಂಡ ತನಿಖಾ ವರದಿ ಹಾಗೂ ಸಾಕ್ಷ್ಯಾಧಾರಗಳನ್ನು ಸಕ್ಷಮ ಪ್ರಾಧಿಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಫಿರ್ಯಾದಿಯು ಆರೋಪಿ ಶ್ರೀ ಮರೀಗೌಡ ರವರೊಂದಿಗೆ ಮತ್ತು ಪ್ರಕರಣದ ಸಾಕ್ಷಿ ಶ್ರೀ ಸಿ. ಪರಶಿವಮೂರ್ತಿ ರವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯಿಂದ ಆರೋಪಿತ ಅಧಿಕಾರಿಯು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೆ ಆರೋಪಿತ ಅಧಿಕಾರಿಯು, ಲಂಚದ ಹಣವನ್ನು ತನ್ನ ಕೈಯಿಂದ ಪಡೆದಿದ್ದಾಗ, ತನಿಖಾ ತಂಡವು ಹಿಡಿದುಕೊಂಡಾಗ ಹಣವನ್ನು ಜೀಪು ಸೀಟಿನ ಕೆಳಭಾಗಕ್ಕೆ ಎಸೆದಿರುವುದನ್ನು ಗಮನಿಸಿದಲ್ಲಿ, ಅಕ್ರಮ ಹಣವನ್ನು ಪಡೆದಿರುವುದು ದೃಢಪಡುತ್ತದೆ ಹಾಗೂ ಕಂಡಿಕೆ 2 ರಲ್ಲಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ಶ್ರೀ ಎ. ಮರೀಗೌಡ ರವರನ್ನು ಲಂಚ ನಿರೋಧಕ ಕಾಯ್ದೆಯಡಿ ಅಭಿಯೋಜನೆಗೆ ಒಳಪಡಿಸಲು ಸಮರ್ಥನೀಯ ಕಾರಣಗಳು ಇರುವುದನ್ನು ಸರ್ಕಾರವು ಮನಗಂಡಿರುತ್ತದೆ.

6. ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ, 1988 ರ ಕಲಂ 7, 13(1)(d) ರ ಜೊತೆಗೆ ಓದಲಾದ ಕಲಂ 13(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ, ಇವರನ್ನು ಲಂಚ ನಿರೋಧ ಕಾಯ್ದೆ, 1988ರ ಕಲಂ 7, 13(1)(d) ರ ಜೊತೆಗೆ ಓದಲಾದ ಕಲಂ 13(2) ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರವು ಭಾವಿಸಿದೆ.

7. ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಆಪಾದಿತನನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳದ್ದಾಗಿರುತ್ತದೆ. ಆದ್ದರಿಂದ, ಲಂಚ ನಿರೋಧ ಕಾಯ್ದೆ, 1988 ರ ಕಲಂ 19(c) ರ ಅಡಿ ಆಪಾದಿತ ಸಾರ್ವಜನಿಕ ಅಧಿಕಾರಿ ಶ್ರೀ ಎ. ಮರೀಗೌಡ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ ರಾಮನಗರ ರವರನ್ನು ಕಲಂ 7 ಮತ್ತು 13(1)(d) ರ ಜೊತೆಗೆ ಓದಲಾದ ಕಲಂ 13(2) ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 017 ಕೆಇವಿ 2009 ಬೆಂಗಳೂರು, ದಿನಾಂಕ : 21ನೇ ಸೆಪ್ಟೆಂಬರ್ 2011.

ಆರೋಪಿಯಾದ ಶ್ರೀ ಎ. ಮರೀಗೌಡ, ಕೆ.ಎಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಇವರನ್ನು ಹುದ್ದೆಯಿಂದ ತೆಗೆದು ಹಾಕುವ (ವಜಾ ಮಾಡುವ) ಅಧಿಕಾರಿವುಳ್ಳ ಸಕ್ಷಮ ಪ್ರಾಧಿಕಾರವಾದ ಕರ್ನಾಟಕ ಸರ್ಕಾರವು ಶ್ರೀ ಎ. ಮರೀಗೌಡ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಇವರನ್ನು ಲಂಚ ನಿರೋಧಕ ಕಾಯ್ದೆ 1988 ರ ಕಲಂ 7, 13(1)(d) ಜೊತೆಯಲ್ಲಿ ಓದಲಾದ 13(2) ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ, 1977 ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿ ಅಡಿಯಲ್ಲಿ ದಿನಾಂಕ: 21-09-2011 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಪಿ. ಮೋಹನ್ ರಾಜ್
ಸರ್ಕಾರದ ಉಪ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು)

ಪಿ.ಆರ್. 2371

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆಯ ಬೈಲಹೊಂಗಲ ಕಂದಾಯ ತಾಲ್ಲೂಕಿನಲ್ಲಿನ ಹೆಚ್ಚುವರಿ ನೋಟರಿ ಹುದ್ದೆ ಭರ್ತಿ.

ಓದಲಾಗಿದೆ :

1) ಸರ್ಕಾರದ ಆದೇಶ ಸಂಖ್ಯೆ. ಲಾ 114 ಎಲ್‌ಸಿಎಲ್ 2009 ದಿನಾಂಕ: 29-05-2010.
2) ಸರ್ಕಾರದ ಪತ್ರ ಸಂಖ್ಯೆ: ಲಾ 114 ಎಲ್‌ಸಿಎಲ್ 2009 ದಿನಾಂಕ: 18-06-2010, 14-01-2011, 26-02-2011 ಮತ್ತು 25-03-2011.
3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾಂ ಇವರ ಪತ್ರ ಸಂಖ್ಯೆ: ಎಡಿಎಂ. 5752/2011 ದಿನಾಂಕ: 26-04-2011.
4) ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 114 (ಇ) ದಿನಾಂಕ: 24-02-2009.
5) ಅಧಿಸೂಚನೆ ಸಂಖ್ಯೆ: ಲಾ 61 ಎಲ್‌ಸಿಎಲ್ 2009 ದಿನಾಂಕ: 24-07-2010.
6) ಸಂದರ್ಶನ ಸೂಚನಾ ಪತ್ರ ಸಂಖ್ಯೆ: ಲಾ 114 ಎಲ್‌ಸಿಎಲ್ 2009 ದಿನಾಂಕ: 08-07-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 29-05-2010ರ ಸರ್ಕಾರದ ಆದೇಶದಲ್ಲಿ ಬೈಲಹೊಂಗಲ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆ ಸೃಜಿಸಲಾಗಿತ್ತು. ಅದನ್ನು ಭರ್ತಿ ಮಾಡಲು ನೋಟರಿಗಳ ಅಧಿನಿಯಮ/ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳಡಿಯಲ್ಲಿ ಪರಿಶೀಲಿಸಿ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾಂ ಇವರನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ: 18-06-2010 ಹಾಗೂ ತದನಂತರ ಜ್ಞಾಪನ ಪತ್ರಗಳಲ್ಲಿ ಕೋರಲಾಗಿತ್ತು. ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ: 26-04-2011ರ ಪತ್ರದಲ್ಲಿ 21 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾಂರವರು ಸಲ್ಲಿಸಿದ್ದರು. ಆ ಪ್ರಸ್ತಾವನೆಯನ್ನು ಮೇಲೆ (4)ರಲ್ಲಿ ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುವಂತೆ ಮೇಲೆ (6)ರಲ್ಲಿ ಓದಲಾದ ದಿನಾಂಕ: 08-07-2011 ರ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ಆಯ್ಕೆಪಟ್ಟಿಯನ್ನು ಸಲ್ಲಿಸಿದೆ.

ಸಂದರ್ಶನ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 114 ಎಲ್‌ಸಿಎಲ್ 2009 ಬೆಂಗಳೂರು, ದಿನಾಂಕ : 21ನೇ ಸೆಪ್ಟೆಂಬರ್ 2011.

ನೋಟರಿಗಳ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಶ್ರೀ ರವಿ ಮಲ್ಲಪ್ಪ ಮೆಟಗುಡ್, ವಕೀಲರು, S/o ಮಲ್ಲಪ್ಪ ಚನ್ನಬಸಪ್ಪ ಮೆಟಗುಡ್, ಹೌಸ್ ನಂ. 1448, ಬಜಾರ್ ರೋಡ್, ಬೈಲಹೊಂಗಲ, ಬೆಳಗಾಂ ಜಿಲ್ಲೆರವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಬೈಲಹೊಂಗಲ ಕಂದಾಯ ತಾಲ್ಲೂಕಿನ ನೋಟರಿಯನ್ನಾಗಿ ನೇಮಿಸಿದೆ.

ಸದರಿ ವಕೀಲರು ಲೆಕ್ಕ ಶೀರ್ಷಿಕೆ 0070-ಇತರೆ ಆಡಳಿತಾತ್ಮಕ ಸೇವೆಗಳು-01-ನ್ಯಾಯ ಪರಿಪಾಲನೆ-501-0-ಇತರೆ ಸ್ವೀಕೃತಿಗಳು-06 ಇತರೆ ಬಾಬ್ತುಗಳಿಗೆ (0070-01-501-0-06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ. 1000.00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರ ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952ರ ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಆರ್. ಶಕುಂತಲ
ಸರ್ಕಾರದ ಅಧೀನ ಕಾರ್ಯದರ್ಶಿ, (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 2372

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಗುಡೇಗೌಡ, ಪಿಎಸ್ಐ (ನಿವೃತ್ತ) ಇವರ ವಿರುದ್ಧದ ಶಿಸ್ತು ಕ್ರಮದಲ್ಲಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :

1) ಪೊಲೀಸ್ ಮಹಾ ನಿರ್ದೇಶಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಅಪೀಲು (1)30/2008-09 ದಿನಾಂಕ 08-11-2008 ಮತ್ತು 07-02-2009.
2) ಕಾರಣ ಕೇಳುವ ನೋಟೀಸ್ ದಿನಾಂಕ 16-01-2010.
3) ಶ್ರೀ ಗುಡೇಗೌಡ, ಪಿಎಸ್ಐ (ನಿವೃತ್ತ) ರವರ ಸಮಜಾಯಿಷಿ ದಿನಾಂಕ 25-02-2010.
4) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ ಪಿಎಸ್‌ಸಿ 125 ಸಿಎನ್ಎಸ್ 2010 ದಿನಾಂಕ 23-10-2010.

ಪ್ರಸ್ತಾವನೆ :

ದಿನಾಂಕ 29-07-2006 ರಂದು ಶ್ರೀಮತಿ ಮೇರಿ ಕೋಂ ಸ್ಟ್ಯಾನ್ಲಿ, ಅಂಬೇಡ್ಕರ ನಗರ, ಕೋಲಾರ ಇವರು ಕೋಲಾರ ನಗರ ಠಾಣೆಗೆ ಹಾಜರಾಗಿ ತಮಗೆ ಪರಿಚಯವಿರುವ ವೆಂಕಟೇಶ್ ಎಂಬುವವರಿಗೆ ತಾನು ರೂ. 60,000-00 ಗಳನ್ನು ನೀಡಿದ್ದು, ಅವರು ಹಣವನ್ನು ಹಿಂದಿರುಗಿಸಿರುವುದಿಲ್ಲ. ಆದ್ದರಿಂದ ಅವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ ನೀಡಿದ ದೂರಿನ ಮೇರೆಗೆ ಶ್ರೀ ಗುಡೇಗೌಡ, ಪಿ.ಎಸ್.ಐ. ರವರು ಠಾಣಾ ಮೊ.ನಂ. 85/2006 ಕಲಂ 31, 504, ಐಪಿಸಿ ರೀತ್ಯ ಪ್ರಕರಣ ದಾಖಲು ಮಾಡಿಕೊಂಡು, ತನಗೆ ರೂ. 5000-00 ಲಂಚ ನೀಡಿದರೆ ಮಾತ್ರ ಪ್ರಕರಣದ ಆರೋಪಿ ಶ್ರೀ ವೆಂಕಟೇಶ್‌ನನ್ನು ದಸ್ತಗಿರಿ ಮಾಡಿ ಮುಂದಿನ ಕ್ರಮ ಜರುಗಿಸುವುದಾಗಿ ನುಡಿದಿರುತ್ತಾರೆ. ಲಂಚ ಕೊಡಲು ಇಷ್ಟವಿಲ್ಲದ ಕಾರಣ ಫಿರ್ಯಾದುದಾರರು ಲೋಕಾಯುಕ್ತ ಪೊಲೀಸ್ ಠಾಣೆಗೆ ಕಾನೂನು ಕ್ರಮ ಕೈಗೊಳ್ಳಲು ಕೋರಿದ್ದು, ಈ ಸಂಬಂಧವಾಗಿ ಕೋಲಾರ ಲೋಕಾಯುಕ್ತ ಪೊಲೀಸ್ ಠಾಣೆ ಮೊ.ನಂ.11/2006 ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ರ ಕಲಂ 7, 13 (1)(ಡಿ) ಜೊತೆಯಲ್ಲಿ ಓದಲಾದ ಕಲಂ 13 (2) ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ತನಿಖೆಯನ್ನು ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಲಾಗಿದೆ ಎಂದು ಮೇಲೆ ಓದಲಾದ (1)ರ ಡಿಜಿ ಮತ್ತು ಐಜಿಪಿ ರವರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಶ್ರೀ ಗುಡೇಗೌಡ, ಪಿಎಸ್ಐ, ಕೋಲಾರ ನಗರ ಠಾಣೆ ರವರು ದಿನಾಂಕ 30-09-2006 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214(2)(ಬಿ) ಪ್ರಕಾರ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಡಿವೈ.ಎಸ್.ಪಿ. (ಡಿ.ಇ) ಕೇಂದ್ರ ವಲಯ, ಬೆಂಗಳೂರು ರವರನ್ನು ಇಲಾಖಾ ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ಅನುಮತಿ ನೀಡುವಂತೆ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಡಿಜಿ ಮತ್ತು ಐಜಿಪಿ ರವರ ಪತ್ರ ದಿನಾಂಕ 07-02-2009 ರಲ್ಲಿ ಶ್ರೀ ಗುಡೇಗೌಡ, ನಿವೃತ್ತ ಪಿಎಸ್ಐ ರವರಿಗೆ ನ್ಯಾಯಾಲಯವು ಈ ಕೆಳಕಂಡಂತೆ ಶಿಕ್ಷೆ ವಿಧಿಸಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿರುವುದನ್ನು ಕೈಬಿಡಬಹುದಾಗಿದೆ ಎಂದು ತಿಳಿಸಿರುತ್ತಾರೆ.

1) ಲಂಚ ನಿರೋಧ ಕಾಯ್ದೆ ಕಲಂ 7 ರನ್ವಯ ಎಸಗಿರುವ ಶಿಕ್ಷಾರ್ಹವಾದ ಅಪರಾಧಕ್ಕೆ ಎರಡು ವರ್ಷಗಳ ಕಾಲ ಕಾರಾಗೃಹವಾಸದ ಶಿಕ್ಷೆಯನ್ನು ಹಾಗೂ ರೂ. 5000-00 ಗಳ ದ್ರವ್ಯ ದಂಡವನ್ನು ವಿಧಿಸಲಾಗಿದೆ. ದ್ರವ್ಯದಂಡವನ್ನು ಕಟ್ಟಲು ತಪ್ಪಿದರೆ ಆರು ತಿಂಗಳ ಕಾಲ ಹೆಚ್ಚಿನ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸತಕ್ಕದ್ದು.

2) ಲಂಚ ನಿರೋಧ ಕಾಯ್ದೆ ಕಲಂ 13 (2) ರನ್ವಯ ಎಸಗಿರುವ ಶಿಕ್ಷಾರ್ಹವಾದ ಅಪರಾಧಕ್ಕೆ ಎರಡು ವರ್ಷಗಳ ಕಾಲ ಕಠಿಣ ಕಾರಾಗೃಹವಾಸದ ಶಿಕ್ಷೆಯನ್ನು ಹಾಗೂ ರೂ. 5000-00 ಗಳ ದ್ರವ್ಯದಂಡವನ್ನು ವಿಧಿಸಲಾಗಿದೆ. ದ್ರವ್ಯದಂಡವನ್ನು ಕಟ್ಟಲು ತಪ್ಪಿದರೆ ಆರು ತಿಂಗಳ ಕಾಲ ಹೆಚ್ಚಿನ ಕಠಿಣ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸತಕ್ಕದ್ದು.

ಶ್ರೀ ಗುಡೇಗೌಡ, ಪಿ.ಎಸ್.ಐ. ರವರು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸುವುದನ್ನು ಕೈಬಿಟ್ಟು, ಕೋಲಾರ ಪ್ರಧಾನ ಸತ್ರ ನ್ಯಾಯಾಲಯವು ಶಿಕ್ಷೆ ವಿಧಿಸಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 214(1)(ಎ) ರನ್ವಯ ಅವರ ಪಿಂಚಣಿಯಲ್ಲಿ ಪ್ರತಿ ತಿಂಗಳೂ ಎರಡು ವರ್ಷಗಳ ಅವಧಿಯವರೆಗೆ ರೂ. 500/- ಗಳನ್ನು ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ನಿರ್ಣಯಿಸಿ ಆರೋಪಿತರಿಗೆ ನ್ಯಾಯಾಲಯದ ತೀರ್ಪಿನ ಪ್ರತಿಯೊಂದಿಗೆ ಮೇಲೆ ಓದಲಾದ (2)ರ ಪತ್ರವನ್ನು ಡಿಜಿ ಮತ್ತು ಐಜಿಪಿ ರವರ ಮುಖಾಂತರ ಜಾರಿಗೊಳಿಸಲಾಗಿರುತ್ತದೆ. ಇದಕ್ಕೆ ಪ್ರತ್ಯುತ್ತರವಾಗಿ ಆರೋಪಿತ ಅಧಿಕಾರಿಯವರು ಮೇಲೆ ಓದಲಾದ (3)ರ ಪತ್ರದಲ್ಲಿ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಸಮಜಾಯಿಷಿಯಲ್ಲಿ ಪರಿಶೀಲಿಸಬಹುದಾದ ಯಾವುದೇ ಅಂಶಗಳು ಕಂಡು ಬಂದಿಲ್ಲವಾದ್ದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮ, 1957ರ ನಿಯಮ 214(ಎ) ಪ್ರಕಾರ ಸದರಿ ಆರೋಪಿತ ಅಧಿಕಾರಿಯ/ಪಿಂಚಣಿಯಲ್ಲಿ ಶೇಕಡ 25ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಅದರನ್ವಯ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 256 ಪೊಸಇ 2011 ಬೆಂಗಳೂರು, ದಿನಾಂಕ : 17ನೇ ಸೆಪ್ಟೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಗುಡೇಗೌಡ, ಪಿ.ಎಸ್.ಐ. (ನಿವೃತ್ತ) ಇವರ ವಿರುದ್ಧದ ಆರೋಪವು ಸಾಬೀತಾಗಿದ್ದು ದಿನಾಂಕ 30-09-2006 ರಂದು ಸದರಿಯವರು ಸೇವೆಯಿಂದ ವಯೋ ನಿವೃತ್ತರಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, 1957ರ ನಿಯಮ 214(ಎ) ರನ್ವಯ ಅವರ ನಿವೃತ್ತಿ ವೇತನದಿಂದ ಶೇಕಡ 25ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಪಿ.ಆರ್. 2373

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕಿರಣ್ ನೀಲಗಾರ, ಪಿ.ಎಸ್.ಐ., ಡಿ.ಸಿ.ಐ.ಬಿ. ಘಟಕ, ರಾಯಚೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ ಜಿಲ್ಲೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ (3)/ಪಿಆರ್/58/2009 (ಓ.ಬಿ. 697/2010, ದಿನಾಂಕ 30-6-2010.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ : ಅಪೀಲು /67/ಈವ/2010/4901, (ಓ.ಬಿ. : 783/ಈವ/ 2010) ದಿನಾಂಕ 17-12-2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 01-4-2011.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) /5/2011-12, ದಿನಾಂಕ 21-06-2011.

ಪ್ರಸ್ತಾವನೆ :

ಶ್ರೀ ಕಿರಣ್ ನೀಲಗಾರ, ಪಿ.ಎಸ್.ಐ., ಇವರು ಈ ಹಿಂದೆ ಕೊಪ್ಪಳ ಜಿಲ್ಲೆ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿಯಲ್ಲಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

<u>ದೋಷಾರೋಪಣೆ</u> :

"ಗಂಗಾವತಿ ಗ್ರಾಮೀಣ ಠಾಣೆ, ಕೊಪ್ಪಳ ಜಿಲ್ಲೆ ಗುನ್ನೆ ನಂ. 5/08 ಕಲಂ 143, 147, 323, 324, 504, 506 ಸಹಿತ 149 ಐ.ಪಿ.ಸಿ. ಪ್ರಕರಣದಲ್ಲಿ ಕ್ರಮಬದ್ಧವಾದ ತನಿಖೆಯನ್ನು ಮಾಡದೇ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ್ದಿರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 30.6.2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಆರು ತಿಂಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ 17-12-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 34 ಪೊಸಿಅ 2011, ಬೆಂಗಳೂರು, ದಿನಾಂಕ 03ನೇ ಅಕ್ಟೋಬರ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕಿರಣ್ ನೀಲಗಾರ, ಪಿ.ಎಸ್.ಐ., ಡಿ.ಸಿ.ಐ.ಬಿ. ಘಟಕ, ರಾಯಚೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.ನಂ. 2474 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಅಶ್ವಥರೆಡ್ಡಿ, ಮಾಜಿ ಪಿ.ಸಿ.-9618, ಸಿ.ಸಿ.ಬಿ. ಬೆಂಗಳೂರು ಹಾಗೂ ಶ್ರೀ ಪ್ರಸನ್ನ, ಮಾಜಿ ಪಿ.ಸಿ.-9563, ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಬೆಂಗಳೂರು, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ : 05/ಡಿಇ/1/ಆರ್6/2009, ದಿನಾಂಕ 13-4-2010.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು ಇವರ ಆದೇಶ ಸಂಖ್ಯೆ : ಅಪೀಲು (04)/07/2010-11, (ಓ.ಬಿ. ಸಂಖ್ಯೆ : 23/2010-11) ದಿನಾಂಕ 16-09-2010.
3. ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 23-11-2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)/72/2010-11, ದಿನಾಂಕ 22-01-2011.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 85 ಸಿಎನ್‌ಎಸ್ 11, ದಿನಾಂಕ 08-09-2011.

ಪ್ರಸ್ತಾವನೆ :

ಶ್ರೀ ಅಶ್ವಥರೆಡ್ಡಿ, ಇವರು ಸಿ.ಸಿ.ಬಿ.ಯಲ್ಲಿ ಹಾಗೂ ಶ್ರೀ ಪ್ರಸನ್ನ ಇವರುಗಳು ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಅಧಿಕಾರ ದುರುಪಯೋಗವೆಸಗಿದ

ಕಾರಣದ ಮೇಲೆ ಇನ್ಸ್ಪೆಕ್ಟರ್ ಪಿ.ಸಿ. ರವರೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ಮತ್ತು 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ನಾರಾಯಣಸ್ವಾಮಿ ಪಿ.ಸಿ. 9558 ಮತ್ತು ಶ್ರೀ ಪ್ರಸನ್ನ ಪಿ.ಸಿ. 9563, ಆದ ನೀವು ಹೈಗ್ರೌಂಡ್ಸ್ ಪೊಲೀಸ್ ಠಾಣೆ ಹಾಗೂ ಶ್ರೀ ಅಶ್ವಥ್ ರೆಡ್ಡಿ ಪಿ.ಸಿ. 9618, ಮಹಿಳೆ ಮತ್ತು ಮಾದಕ್ ದ್ರವ್ಯ ದಳ, ಸಿ.ಸಿ.ಬಿ. ಬೆಂಗಳೂರು ನಗರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೀರಿ. ನೀವುಗಳು ದಿನಾಂಕ 19-02-2008 ರಂದು ರಾತ್ರಿ ಸುಮಾರು 9-30 ಗಂಟೆ ಸಮಯದಲ್ಲಿ ಸಾರ್ವಜನಿಕರಾದ ಶ್ರೀನಿವಾಸ್, ಸುಧಾಕರ ರೆಡ್ಡಿ ಹಾಗೂ ವೆಂಕಟನಾರಾಯಣ ಎಂಬುವವರೊಂದಿಗೆ ಸೇರಿಕೊಂಡು ಸಂಚು ನಡೆಸಿ, ಒಂದು ಟಾಟಾ ಸುಮೋದಲ್ಲಿ ಪಿರ್ಯಾದುದಾರರಾದ ಶ್ರೀ ಸಂಜೀವ್ ಎ. ಕುರುಪ್, ನಂ.-ಸಿ.-66, ಕೆ.ಪಿ.ಡಬ್ಲ್ಯೂ.ಡಿ. ಕ್ವಾಟ್ರಸ್, ಜೀವನಭೀಮಾನಗರ, ಬೆಂಗಳೂರು-75 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಶಿವಮೊಗ್ಗ ಪೊಲೀಸರೆಂದು ಸುಳ್ಳು ಹೇಳಿ ಶ್ರೀ ಸಂಜೀವ್ ಎ. ಕುರುಪ್ ರವರ ಕೈಗೆ ಬೇಡಿ ತೊಡಿಸಿ ಅವರ ಮನೆಯಲ್ಲಿದ್ದ ಬೆಲೆ ಬಾಳುವ ಒಂದು ಹಳೇ ದೇವರ ಫೋಟೋವನ್ನು ಬಲವಂತವಾಗಿ ವಶಕ್ಕೆ ಪಡೆದು ನಂತರ ಶ್ರೀ ಸಂಜೀವ್ ಎ. ಕುರುಪ್ ಹಾಗೂ ಅವರ ಪತ್ನಿಯನ್ನು ಸದರಿ ಟಾಟಾ ಸುಮೋ ವಾಹನದಲ್ಲಿ ಕುಳ್ಳಿರಿಸಿಕೊಂಡು ಹೋಗಿ ಏರ್‌ಪೋರ್ಟ್ ರಸ್ತೆಯಲ್ಲಿ ಟಾಟಾ ಸುಮೋದಿಂದ ಅವರಿಬ್ಬರನ್ನು ಕೆಳಗೆ ಇಳಿಸಿ ನೀವು ಪರಾರಿಯಾಗಿರುತ್ತೀರಿ. ನೀವು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕರ ರಕ್ಷಣೆ ಅಪರಾಧ ತಡೆಯುವುದು ಅಪರಾಧಿಗಳನ್ನು ಪತ್ತೆ ಹಚ್ಚುವ ಕಾರ್ಯ ನಿರ್ವಹಿಸಬೇಕಾಗಿದ್ದರೂ ಸಹ ನೀವುಗಳೇ ದರೋಡೆ ನಡೆಸಿ, ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ, ಅಧಿಕಾರ ದುರುಪಯೋಗ ಹಾಗೂ ಗಂಭೀರ ಸ್ವರೂಪದ ಕರ್ತವ್ಯಲೋಪವೆಸಗಿ ಪೊಲೀಸ್ ಇಲಾಖೆಯ ಘನತೆಗೆ ಧಕ್ಕೆ ತಂದಿರುತ್ತೀರಿ. ಈ ಬಗ್ಗೆ ಶ್ರೀ ಸಂಜೀವ್ ಎ. ಕುರುಪ್ ರವರು ನೀಡಿದ ದೂರಿನ ಮೇರೆಗೆ ನಿಮ್ಮ ವಿರುದ್ಧ ಜೆ.ಬಿ. ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 78/08, ಕಲಂ 419-420-120(ಬಿ) 395 ಐ.ಪಿ.ಸಿ. ಪ್ರಕಾರ ಪ್ರಕರಣ ದಾಖಲಾಗಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರುಗಳ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 13-4-2010ರ ಆದೇಶದಲ್ಲಿ ಅರ್ಜಿದಾರರುಗಳನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ದಿನಾಂಕ 28-01-2009 ರಿಂದ ಆದೇಶ ಹೊರಡಿಸಿದ ದಿನಾಂಕದವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರುಗಳ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ 16-9-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರುಗಳಿಗೆ ವಿಧಿಸಿರುವ ದಂಡನೆಯು ಹೆಚ್ಚಿನದಾಗಿದೆ ಎಂದು ಪರಿಗಣಿಸಿ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 179 ಪೊಸಿಅ 2010, ಬೆಂಗಳೂರು, ದಿನಾಂಕ 30ನೇ ಸೆಪ್ಟೆಂಬರ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಅಶ್ವಥರೆಡ್ಡಿ, ಮಾಜಿ ಪಿ.ಸಿ.-9618, ಸಿ.ಸಿ.ಬಿ. ಬೆಂಗಳೂರು ಹಾಗೂ ಶ್ರೀ ಪ್ರಸನ್ನ, ಮಾಜಿ ಪಿ.ಸಿ.-9563, ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಬೆಂಗಳೂರು, ಇವರುಗಳಿಗೆ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನಾದೇಶವನ್ನು ಮಾರ್ಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

i. ಶ್ರೀ ಅಶ್ವಥರೆಡ್ಡಿ ಮಾಜಿ ಪಿ.ಸಿ. ಹಾಗೂ ಶ್ರೀ ಪ್ರಸನ್ನ, ಮಾಜಿ ಪಿ.ಸಿ. ಇವರುಗಳನ್ನು ಸೇವೆಗೆ ಪುನರ್ ನೇಮಕ ಮಾಡಲಾಗಿದೆ.
ii. ಇವರುಗಳ ವೇತನಗಳನ್ನು ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ಅನ್ವಯಿಸುವ ಕಾಲಿಕ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ 5 ವರ್ಷಗಳ ಅವಧಿಗೆ ಸಂಚಿತ ಪರಿಣಾಮ ರಹಿತವಾಗಿ ಕೆಳಗಿಳಿಸಲಾಗಿದೆ.
iii. ಸೇವೆಯಿಂದ ವಜಾಗೊಂಡ ದಿನಾಂಕದಿಂದ ಪುನರ್ ಸ್ಥಾಪನೆಗೊಂಡ ದಿನಾಂಕದವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies non) ಎಂದು ಪರಿಗಣಿಸುವುದು.
iv. ದಿನಾಂಕ 28-01-2009 ರಿಂದ 13-4-2010ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ.

(ಪೊಲೀಸ್ ಸೇವೆಗಳು).

ಪಿ.ಆರ್.ನಂ. 2475

ಒಳಾಡಳಿತ ಸಚಿವಾಲಯ

ವಿಷಯ : ಉಪ ನಿರ್ದೇಶಕರು, ಡಿ.ಎನ್.ಎ. ಕೇಂದ್ರ, ಬೆಂಗಳೂರು ಘಟಕಕ್ಕೆ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ವಿತ್ತಾಧಿಕಾರವನ್ನು ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಒಇ 112 ಪೊಸಿಲಿ 2009, ದಿನಾಂಕ 17-09-2009.

2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ : ಬಿಯುಡಿ-4/ 33/2009-10, ದಿನಾಂಕ 06-10-2010 ಮತ್ತು 31-05-2011.

ಪ್ರಸ್ತಾವನೆ :

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ನ್ಯಾಯ ವಿಜ್ಞಾನ ಪ್ರಯೋಗಾಲಯದ ಡಿ.ಎನ್.ಎ. ಕೇಂದ್ರದ ಸಮರ್ಪಕ ಕಾರ್ಯನಿರ್ವಹಣೆಗೆ ಡಾ॥ ಟಿ.ಆರ್. ಕುಮಾರಿ, ಉಪ ನಿರ್ದೇಶಕರವರನ್ನು ವರ್ಗಾಯಿಸಿ, ಸದರಿ ಹುದ್ದೆಯಲ್ಲಿ ಅವರ ತತ್ಸಮಾನ ಹುದ್ದೆಯಲ್ಲಿರುವ ಇತರೆ ಅಧಿಕಾರಿಗಳು ಚಲಾಯಿಸುತ್ತಿರುವ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರವನ್ನು ಚಲಾಯಿಸಲು ಮಂಜೂರಾತಿಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಓದಲಾದ (2)ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಡಿ.ಎನ್.ಎ. ಕೇಂದ್ರದ ಆಡಳಿತವನ್ನು ಸಮರ್ಪಕವಾಗಿ ನಡೆಸಲು, ಕಛೇರಿಗೆ ಬೇಕಾದ ಸಾಧನ ಸಲಕರಣೆ ಮತ್ತು ಉಪಕರಣಗಳನ್ನು ಖರೀದಿಸಲು ಹಾಗೂ ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರುಗಳಿಗೆ ವೇತನ ಮತ್ತು ಇನ್ನಿತರ ಭತ್ಯೆಗಳನ್ನು ಬಟವಾಡೆ ಮಾಡಲು ಹಾಗೂ ಘಟಕದ ಆಡಳಿತಾತ್ಮಕ ಕಾರ್ಯಚಟುವಟಿಕೆಗಳಿಗಾಗಿ ಅನುದಾನ ಉಪಯೋಗಿಸಬೇಕಾಗಿರುವುದರಿಂದ ಉಪ ನಿರ್ದೇಶಕರು, ಡಿ.ಎನ್.ಎ. ಕೇಂದ್ರ, ಬೆಂಗಳೂರು ರವರಿಗೆ ಲೆಕ್ಕ ಶೀರ್ಷಿಕೆ 2055-00-116-0-01- ಎಫ್.ಎಸ್.ಎಲ್. ಅಡಿಯಲ್ಲಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಆರ್ಥಿಕ ವಿತ್ತಾಧಿಕಾರವನ್ನು ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 275 ಪಿಓಪಿ 2010, ಬೆಂಗಳೂರು, ದಿನಾಂಕ 29ನೇ ಸೆಪ್ಟೆಂಬರ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಉಪ ನಿರ್ದೇಶಕರು, ಡಿ.ಎನ್.ಎ. ಕೇಂದ್ರ, ಬೆಂಗಳೂರು ಇವರಿಗೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 49 ಮತ್ತು 50 ರನ್ವಯ ಮಹಾಲೇಖಪಾಲರ ಪ್ರಾಧಿಕಾರ ಪಡೆಯುವ ಷರತ್ತಿಗೆ ಒಳಪಟ್ಟು ಲೆಕ್ಕ ಶೀರ್ಷಿಕೆ 2055-00-116-0-01 ಫೋರೆನ್ಸಿಕ್ ಸೈನ್ಸ್ ಅಡಿಯಲ್ಲಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯನ್ನಾಗಿ ನೇಮಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 197 ವೆಚ್ಚ 11/2011, ದಿನಾಂಕ 17-09-2011 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ರಾಜಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.
(ಪೊಲೀಸ್ ವೆಚ್ಚ)

ಪಿ.ಆರ್.ನಂ. 2476

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಖಾನಾಪುರ ತಾಲ್ಲೂಕು ಖೈರವಾಡ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಪ್ರ/2011-12/2557, ದಿನಾಂಕ : 16-5-2011.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ಖಾನಾಪುರ ತಾಲ್ಲೂಕು ಖೈರವಾಡ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಖೈರವಾಡ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ದಿನಾಂಕ : 16-5-11ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ 9-1-2003ರಂದು ಹೊರಡಿಸಿದೆ. ಭೂಸ್ವಾಧೀನಾಧಿಕಾರಿಗಳು ದಿನಾಂಕ : 23-11-2005 ರಂದು ರಚಿಸಿದ ಐತೀರ್ಪಿನಲ್ಲಿ ಪ್ರತಿ ಎಕರೆಗೆ ರೂ. 30.000/- ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಧನ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಖಾನಾಪುರ ಸಿವಿಲ್ (ಹಿರಿಯ ವಿಭಾಗ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣವನ್ನು ದಾಖಲಿಸಿದ್ದು, ನ್ಯಾಯಾಲಯವು ಪ್ರತಿ ಎಕರೆಗೆ ರೂ. 1,74,250/-ಗಳನ್ನು ನಿಗದಿಪಡಿಸಿದೆ. ಸಿವಿಲ್ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ : ಆರ್‌ಡಿ 1173 ಎಲ್‌ಸಿಬಿ 2009, ದಿನಾಂಕ : 31-7-2010ರಲ್ಲಿ ಅಭಿಪ್ರಾಯ ನೀಡಿದೆ. ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ :

ಕ್ರ.ಸಂ.	ಎಲ್‌ಎಸಿ	ಖೈರವಾಡ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	190/08	54/2+5+7+9ಬಿ	2–14	1205211
2	191/08	54/8, 54/10	1–05	579889
3	192/08	54/3	0–19	238365
4	193/08	54/1	0–30	379398
5	194/08	55/2	0–22	283501
6	195/08	55/3	0–30	383715
7	196/08	54/6	1–06	592776
8	197/08	54/2+5+7+9ಎ	1–15	696882
9	198/08	56/1ಎ, 56/1ಬಿ	3–14	1714194
10	199/08	54/1ಎ	5–00	2575495
11	200/08	54/4	0–39	502571
		ಒಟ್ಟು		**9151997**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 62 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 22ನೇ ಸೆಪ್ಟೆಂಬರ್ 2011.

ಬೆಳಗಾಂ ಜಿಲ್ಲೆ, ಖಾನಾಪುರ ತಾಲ್ಲೂಕು ಖೈರವಾಡ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಖೈರವಾಡ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ರೂ. 91,51,997–00 ಗಳನ್ನು (ತೊಂಭತ್ತೊಂದು ಲಕ್ಷದ ಐವತ್ತೊಂದು ಸಾವಿರದ ಒಂಭೈನೂರ ತೊಂಭತ್ತೇಳು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 9151,997–00ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20–10–2010 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 2377

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ).

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ನಾಗರಾಳು ಗ್ರಾಮ ಪಂಚಾಯತಿ ಕಬ್ಬಿನಹಳ್ಳಿ ಹತ್ತಿರ ಕಬ್ಬಿನಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009(1), ದಿನಾಂಕ : 16–9–2010.

2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರುರವರ ಪತ್ರ ಸಂಖ್ಯೆ : ಮುಸ(ದ)/ತಾಂ.2/ಸ.ಇಂ.6/ಚಿಕ್ಕಮಗಳೂರು/ಕಡೂರು/ಕಬ್ಬಿನಹಳ್ಳಿ ಇ–ಟೆಂಡರ್/2006/2011/2951, ದಿನಾಂಕ 16–8–2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಎ.ಐ.ಬಿ.ಪಿ. ಕಾರ್ಯಕ್ರಮದಡಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ನಾಗರಾಳು ಗ್ರಾಮ ಪಂಚಾಯತಿ ಕಬ್ಬಿನಹಳ್ಳಿ ಹತ್ತಿರ ಕಬ್ಬಿನಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ ರೂ. 87.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಹಾಸನ ಜಿಲ್ಲಾ ಟೆಂಡರ್ ಬುಲೆಟಿನ್	25–6–2011
ಚಿಕ್ಕಮಗಳೂರು ಜಿಲ್ಲಾ ಟೆಂಡರ್ ಬುಲೆಟಿನ್	20–6–2011
ಉದಯವಾಣಿ ದಿನಪತ್ರಿಕೆ	23–6–2011
ದಿ ಹಿಂದೂ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್	24–6–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರಲ್ಲಿ ಒಬ್ಬರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ನ್ನು ದಿನಾಂಕ : 14–7–2011 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 85,98,300/–	
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 115,14,694/–	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಜೆ.ಆರ್. ಗೌರೀಶ್, 1ನೇ ದರ್ಜೆ ಗುತ್ತಿಗೆದಾರರು	124,78,336/–	45.1256 ಹೆಚ್ಚು	8.3688 ಹೆಚ್ಚು

ಮೇಲ್ಕಂಡಂತೆ ಶ್ರೀ ಜೆ.ಆರ್. ಗೌರೀಶ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 8.3688 ರಷ್ಟು ಹೆಚ್ಚಾಗಿರುತ್ತದೆ. ಈ ಟೆಂಡರನ್ನು ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 8.00% ಹೆಚ್ಚಿನ ದರಗಳಿಗೆ ಅಂದರೆ ರೂ. 124,35,870/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 66 ಅಪಿಬಂ 2011 (ತಾಂತ್ರಿಕ), ಬೆಂಗಳೂರು, ದಿನಾಂಕ : 23ನೇ ಸೆಪ್ಟೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ನಾಗರಾಳು ಗ್ರಾಮ ಪಂಚಾಯತಿ ಕಬ್ಬಿನಹಳ್ಳಿ ಹತ್ತಿರ ಕಬ್ಬಿನಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 115,14,694/– ಗಳ ಮೇಲೆ ಶೇ. 8.00% ಹೆಚ್ಚಿನ ದರಗಳಿಗೆ ಅಂದರೆ ರೂ. 124,35,870/–ಗಳಿಗೆ (ರೂ. ಒಂದು ಕೋಟಿ ಇಪ್ಪತ್ನಾಲ್ಕು ಲಕ್ಷ ಮೂವತ್ತೈದು ಸಾವಿರದ ಎಂಟು ನೂರ ಎಪ್ಪತ್ತು ರೂಪಾಯಿಗಳು ಮಾತ್ರ) ಕಾಮಗಾರಿಯನ್ನು ಶ್ರೀ ಜೆ.ಆರ್. ಗೌರೀಶ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20–1–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪಿ.ಆರ್. 2378

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ).

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ದೇವನೂರು ಹತ್ತಿರ ವೇದಾ ಹಳ್ಳಕ್ಕೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009(2), ದಿನಾಂಕ : 16–9–2010.

2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರುರವರ ಪತ್ರ ಸಂಖ್ಯೆ : ಮುಸ(ದ)/ತಾಂ.2/ಸ.ಇಂ.6/ಚಿಕ್ಕಮಗಳೂರು/ಕಡೂರು/ದೇವನೂರು ಇ–ಟೆಂಡರ್/1977/2011/2946, ದಿನಾಂಕ : 16–8–2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಎ.ಐ.ಬಿ.ಪಿ. ಕಾರ್ಯಕ್ರಮದಡಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ದೇವನೂರು ಹತ್ತಿರ ವೇದಾ ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ ರೂ. 88.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಹಾಸನ ಜಿಲ್ಲಾ ಟೆಂಡರ್ ಬುಲೆಟಿನ್	25–6–2011
ಚಿಕ್ಕಮಗಳೂರು ಜಿಲ್ಲಾ ಟೆಂಡರ್ ಬುಲೆಟಿನ್	20–6–2011
ಉದಯವಾಣಿ ದಿನಪತ್ರಿಕೆ	23–6–2011
ದಿ ಹಿಂದೂ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್	24–6–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಮೂವರು ಗುತ್ತಿಗೆದಾರರು ಭಾಗವಹಿಸಿದ್ದು ಇವರಲ್ಲಿ ಒಬ್ಬರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ನ್ನು ದಿನಾಂಕ : 25–7–2011 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 86,85,070/–	
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 116,05,752/–	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
